# ಮನಸ್ಸಿನ ವಿಶ್ವರೂಪ

**ಮ. ಗೋ. ಹೆಗಡೆ**

**ಮ**ನುಷ್ಯನನ್ನು ಉನ್ನತ ಮಟ್ಟಕ್ಕೆ ಏರಿಸುವ ಅವ್ಯಕ್ತ ತತ್ವವೊಂದು ಅವನನ್ನು ಅಧಃಪತನಕ್ಕೂ ನೂಕಬಲ್ಲದು. ಗೌರವ ನೆಮ್ಮದಿಯಿಂದ ಬದುಕಲು ನೆರವಾಗುವ ಆ ತತ್ವ, ಅಗೌರವ, ಅಶಾಂತಿಯಿಂದ "ಭೂಮಿಗೆ ಭಾರ ಕೂಳಿಗೆ ದಂಡ" ವಾಗುವಂತೆಯೂ ಪರಿವರ್ತಿಸಬಲ್ಲದು. ಒಮ್ಮೆ 'ಸ್ನೇಹಿತ'ನಂತೆ ಮರುಕ್ಷಣದಲ್ಲಿ ವೈರಿಯಂತೆ, ರೂಪಾಂತರವಾಗುವ, ಆ ತತ್ವದ ಪ್ರಭಾವವಲಯದಲ್ಲೇ ಮನುಷ್ಯ ಬದುಕಬೇಕಾಗಿದೆ. ಎರಡು ದೋಣಿಗಳ ಮೇಲೆ ಮನುಷ್ಯನು ಕಾಲು ಇಕ್ಕುವಂತೆ ಮಾಡುವ ಆ ತತ್ವವು 'ದ್ವೈತ'ದ ಮೂಲ ಕಾರಣ. ಅದೇ ಮನುಷ್ಯನ 'ಮನಸ್ಸು'.

ಸಾಮಾನ್ಯವಾಗಿ ಎಲ್ಲಾ ಜೀವಿಗಳಿಗೂ ಇರುವ 'ಮನಸ್ಸು' ಮನುಷ್ಯನಲ್ಲಿ ಮಾತ್ರ ಚರ್ಚಾಸ್ಪದವೆನಿಸುತ್ತದೆ. ಕಣ್ಣಿಗೆ ಕಾಣದಿದ್ದರೂ ಅದು ಮನುಷ್ಯನನ್ನು ಪ್ರತಿಕ್ಷಣದಲ್ಲೂ ಕುಣಿಸುವುದನ್ನು ವೀಕ್ಷಿಸಿದರೆ ಅದರ ವ್ಯಾಪಕತ್ವ ಹಾಗೂ ಶಕ್ತಿಯ ಅರಿವಾಗದಿರದು.

ಮನುಷ್ಯನಿಗೆ ಮನಸ್ಸೊಂದಿಲ್ಲದಿದ್ದರೆ ಖಂಡಿತವಾಗಿ ಅವನ ಜೀವಿತಾವಧಿ ನೆಮ್ಮದಿ ಮತ್ತು ಶಾಂತಿಯಿಂದ ರಚನಾತ್ಮಕ ಚಟುವಟಿಕೆಗಳಲ್ಲಿಯೇ ವಿನಿಯೋಗ ವಾಗುತ್ತಿತ್ತು.

"…..ಧ್ಯಾನ ಕೋಟಿ ರ್ಮನೋಲಯಃ…." ಎಂಬ ಆರ್ಯೋಕ್ತಿಯೊಂದು ಮನಸ್ಸಿಲ್ಲದ ಸ್ಥಿತಿಯ ಮಹತ್ವವನ್ನು ಮನೋಜ್ಞವಾಗಿ ಸೂಚಿಸುತ್ತದೆ.

ಮನುಷ್ಯನು ಕಾಡನ್ನು ಕಡಿದು ಗಿರಣಿ ಕಾರ್ಖಾನೆಗಳಂಥ ಔದ್ಯೋಗಿಕ ಕೇಂದ್ರಗಳನ್ನು ಸ್ಥಾಪಿಸುವುದಕ್ಕಿಂತ ಅವನ 'ಮನಸ್ಸ'ನ್ನು ನಾಶಮಾಡಿ ಆ ಸ್ಥಾನದಲ್ಲಿ 'ಬುದ್ಧಿ'ಯ ಸ್ಥಾಪನೆ ಮಾಡಿದರೆ ಬಹುಶಃ ಮೊದಲಿನದಕ್ಕಿಂತ ಅನೇಕ ಪಟ್ಟು ಹೆಚ್ಚು ಪ್ರಯೋಜನವಾಗುತ್ತಿತ್ತು.

ಮನುಷ್ಯನು ಪೂರ್ವಾಗ್ರಹ ಪೀಡಿತನಾಗಿ, ಯಾವುದೋ ವೈಷಮ್ಯದಿಂದ ಮತ್ತೊಬ್ಬರನ್ನು ಕೊಲ್ಲುವುದಕ್ಕಿಂತ ತನ್ನ ಮನಸ್ಸನ್ನು ಕೊಂದು ಹಾಕಿದರೆ ಅದೊಂದು ಪವಾಡ ಸದೃಶ ಕಾರ್ಯವಾಗುತ್ತಿತ್ತು. ಅದು ಅತ್ಯುತ್ಕೃಷ್ಟ ಸಾಧನೆಯೂ ಹೌದು. ಆ ಸಾಧನೆಯ ಮುಂದೆ ಮತ್ತಾವ ಸಾಧನೆಯೂ ಸರಿಸಾಟಿಯಾಗಲಾರದು. ಆದರೆ, ಇಲ್ಲಿಯವರೆಗೂ ಯಾರೂ 'ಮನಸ್ಸ'ನ್ನು ಕೊಂದವರೇ ಇಲ್ಲ. ಅಣುಬಾಂಬನ್ನು ಸಿಡಿಸಿ ದೇಶವನ್ನೇ ನಾಶಮಾಡುವ 'ಅನಧಿಕೃತ ಧೀರ'ರು ನಮ್ಮಲ್ಲಿ ಅನೇಕರಿದ್ದರೂ 'ಮನಸ್ಸ'ನ್ನೇ ನಾಶಮಾಡುವ ಯಾವ ಬಾಂಬನ್ನು ಯಾರೂ ತಯಾರಿಸಿಲ್ಲ. ಯಾಕೆಂದರೆ ಬಾಂಬಿನಿಂದಲೂ ಅದನ್ನು ಕೊಲ್ಲಲು ಸಾಧ್ಯವಿಲ್ಲ.

ಹಾಗಾದರೆ ಮನಸ್ಸಿಗೆ ಇರುವ ರೂಪಗಳಾದರೂ ಎಷ್ಟು? ಬಹುಶಃ ಅದನ್ನೂ ಸಹ ಗಣನೆ ಮಾಡಲು ಸಾಧ್ಯವಿಲ್ಲ. ಮನಸ್ಸು ಅನಂತ ರೂಪಗಳನ್ನು ತಾಳುತ್ತದೆ. ಅದನ್ನೇ ಮನಸ್ಸಿನ

ಬಂಕಿಕೊಡ್ಲ – 581 319, ಉತ್ತರಕನ್ನಡ



ವಿಶ್ವರೂಪ ಎಂದು ಪರಿಗಣಿಸಬೇಕು.

ದೇಶ ದ್ರೋಹದ ಮನಸ್ಸು, ಸ್ವಾಮಿ ದ್ರೋಹಿಯ ಮನಸ್ಸು, ವಿಶ್ವಾಸ ಘಾತಕ ಮನಸ್ಸು, ಅಧಿಕಾರಕ್ಕಾಗಿ ಹೊಂಚು ಹಾಕುವ ಮನಸ್ಸು, ಮುಗ್ಧ ಸೊಸೆಯನ್ನು ಅಮಾನವೀಯವಾಗಿ ನಡೆಸಿಕೊಳ್ಳುವ ಅತ್ತೆಯ ಮನಸ್ಸು, ತಾಯಿಗೆ ಸಮಾನಳಾದ ಅತ್ತೆಯನ್ನು ಕತ್ತೆಯಂತೆ ದುಡಿಸುವ ಸೊಸೆಯ ಮನಸ್ಸು, ಹೆಣ್ಣನ್ನು ಕೊಟ್ಟ ಮಾವನ ಮನೆಯನ್ನೇ ತೊಳೆಯುವ ಅಳಿಯನ ಮನಸ್ಸು, ಹಿತೈಷಿಯಂತೆ ನಟಿಸಿ ಹಿತಶತ್ರುವಾಗುವ 'ಮಿತ್ರ'ನೆಂಬವನ ಮನಸ್ಸು. ಅಪ್ರಾಪ್ತ ವಯಸ್ಸಿನ ಬಾಲಕಿಯ ಮೇಲೆ ಅತ್ಯಾಚಾರ ವೆಸಗಿ ವಿಕೃತಾನಂದವನ್ನು ಅನುಭವಿಸುವ ವ್ಯಭಿಚಾರಿಯ ಮನಸ್ಸು, ಅನ್ಯಾಯ - ಅಧರ್ಮ - ಅನೀತಿಗಳನ್ನೇ ಒಳಗಿಂದೊಳಗೆ ಮನ್ನಿಸುವ ನ್ಯಾಯಾಧೀಶನ ಮನಸ್ಸು. ಜಾತೀಯತೆಯನ್ನು, ಪಾಠಮಾಡುವ ಪವಿತ್ರ ಸ್ಥಾನದಲ್ಲಿ, ಎತ್ತಿ ತೋರಿಸುವ ಶಿಕ್ಷಕ - ಶಿಕ್ಷಕಿಯರ ಮನಸ್ಸು, ಕೊಲೆ ಮಾಡಿಯೂ ನಿರಪರಾಧಿಯೆಂದು ನ್ಯಾಯಾಲಯದಿಂದ ಹೊರ ಬರುವವನ ಮನಸ್ಸು, ಅಮಾಯಕರನ್ನು ಹಿಡಿದು ತಂದು ಸ್ಟೇಶನ್ನಿನ ಕತ್ತಲೆ ಕೋಣೆಯಲ್ಲಿ ಥಳಿಸುವ ಪೊಲೀಸನ (ಅಧಿಕಾರಿ) ಮನಸ್ಸು, ಗಂಡನಿಗೆ ಮೋಸ ಮಾಡುವ ಹೆಂಡತಿಯ ಮನಸ್ಸು, ಕಲಬೆರಕೆ ಮಾಡಿದ ಅಪರಾಧವನ್ನೇ ಮೆರೆಯುವ ವ್ಯಾಪಾರಿಯ ಮನಸ್ಸು… ಹೀಗೆ ಪಟ್ಟಿ ಮಾಡುತ್ತ ಹೋದರೆ ಮನಸ್ಸಿನ ವಿಶ್ವರೂಪ ಅನಂತವಾದೀತು.

"…ಇಂದ್ರಿಯಾಣಾಂ ಮನಶ್ಚಾಸ್ಮಿ…" ಎಂದು ಭಗವಾನ್ ಶ್ರೀಕೃಷ್ಣ ಹೇಳುತ್ತಾನೆ. ಇದು ಮೇಲೆ ವಿವರಿಸಿದ ವಿಶ್ವರೂಪದ ಮನಸ್ಸಲ್ಲ; ಶ್ರೀಕೃಷ್ಣ ವಿವರಿಸಿದ್ದು ಪ್ರಾಂಜಲ ಮನಸ್ಸನ್ನು ಸತ್ಕಾರ್ಯದಿಂದ ಸದುದ್ದೇಶವನ್ನು ಮಾನವರ ಹಿತಕ್ಕಾಗಿ ಸಾಧಿಸುವ ಮನಸ್ಸು ಅದು.

ಪ್ರಾಂಜಲ ಮನಸ್ಸಿಗೂ ಮೇಲೆ ವಿವರಿಸಿದ ವಿಶ್ವರೂಪದ ಮನಸ್ಸಿಗೂ ಏನು ವ್ಯತ್ಯಾಸ?

ಮೂರು ಗುಣಗಳಿಂದಾವೃತವಾದ ಭೌತಿಕ ಪ್ರಪಂಚದಲ್ಲಿ (ಸತ್ವ - ರಜ - ತಮ) ತಮೋಗುಣದಲ್ಲಿಯೇ ತಲ್ಲೀನವಾಗುವ ಮನಸ್ಸು ಅಂಧಕಾರದಲ್ಲಿ ಕಾಲಯಾಪನೆ ಮಾಡುತ್ತದೆ. ಅಲ್ಲಿ ಮನಸ್ಸು ಧರಿಸುವ ರೂಪವೇ ಅದರ ವಿಶ್ವರೂಪ.

ಪ್ರಾಂಜಲ ಮನಸ್ಸು ಸಾತ್ವಿಕ ಪಥದಲ್ಲಿ ಸದಾ ಸಂಚರಿಸುತ್ತಿರುವುದು ಅಲ್ಲಿರುವುದೇ ಬೆಳಕು. ಅಲ್ಲಿ ಅಂಧಃಕಾರದ ಲವಲೇಶವೂ ಇಲ್ಲ. ಅಲ್ಲಿ ಮನಸ್ಸೇ ಬೆಳಕು ಅಥವಾ ಬೆಳಕೇ ಮನಸ್ಸು. ಈ ಸಂದರ್ಭದಲ್ಲಿ ಹೆಸರಾಂತ ಕವನದ ಸಾಲೊಂದು ನೆನಪಾಗುತ್ತದೆ.

ಕರುಣಾಳು ಬಾ ಬೆಳಕೆ

ಮುಸುಕಿದೀ ಮಬ್ಬಿನಲಿ ಕೈ ಹಿಡಿದು

ನಡೆಸೆನ್ನನು…

(ಇದನ್ನು ದಿ। ಬಿ. ಎಂ. ಶ್ರೀಕಂಠಯ್ಯನವರು - ಕಾರ್ಡಿನಲ್ ನ್ಯೂಮೆನ್ನನ ಇಂಗ್ಲಿಷ್ ಕವನ

Lead kindly light

Amid the encircling gloom

lead thou me on.. ವನ್ನು ಕನ್ನಡಕ್ಕೆ ಅನುವಾದಿಸಿದ್ದಾರೆ)

ಮನಸ್ಸಿನ ಆ ಸ್ಥಿತಿಯನ್ನು ಉದ್ದೀಪನಗೊಳಿಸಲು ಪ್ರತಿಯೊಬ್ಬ ಮನುಷ್ಯನೂ ಪ್ರಯತ್ನಿಸಬೇಕು.

ಮನಸ್ಸು ಸಾತ್ವಿಕಗುಣದ ಅತ್ಯುತ್ಕೃಷ್ಟತೆ ತಲುಪಿದಾಗ ಅದರಲ್ಲಿ ಅದು ತನ್ನ ವಿಶೇಷವಾದ ವಿಶ್ವರೂಪದ ಇನ್ನೊಂದು ಮುಖವನ್ನು ತೋರಿಸಬಲ್ಲದು.

ತಂದೆಯನ್ನೇ ತಿದ್ದುವ ಮಗನ ಮನಸ್ಸು, ಗುರುವನ್ನೇ ಬೆರಗುಗೊಳಿಸುವ ಶಿಷ್ಯನ ಮನಸ್ಸು, ದೇಶವನ್ನೇ ಪ್ರೀತಿಸುವ ಪ್ರಜೆಯ ಮನಸ್ಸು, ಲೇಖಕನಾಗಿ ಸಮಸ್ತ ವಿಶ್ವದ ಚರಾಚರ ಜೀವಿಯ ಉದ್ದೀಪನಗೊಳ್ಳುವ ಲೇಖನವನ್ನು ಬರೆಯುವ ಮನಸ್ಸು, ಗುರು - ಹಿರಿಯರನ್ನು ಸತ್ಪುರುಷರನ್ನು ಗೌರವಿಸುವ ಮನಸ್ಸು, ಸತ್ಯ - ಧರ್ಮ - ನ್ಯಾಯಕ್ಕಾಗಿ ಪ್ರಾಣವನ್ನೇ ಪಣಕ್ಕಿಡುವ ನ್ಯಾಯಾಧೀಶನ ಮನಸ್ಸು, ವಿಜ್ಞಾನಿಯಾಗಿ ರಚನಾತ್ಮಕ ಚಟುವಟಿಕೆಗಳಿಗೆ ಅನುಕೂಲ ಮಾಡಿಕೊಡುವ ಸಂಶೋಧನೆ ಮಾಡುವ ಮನಸ್ಸು, ಕಲಾರಾಧಕನಾಗಿ ಹಿಂದೆ ಆಗಿ ಹೋದ ಅನೇಕ ಪುಣ್ಯಾತ್ಮರ ಜೀವನವನ್ನು ಪುನರುಜ್ಜೀವಿಸುವ ಮನಸ್ಸು, ಆದರ್ಶ ಗುರುವಾಗಿ, ತತ್ವಮಸಿಯಂತಹ ಅರಿವನ್ನು ಮೂಡಿಸುವ ಮನಸ್ಸು, ಸಮಸ್ತ ಲೋಕದ ಹಿತ ಚಿಂತಕನಾಗಿ - ಲೋಕಾ ಸಮಸ್ತಾ ಸುಖಿನೋ ಭವಂತು ತತ್ವವನ್ನು ಪ್ರತಿಪಾದಿಸುವ ಮನಸ್ಸು, ಒಡೆಯುವ ಮನೆಯನ್ನು ಕೂಡಿಸುವ ಸೊಸೆಯ ಮನಸ್ಸು, ಭವರೋಗ ಹಾಗೂ ಮನೋರೋಗಗಳಿಗೆ ಔಷಧಿಯನ್ನೀಯುವ ಭಗವಂತನ ಮನಸ್ಸು.... ಹೀಗೆ ಮನಸ್ಸಿನ ಇನ್ನೊಂದು ಬದಿಯ ವಿಶ್ವರೂಪ ಪ್ರಾರಂಭಗೊಳ್ಳುತ್ತದೆ.

ಸಾತ್ವಿಕ ದಿಶೆಯಲ್ಲಿ ಚಲಿಸುವ ಮನಸ್ಸು ಲಯದ ಅಂಚಿಗೆ ಬಂದಿರುತ್ತದೆ. ಖಂಡಿತವಾಗಿ ಈ ಲೋಕದ ಅಸಂಖ್ಯ ಜನರ ಮೇಲೆ ಅದರ ಅದ್ಭುತ ಪರಿಣಾಮ ಆಗುತ್ತದೆ.

ಮನಸ್ಸಿಗೆ ಅಸ್ತಿತ್ವವಿಲ್ಲದ ಅಸ್ತಿತ್ವವಿರುತ್ತದೆ. ಅಂದರೆ ಅದನ್ನು ಕೊಂದ ನಂತರವೂ ಅದರ ಅವಶೇಷ ಹಾಗೇ ಇರುತ್ತದೆ.

ಕೊಂದರೂ ಸಾಯದಿರುವುದು ಮನಸ್ಸು. ಆದುದರಿಂದ ಈಗ ಉಳಿದಿರುವುದೊಂದೇ ದಾರಿ ಅಂದರೆ ಮನಸ್ಸಿನಿಂದಲೇ ಮನಸ್ಸನ್ನು ರೂಪಾಂತರಗೊಳಿಸುವುದು.

ತಾಮಸೀ ವೃತ್ತಿಯಿಂದ ಸಾತ್ವಿಕ ವೃತ್ತಿಗೆ ಬಂದಾಗ - ಮನಸ್ಸು ಅಪಾಯಕಾರಿಯಾಗಲಾರದು. ಇಲ್ಲಿ ಅದರ ವಿಶ್ವರೂಪ, ವಿಶ್ವದ ಹಿತಚಿಂತನೆಯೇ ಆಗಿರುವುದರಿಂದ ಅದಕ್ಕೆ ನಾವು ಸಾಕಷ್ಟು ಕಾಲಾವಕಾಶವನ್ನಿತ್ತು ಪೋಷಿಸಬೇಕು.

ಸಾತ್ವಿಕ ಮನಸ್ಸಿನ ವಿಶ್ವರೂಪಕ್ಕೆ ಪೋಷಣೆಯಾಗಿ ಬರುವ ಒಂದೇ ಒಂದು ಅಂಶವೆಂದರೆ 'ಶಾಂತಿ'.

ಮನುಷ್ಯನ ಮನಸ್ಸಿಗೆ 'ಶಾಂತಿ' ತೀರ ಅಗತ್ಯ. ಆದುದರಿಂದಲೇ ಭಗವಾನ್ ಶ್ರೀಕೃಷ್ಣ "ಶ್ರೇಯೋ ಹೀ ಜ್ಞಾನ ಮಭ್ಯಾಸಾತ್..." ಎಂದು ಹೇಳುತ್ತ... ತ್ಯಾಗ, ಶಾಂತಿ ಅನಂತರಮ್



ಎಂದು ಶಾಂತಿಯ ಮಹತ್ವವನ್ನು ನಮಗರಿವಾಗುವಂತೆ ಮಾಡುತ್ತಾನೆ.

ಶಾಂತ ಸ್ಥಿತಿಯಲ್ಲಿ ಮನಸ್ಸು ನೆಲೆಸಿದ್ದರೆ ಅದು ಯಾರಿಗೂ ಎಂದೆಂದಿಗೂ ಕೇಡು ಬಗೆಯಲಾರದು; ಬದಲಾಗಿ ಸಮಸ್ತ ಲೋಕದ ಕಲ್ಯಾಣಕ್ಕಾಗಿ ಪ್ರಕೃತಿ ತೋರಿಸುವ ಮಾರ್ಗವನ್ನು ಶೋಧಿಸುತ್ತದೆ.

ಪ್ರತಿಯೊಂದು ಧಾರ್ಮಿಕ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳ ಅಂತ್ಯದಲ್ಲಿ ಶಾಂತಿ ಮಂತ್ರವನ್ನು ಪಠಿಸುವ ಉದ್ದೇಶ ಇದೇ.

ಮನಸ್ಸು ರಚನಾತ್ಮಕ ಕಾರ್ಯಗಳಲ್ಲಿ ತತ್ಪರತೆ ಪಡೆಯಲು ಅದಕ್ಕೆ ಅತ್ಯಗತ್ಯವಾದ ವಿಟಮಿನ್ ಎಂದರೆ ಶಾಂತಿ.

ಮನುಷ್ಯನು ಮನಃ ಶಾಂತಿಯನ್ನು ಮೂರು ವಿಧಾನಗಳ ತಾಪದಿಂದ ಕಳೆದುಕೊಳ್ಳುತ್ತಾನೆ. ಅದೇ ಆಧಿದೈವಿಕ ಆಧಿಭೌತಿಕ ಮತ್ತು ಆಧ್ಯಾತ್ಮಿಕ ಇವುಗಳನ್ನು ಒತ್ತಟ್ಟಿಗೆ ಸೇರಿಸಿ, ತಾಪತ್ರಯಗಳೆಂದು ಪರಿಗಣಿಸಿ, ಅವುಗಳಿಂದ ಮನಸ್ಸು ಮುಕ್ತವಾಗಲು ಮೂರು ಸಲ ಓಂ ಶಾಂತಿಃ ಶಾಂತಿಃ ಶಾಂತಿಃ ಎಂದು ಶಾಂತಿಗಾಗಿ ಪ್ರಾರ್ಥಿಸುತ್ತಾರೆ.

ಭಗವಂತನ ವಿಶ್ವರೂಪಕ್ಕೂ ಮನಸ್ಸಿನ ವಿಶ್ವರೂಪಕ್ಕೂ ಇರುವ ಹಲವಾರು ವ್ಯತ್ಯಾಸಗಳಲ್ಲಿ ಪ್ರಮುಖವಾದ ಒಂದು ವ್ಯತ್ಯಾಸವೆಂದರೆ -

ಭಗವಂತನ ವಿಶ್ವರೂಪ ಒಂದೇ ಮಜಲಿನಲ್ಲಿ ವ್ಯಕ್ತವಾದರೆ, ಮನಸ್ಸಿನ ವಿಶ್ವರೂಪ ಮೂರು ಮಜಲುಗಳಲ್ಲಿ ಪ್ರವಹಿಸುತ್ತದೆ. ಅಂದರೆ ಮನಸ್ಸಿನ ವಿಶ್ವರೂಪವು ಭಗವಂತನ ವಿಶ್ವರೂಪಕ್ಕಿಂತ ಹೆಚ್ಚು ಎಂದು ಇದರ ಅರ್ಥವಲ್ಲ. ವಿಶ್ವರೂಪದಲ್ಲಿ ಮಜಲುಗಳ ಸಂಖ್ಯೆ ಹೆಚ್ಚಿದಂತೆ ಅದರ ಪ್ರಭಾವ ಅಷ್ಟೇ ಪ್ರಮಾಣದಲ್ಲಿ ಕಡಿಮೆಯೆಂದು ತಿಳಿಯಬೇಕು.

ಮನಸ್ಸಿನ ವಿಶ್ವರೂಪದ ಪರಿಚಯ ನಮಗೆಲ್ಲರಿಗೂ ಇರಬೇಕೇ ವಿನಾ ಅದರಲ್ಲಿ ವಿಶ್ವಾಸವಿಡುವಾಗ ಹೆಚ್ಚು ವಿಚಾರ ಮಾಡಬೇಕಾಗುತ್ತದೆ.

ಸಾತ್ವಿಕ ಮಟ್ಟದಲ್ಲಿರುವ ಮನಸ್ಸಿನ ವಿಶ್ವರೂಪವು ತಾಮಸೀ ಮಟ್ಟಕ್ಕಿಂತ ಹೆಚ್ಚು ಶ್ರೇಯಸ್ಕರ.

ಮನಬಂದಂತೆ ವರ್ತಿಸುವುದು ಮನಸ್ಸು ಹೇಳಿದಂತೆ ಕೇಳುವುದು ... ಇವೆಲ್ಲ ಆಘಾತಕಾರಿ ಸಂಗತಿಗಳಾಗಬಹುದು.

ಯಾವುದು ಬಿಡುಗಡೆಗಾಗಿ ಮಾರ್ಗದರ್ಶನ ಮಾಡುತ್ತದೆಯೋ ಅಂತಹ ಮನಸ್ಸನ್ನು ನಾವು ರೂಪಿಸಿಕೊಳ್ಳಬೇಕು ಹಾಗೂ ಯಾವುದು ಬಂಧನಕ್ಕೆ ಅನುವು ಮಾಡಿಕೊಡುತ್ತದೆಯೋ ಅಂತಹ ಮನಸ್ಸಿನ ಬಗ್ಗೆ ವಿಶೇಷ ಜಾಗರೂಕತೆ ವಹಿಸಬೇಕು.

ಯಾವುದೇ ಸಂದರ್ಭದಲ್ಲಿಯೂ ಮನಸ್ಸು ಮನುಷ್ಯತ್ವದ ಪ್ರತೀಕವಾಗಬೇಕು ಎಂಬ ಸಂಗತಿಯನ್ನು ಮಾತ್ರ ಎಂದೆಂದೂ ಮರೆಯಕೂಡದು.

★★★

# ಪೂರ್ಣಾಯ ಹರಯೇ ನಮಃ

ಉಡುಪಿ ರಾಮನಾಥ ಆಚಾರ್ಯ, ಶತಾವಧಾನೀ

ದೇವತೆಗಳನ್ನು ಹೊರಗಿನಿಂದ ಬಲಪಡಿಸಲು ಅಂದು ಭಗವಂತ ಸಮುದ್ರ ಮಥನದ ಉದ್ಯೋಗವನ್ನು ನೀಡಿದ. ಮಥನದಲ್ಲಿ ದೇವತೆಗಳೂ ಸೇರಿಕೊಂಡರು. ಎಲ್ಲ ಔಷಧಿಗಳ ಮೇಳನದಿಂದ ಉಂಟಾದ ಅಮೃತವನ್ನು ಪಡೆದು ಸುರರು ಗೆದ್ದರು; ಅಸುರರು ಸೋತರು.

ಇಂದು ಮಾನವರನ್ನು ಒಳಗಿನಿಂದ ಬಲಪಡಿಸಲು ಶ್ರೀಕೃಷ್ಣ ಶಾಸ್ತ್ರ ಸಾಗರವನ್ನು ಕಡೆಯಲು ತಾನೇ ತೊಡಗಿದ್ದಾನೆ. ಯಾವ ಮಾನವನನ್ನೂ ಸಹಾಯಕ್ಕೆ ಕರೆದಿಲ್ಲ; ಯಾವೊಬ್ಬನನ್ನೂ ನಂಬುವಂತಿಲ್ಲ. ಹಿಂಬದಿಯಿಂದ ಅಸುರರಿಗೆ ಮಣೆ ಹಾಕುವವರಿವರು; ಅಸುರ ಪ್ರಶಸ್ತಿ ಪುರಸ್ಕೃತರು. ಅಮೃತದ ಹಂಚಿಕೆಗೆ ಹರಿ ತಾನೆ ವೇಷತೊಟ್ಟಂತೆ ಇಲ್ಲಿ ಶ್ರೀಕೃಷ್ಣ, ಇಳಿದು ಬರುವಾಗ ತನ್ನವನನ್ನೆ ಬಣ್ಣ ಹಾಕಿಸಿ ಕರೆ ತಂದಿದ್ದಾನೆ. ಹೆಣ್ಣು - ಹೊನ್ನು - ಮಣ್ಣು ಇದರ ವಾಸನೆ ಬಿಟ್ಟವರಿಂದ ತನ್ನ ಪ್ರತಿಷ್ಠೆಯನ್ನು - ಪ್ರಚಾರವನ್ನು ಬಯಸಿದ್ದಾನೆ. ತಾನು ಕಡೆದು ನೀಡಿದ ಗೀತಾಮೃತವನ್ನು ವಿಶ್ವದಾದ್ಯಂತ ತನ್ನವರಿಗೆ ಹಂಚುವಂತೆ ಕರೆ ನೀಡಿದ್ದಾನೆ.

ಮುಖಪುಟ ಲೇಖನ

ಆಚಾರ್ಯಮಧ್ವರು, ಚಂದ್ರವಂಶದಲ್ಲಿ ಬಂದ ಆ ತೇಜೋಮಯನ ಪೂರ್ಣಚಂದ್ರಮುಖದಿಂದ ಇಳಿದು ಬಂದ ಅಮೃತ ಸಂದೇಶವನ್ನು ಮಂದಿಗೆ ಬಿಂದು - ಬಿಂದುವಾಗಿ ಉಣಿಸಿದರು.

ತನ್ನ ದುಃಖವನ್ನು ತಾನೇ ಜೀವ ಸ್ವಲ್ಪವೂ ಪರಿಹರಿಸಿಕೊಳ್ಳಲಾರ.

ತನಗೆ ಬೇಕಾದ ಸುಖವನ್ನು ತಾನೇ ಜೀವ ಒಂದಿನಿತೂ ಪಡೆಯಲಾರ.

ಸಂಪೂರ್ಣವಾಗಿ ಸಂಸಾರ ಪರಿಹಾರಕನು ಶ್ರೀ ಹರಿಯು ಮಾತ್ರ.

ನಮ್ಮೆಲ್ಲರ ಎಲ್ಲ ಬಯಕೆಗಳನ್ನು ಪೂರ್ಣಗೊಳಿಸುವವನೂ ಹರಿಯೆ.

ಸರ್ವೇಷ್ಟವಾದ ಪೂರ್ಣ ಸುಖಲಾಭ ಹರಿಯಿಂದ ಮಾತ್ರ ಲಭ್ಯ.

ಎಂದೆಂದೂ ಹರಿಯ ಪೂರ್ಣತೆಯನ್ನು ತಿಳಿ.

ಪೂರ್ಣ ವಿಶ್ವದಲ್ಲಿ ಪರಿಪೂರ್ಣ ತತ್ವವೆನಿಸಿದ ಹರಿಗೆ ನಮಿಸು.

'ಶ್ರೀ ಭಾಗವತಮ್', ಮ. ನಂ. 1-146, ಮುಚ್ಲುಕೋಡು, ಉಡುಪಿ

# ವೇದದಲ್ಲಿ ಬ್ರಹ್ಮ ಚಿಂತನೆ

ಡಾ। ಎನ್. ಕೆ. ಉದಯಶಂಕರ್

**ಭಾಗ - ೩**

## ೮. ಹವಿಸ್ಸು

ಬ್ರಹ್ಮ ಶಬ್ದಕ್ಕೆ ಹವಿಸ್ಸೆನ್ನುವ ಅರ್ಥವೂ ಕಂಡು ಬರುತ್ತದೆ. ಯಜ್ಞ ಪ್ರಕ್ರಿಯೆಯಲ್ಲಿ ಯಜಮಾನನು ಖಾದ್ಯ, ಪೇಯಗಳನ್ನು ದೇವತೆಗಳಿಗೆ ಅರ್ಪಿಸುವನು. ದೇವತೆಗಳ ಶಕ್ತಿವೃದ್ಧಿಗಾಗಿ ಕೊಡುವ ಈ 'ಹವಿಸ್ಸ'ನ್ನೇ ಬ್ರಹ್ಮಶಬ್ದವಾಚ್ಯವಾಗಿ ಸಾಯಣರು ವೇದಾರ್ಥವನ್ನು ಹೇಳಿದ್ದಾರೆ.

**ಸಹಸ್ರಂ ಸಾಕಮರ್ಚತ ಪರಿಷ್ಟೋಭತಃ ವಿಂಶತಿಃ ।**

**ಶತೈನಮನ್ವನೋನವುರಿಂದ್ರಾಯ ಬ್ರಹ್ಮೋದ್ಯತಮರ್ಚನ್ನನು ಸ್ವರಾಜ್ಯಂ ॥**

"ಇಂದ್ರನ ಸ್ವಾಮಿತ್ವವನ್ನು ಪ್ರಕಟಿಸುತ್ತಾ ಸಾವಿರಾರು ಜನರು ಇವನನ್ನು ಅರ್ಚಿಸಿದರು. ಋತ್ವಿಜರಾದಿಯಾದ ಇಪ್ಪತ್ತು ಜನರು ಸ್ತುತಿಸಿದರು. ನೂರು ಜನ ಋಷಿಗಳು ಪುನಃ ಪುನಃ ಸ್ತುತಿಸಿದರು. ಮತ್ತು ಅದೇ ಇಂದ್ರನಿಗೆ ಅರ್ಪಿಸುವುದಕ್ಕಾಗಿ ಹವಿಸ್ಸನ್ನು ಸಿದ್ಧಪಡಿಸಲಾಗಿದೆ" ಸಾಯಣಭಾಷ್ಯದಲ್ಲಿ **"ಅಸ್ಮಾ ಏವೇಂದ್ರಾಯ ಬ್ರಹ್ಮ ಹವಿರ್ಲಕ್ಷಣಮನ್ನಮುದ್ಯತಂ"** ಎಂಬುದಾಗಿ ಹವಿಸ್ಸನ್ನು 'ಬ್ರಹ್ಮ'ವೆಂದು ಹೇಳಿರುತ್ತಾರೆ.

ಹೀಗೆ ಬ್ರಹ್ಮವನ್ನು ಸ್ತೋತ್ರರೂಪವಾಗಿಯೂ, ಮಂತ್ರರೂಪವಾಗಿಯೂ ಗ್ರಹಿಸಿದ್ದಲ್ಲದೆ ಹವಿರ್ಲಕ್ಷಣರೂಪವಾದ ಅನ್ನಕ್ಕೂ ಅನ್ವಯಿಸಲಾಗಿದೆ. **"ಬ್ರಹ್ಮಸ್ತೋತ್ರರೂಪಂ ಮಂತ್ರರೂಪಂ ಹವಿರ್ಲಕ್ಷಣ ಮನ್ನಂ ವಾ।"** ಎಂಬುದಾಗಿ.

## ೯. ಪ್ರಜಾಪತಿ

ದೇವತಾರ್ಚನಾ ಸಾಧನಗಳಿಗೆ ಬ್ರಹ್ಮ ಶಬ್ದ ಪ್ರಯೋಗವಾದ ಮೇಲೆ ದೇವತೆಯನ್ನೇ ಕುರಿತು ಬ್ರಹ್ಮ ಶಬ್ದ ಪ್ರಯೋಗವಾಗಿರುವುದನ್ನೂ ಕಾಣಬಹುದು. 'ಪ್ರಜಾಪತಿ'ಯನ್ನು ಉದ್ದೇಶಿಸಿ ಈ ರೀತಿ ಹೇಳಿದೆ -

**"ಇಯಂ ವೇದಿಃ ಪರೋ ಅಂತಃ ಪೃಥಿವ್ಯಾ ಅಯಂ ಯಜ್ಞೋ ಭುವನಸ್ಯ ನಾಭಿಃ ।**

**ಅಯಂ ಸೋಮೋ ವೃಷ್ಣೋ ಅಶ್ವಸ್ಯ ರೇತೋ ಬ್ರಹ್ಮಾಯಂ ವಾಚಃ ಪರಮಂವ್ಯೋಮ॥"**

"ಯಜ್ಞವೇದಿಯೇ ಪೃಥಿವಿಯ ಅತ್ಯಂತ ಅತಿಶಯವಾದ ಪರ್ಯವಸಾನವಾಗಿದೆ.

N.I.T.K., ಸುರತ್ಕಲ್, ಪೋಸ್ಟ್ ಶ್ರೀನಿವಾಸ ನಗರ - 575 025, ದಕ್ಷಿಣ ಕನ್ನಡ



ಯಜ್ಞವೇ ವಿಶ್ವದ ನಾಭಿರೂಪವಾಗಿದೆ. ಸೇಚನ ಸಮರ್ಥನಾದವನೂ, ವ್ಯಾಪಕನೂ ಆದ ಆದಿತ್ಯನಿಗೆ ಸೋಮರಸವೇ ರೇತಸ್ಸಾಗಿದೆ. ಪ್ರಜಾಪತಿಯೇ ವಾಕ್ಕಿಗೆ ಶ್ರೇಷ್ಠವಾದ ರಕ್ಷಕಸ್ಥಾನವಾಗಿದ್ದಾನೆ." ಇಲ್ಲಿ "...ಅಯಂ ಬ್ರಹ್ಮಾ ಪ್ರಜಾಪತಿರೇವ ವಾಚೋ ಮಂತ್ರಾದಿ ರೂಪಾಯಾಃ ಪರಮಂ ವ್ಯೋಮ। ಉತ್ಕೃಷ್ಟಂ ರಕ್ಷಕಂ ಸ್ಥಾನಂ। ತತ್ರೈವೋತ್ಪತ್ತೇಸ್ತತ್ರೈವ ಪರ್ಯವಸಾನಾಚ್ಚ ।" ಎಂದಿದ್ದಾರೆ.

ಉಪನಿಷದಾದಿಗಳಲ್ಲಿ ಯಾವ ಮೂಲತತ್ವವನ್ನು ಪರಬ್ರಹ್ಮನೆಂದು ಕರೆದಿದೆಯೋ ಅದನ್ನು ಸಂಹಿತಾ ಮತ್ತು ಬ್ರಾಹ್ಮಣಗಳಲ್ಲಿ 'ಪ್ರಜಾಪತಿ'ಯೆಂದು ಕರೆದಿದೆ ಮತ್ತು ಯಜ್ಞಕ್ಕೂ ಪ್ರಜಾಪತಿಗೂ ಅಂಟಿದ ನಂಟಿನ ತಾದಾತ್ಮ್ಯವನ್ನು ಸ್ವೀಕರಿಸಿದ್ದಾರೆ. ವಿಶ್ವಸೃಷ್ಟಿಯು ಪ್ರಜಾಪತಿಯ ಯಜ್ಞದ ಮತ್ತು ತಪಸ್ಸಿನ ಫಲವೇ ಆಗಿದೆಯೆಂದು ಇಲ್ಲಿ ವಿವಕ್ಷೆ.

## ೧೦. ಬ್ರಹ್ಮ :

ಉಪನಿಷತ್ಕಾರರು 'ಬ್ರಹ್ಮ'ಶಬ್ದವನ್ನು ವಿಧವಿಧವಾಗಿ ವಿವೇಚಿಸಿದ್ದಾರೆ. ಯಾವುದು "ಅಕ್ಷರವೋ ಅದೇ ಬ್ರಹ್ಮ. ಬ್ರಹ್ಮನೇ ಜೀವಿಗಳನ್ನು ಪ್ರವೇಶಿಸಿ ಆತ್ಮನೆನಿಸಿಕೊಳ್ಳುವನು. ಎಲ್ಲವನ್ನೂ ಯಾವುದು ಅಸ್ತಿತ್ವಕ್ಕೆ ಬರುವಂತೆ ಮಾಡುವುದೋ ಅದೇ ಬ್ರಹ್ಮನ ಕ್ರಿಯಾಶಕ್ತಿ. ಅವನು ಸರ್ವಜ್ಞನು, ವಿಶ್ವದ ನಿಯಾಮಕನು, ಅನಾದಿಯು, ಅಣುವಿಗಿಂತಲೂ ಸೂಕ್ಷ್ಮವಾಗಿರುವವನು, ಎಲ್ಲಕ್ಕೂ ಆಧಾರಭೂತನು, ಅವನು ಸ್ವಯಂಪ್ರಕಾಶನೂ, ತಮಸ್ಸಿನ ಆಚೆ ಇರುವವನೂ ಆಗಿರುವನು. ಮನುಷ್ಯನು ಅವನನ್ನು ಸದಾ ಧ್ಯಾನಿಸಲಿ. ಈ ರೀತಿ ಧ್ಯಾನದ ಮೂಲಕ ಪರಮಪುರುಷನನ್ನು ಪಡೆಯುವೆ" ಎಂಬುದಾಗಿ ಶ್ರೀಕೃಷ್ಣನೂ ಅರ್ಜುನನಿಗೆ ಉಪದೇಶಿಸಿದ್ದಾನೆ.

ಹಿಂದೂ ದೇವತೆಗಳು ಅನೇಕವಾಗಿದ್ದರೂ ಈಶ್ವರನೇ ಪರಮಸತ್ಯ. ಆತನ ನಿರಾಕಾರ ನಿರ್ಗುಣ ಸ್ವರೂಪವೇ 'ಬ್ರಹ್ಮ'ನೆಂದು ಸ್ಥೂಲವಾಗಿ ಹೇಳುವುದುಂಟು. ಅಖಂಡವೂ, ಕಾಲ - ದೇಶ - ಕಾರ್ಯ - ಕಾರಣ ಸಂಬಂಧಾತೀತ, ಅತೀಂದ್ರಿಯವಾದ ಪರಂಜ್ಯೋತಿಯೇ ಬ್ರಹ್ಮ. ಅದನ್ನು ವ್ಯಾಖ್ಯಾನಿಸಲು 'ನೇತಿ, ನೇತಿ' ಎಂಬುದಾಗಿ ಉಪನಿಷತ್ಕಾರರು ಪ್ರಯತ್ನಿಸಿದ್ದಾರೆ. ಸಚ್ಚಿದಾನಂದ ಸ್ವರೂಪವಾದ ಬ್ರಹ್ಮನು ಪ್ರತಿಯೊಂದಕ್ಕೂ ಮೂಲಕಾರಣ ಮತ್ತು ಆಧಾರಭೂತನಾಗಿದ್ದಾನೆ. ಬ್ರಹ್ಮದ ಸಾಕಾರಭಾವವೇ ಈಶ್ವರ. ಉಪನಿಷತ್ಕಾರರ ಅನಂತರ ಬಂದ ದರ್ಶನ ಕಾರರಂತೂ ಬ್ರಹ್ಮ, ಜೀವ, ಜಗತ್ತುಗಳಿಗೆ ಸಂಬಂಧಪಟ್ಟ ವಿಚಾರಗಳನ್ನು ಅತ್ಯಂತ ಗಂಭೀರವಾಗಿ ವಿವೇಚಿಸಿ ತಮ್ಮ ತಮ್ಮ ಹಲವಾರು ಸಿದ್ಧಾಂತಗಳನ್ನು ಪ್ರತಿಪಾದಿಸಿರುತ್ತಾರೆ. ಉದಾ-

**ಶ್ರುತ್ಯೈಹಿಹ್ಯಮೇವೇದಮತಿಗಂಭೀರಂ ಬ್ರಹ್ಮ, ನ ತರ್ಕಾವಗಾಹ್ಯಮ್ ।**

**ತದ್ಬ್ರಹ್ಮ ಸರ್ವಜ್ಞಂ ಸರ್ವಶಕ್ತಂ ಜಗದುತ್ಪತ್ತಿಸ್ಥಿತಿಲಯಕಾರಣಂ ವೇದಾಂತಶಾಸ್ತ್ರಾದೇವಾವಗಮ್ಯತೇ।**

**ಸತ್ಯಂ ಜ್ಞಾನಮನಂತಂ ಬ್ರಹ್ಮ ।**

**ವಾಙ್ಮನಸಾತೀತಮವಿಷಯಾಂತಃಪಾತಿ ಪ್ರತ್ಯಗಾತ್ಮಭೂತಂ ವಿಶುದ್ಧಂ ನಿತ್ಯಬುದ್ಧಮುಕ್ತಸ್ವಭಾವಂ ಬ್ರಹ್ಮೇತಿ॥**

ಇತ್ಯಾದಿ ಇತ್ಯಾದಿ.

## ೧೧. ಬ್ರಹ್ಮ : -

ಪುರಾಣಕಾಲದಲ್ಲಿ ತ್ರಿದೇವತಾಪ್ರಾಧಾನ್ಯತೆಯಿದ್ದಾಗ ಬ್ರಹ್ಮನನ್ನೂ, ವಿಷ್ಣುವನ್ನೂ, ಈಶ್ವರನನ್ನೂ ಗುರುತಿಸಿ, ಬ್ರಹ್ಮನನ್ನು ಪ್ರಜಾಸೃಷ್ಟಿಕರ್ತನೆಂಬುದಾಗಿ ಗುರುತಿಸಲಾಯಿತು. ವಿಷ್ಣುವು ಪ್ರಜಾಪರಿಪಾಲಕನು ಮತ್ತು ಮಹೇಶ್ವರನು ಲಯಕರ್ತನು.

ದೇವತಾವಿಶೇಷದ್ಯೋತಕವಾಗಿ ಬ್ರಹ್ಮಶಬ್ದವು ಋಗ್ವೇದಕಾಲದಿಂದಲೇ ಪ್ರಯೋಗಿಸಲ್ಪಟ್ಟಿರುವುದನ್ನು ನಾವು ನೋಡುತ್ತೇವೆ. **"ಬ್ರಹ್ಮಾ ಪರಿವೃಥೋ ದೇವಃ ಶಸ್ಯಮಾನಂ ಸ್ತೂಯಮಾನ ಮಿದಮ್ ಉಪಕ್ರಣಯಾತ್"** ಎಂಬಲ್ಲಿ ಬ್ರಹ್ಮಶಬ್ದವು ಬ್ರಹ್ಮಾಭಿಧೇಯವಾದ ಅಮೂರ್ತದೇವತಾ ವಿಶೇಷವನ್ನೇ ನಿರ್ದೇಶಿಸುತ್ತದೆ. ತೈತ್ತಿರೀಯದಲ್ಲಿ - 'ಬ್ರಹ್ಮಾ ಬಹ್ಮಾ ಭವತ್ ಸ್ವಯಂ' ಎಂಬ ವಚನವನ್ನಿಲ್ಲಿ ಸ್ಮರಿಸಬಹುದು. ಬ್ರಾಹ್ಮಣಕಾಲದ 'ಪ್ರಜಾಪತಿ'ಯೆಂಬ ದೇವತೆಯನ್ನೇ ಅನಂತರ ಕಾಲದಲ್ಲಿ ಸೃಷ್ಟಿಕರ್ತನಾದ 'ಬ್ರಹ್ಮ' ಎಂಬುದಾಗಿ ಗುರುತಿಸಿರುವುದು ಕಂಡುಬರುತ್ತದೆ.

ಈ ರೀತಿ ಬ್ರಹ್ಮಶಬ್ದಾಭಿಧೇಯವಾದ ಪದಾರ್ಥಗಳೆಲ್ಲವೂ ಸೃಷ್ಟಿಯ ವಿಕಾಸದ ಜೊತೆಗೆ ನಿಕಟಸಂಬಂಧವನ್ನು ಹೊಂದಿರುವುದನ್ನು ನಾವು ಈ ಸ್ಥೂಲಸಮೀಕ್ಷೆಯಿಂದ ಮನಗಾಣಬಹುದು. 'ಬ್ರಹ್ಮ'ವು ಯಜ್ಞವಾಚಕವೆಂದು ಮೊದಲೇ ಹೇಳಿದೆ. ಯಜ್ಞವೆಂದರೆ ಸೃಷ್ಟಿಗೇ ಸಂಕೇತ. ಬ್ರಹ್ಮಾಭಿಧೇಯವಾದ ಯಜ್ಞವು ಸೃಷ್ಟಿಕಾರವೇ ಹೌದು. ಅದೇ ರೀತಿ ಯಜ್ಞವೇದಿಯು ದೇವತಾ ಪ್ರೀತ್ಯರ್ಥಕವಾಗಿದೆ. ಹಾಗೆಯೇ ಯಜ್ಞಸಂಬಂಧಿಯಾದ ಮಂತ್ರಗಳು, ಸ್ತೋತ್ರಗಳು, ಸಮರ್ಪಿಸಲ್ಪಡುವ ಮಂತ್ರಪೂತವಾದ ಹವಿಸ್ಸು ಹಾಗೂ ಸಂಬಂಧಪಟ್ಟ ಋತ್ವಿಜರೂ, ಬ್ರಹ್ಮವರ್ಗದವರೂ ಪುರೋಹಿತರೂ ಬ್ರಹ್ಮಪದವಾಚ್ಯರಾಗಿದ್ದಾರೆ. ಪರೋಕ್ಷವಾಗಿ ಯಜ್ಞಸಂಬಂಧಿಯಾದ ಇವರೆಲ್ಲರೂ ಸೃಷ್ಟಿಯ ಪ್ರಕ್ರಿಯೆಯಲ್ಲಿ ಸಹಯೋಗಕಾರಿಗಳೇ ಆಗಿದ್ದಾರೆ. ಬ್ರಹ್ಮಪದಾಭಿಧೇಯನಾದ ಪ್ರಜಾಪತಿ ಅಥವಾ ಬ್ರಹ್ಮನೂ ಸೃಷ್ಟಿಕಾರ್ಯ ಸಮರ್ಥನೂ, ಸರ್ವಜ್ಞನೂ ಸೃಷ್ಟಿರೂಪದಿಂದ ಸ್ವಂತ ಆತ್ಮಸ್ವರೂಪವನ್ನೇ ಪ್ರಕಟಪಡಿಸಿದವನೂ ಆಗಿದ್ದಾನೆ. ತಾತ್ಪರ್ಯದಲ್ಲಿ ಸೃಷ್ಟಿಯೇ 'ಬ್ರಹ್ಮ' ಸಂಬಂಧಕಾರಕವಾಗಿದೆ.

'ಬ್ರಹ್ಮ'ಶಬ್ದದ ನಿಷ್ಪತ್ತಿಯು 'ಬೃಂಹ್' ಎಂಬ ಧಾತುವಿನಿಂದಾಗಿದ್ದು ಬ್ರಹ್ಮವು 'ವರ್ಧನಾತ್ಮಕ' ವಿಷಯಗಳನ್ನು ನಿರ್ದೇಶಿಸಿರುವುದನ್ನು ಇಲ್ಲಿ ಕಾಣುತ್ತೇವೆ. ಬ್ರಹ್ಮ ಶಬ್ದಾಭಿಧೇಯ ಪದಾರ್ಥಗಳೆಲ್ಲವೂ ವರ್ಧನ ಸಂಬಂಧಿಗಳೇ ಆಗಿವೆಯೆಂಬುದು ಸ್ಥೂಲನೋಟದಿಂದಲೇ ತಿಳಿಯುತ್ತದೆ. ಪುರೋಹಿತನು ತನ್ನ ಹವಿಸ್ಸುಗಳಿಂದಲೂ ಸ್ತುತಿಗಳಿಂದಲೂ ದೇವತೆಗಳ ಶಕ್ತಿಯನ್ನೂ, ಉತ್ಸಾಹವನ್ನೂ ವರ್ಧಿಸುತ್ತಾನೆ. ಯಜ್ಞವು



ಸ್ವಯಂ ವೃದ್ಧಿಕಾರಕವೇ ಆಗಿದ್ದು ಸರ್ವ ಸಮೃದ್ಧಿಗೆ ದಾರಿಮಾಡಿಕೊಡುತ್ತದೆ. ಯಜ್ಞಾಧೀಕ್ಷಕನಾದ ಋತ್ವಿಜನೂ ಬ್ರಹ್ಮನಾಗಿದ್ದು ವರ್ಧನ ಸಂಬಂಧವನ್ನೇ ಪಡೆದಿದ್ದಾನೆ. ಅದೇ ರೀತಿ ಯಜ್ಞದಲ್ಲಿ ನಿರತನಾದ ಪುರೋಹಿತನೂ, ಯಜ್ಞದಲ್ಲಿ ಸಮರ್ಪಿಸಲ್ಪಡುವ ದೇವಭೋಜ್ಯವಾದ ಮಂತ್ರಸಂಸ್ಕರಿತ ಖಾದ್ಯಪೇಯಾದಿ ಹವಿಸ್ಸುಗಳೆಲ್ಲವೂ ವರ್ಧನಾತ್ಮಕ ಸಂಬಂಧವನ್ನೇ ಹೊಂದಿದ್ದು 'ಬ್ರಹ್ಮ'ವೆಂದು ಕರೆಯಲ್ಪಡುವುದು ಔಚಿತ್ಯಪೂರ್ಣವಾಗಿದೆ.

ದೇವತೆಗಳಲ್ಲೆಲ್ಲಾ ಸರ್ವೋಚ್ಚಪದವಿಯನ್ನು ಹೊಂದಿದ ಅತಿವೃದ್ಧನಾದ ಸರ್ವಜ್ಞನಾದ ಪ್ರಜಾಪತಿಯು ಅಥವಾ ಬ್ರಹ್ಮನು ಸಹಾ ವರ್ಧನಾತ್ಮಕ ಸಂಬಂಧವನ್ನೇ ಸಂಕೇತಿಸುತ್ತಾನೆ. ಪೌರಾಣಿಕ ಸೃಷ್ಟಿಕರ್ತನಾದ ಬ್ರಹ್ಮನೂ ತನ್ನ ಮಹದ್ರೂಪದಿಂದ ಅತ್ಯಂತ ಮಹತ್ತರವಾದ ಸೃಷ್ಟಿಕಾರ್ಯವನ್ನು ಸ್ವಯಂ ಕೈಗೊಂಡಿರುವವನೇ ಆಗಿದ್ದಾನೆ. ಈ ರೀತಿ ಪೂರ್ವೋಕ್ತ ವಿಮರ್ಶೆಯಿಂದ ಸಿದ್ಧಿಸುವುದೇನೆಂದರೆ - ಸ್ವಮಹಿಮೆ ಗರಿಮೆಗಳಿಂದ ಸರ್ವವೂ ಸ್ವವೃದ್ಧಿರೂಪಾತ್ಮಕಗುಣಗಳಿಂದಲೇ ಬ್ರಹ್ಮಪದಾಭಿಧೇಯರಾಗುತ್ತಾರೆ. ಉದಾಹರಣೆಯಾಗಿ, ಬ್ರಹ್ಮವಾಚ್ಯಗಳಾದ ಸ್ತುತಿಕರ್ತಾ, ದೇವತಾಸ್ತುತಿ, ಮಂತ್ರ, ಸ್ತೋತ್ರ, ವೇದ, ಪುರೋಹಿತ, ಬ್ರಾಹ್ಮಣ, ಬ್ರಹ್ಮಾ (ಋತ್ವಿಕ್), ಹವಿಸ್ಸು, ಪ್ರಜಾಪತಿ, ಉಪನಿಷತ್ ಬ್ರಹ್ಮ, ಸೃಷ್ಟಿಕರ್ತನಾದ ಬ್ರಹ್ಮ (ಪೌರಾಣಿಕ) ಇತ್ಯಾದಿ - ಇವೆಲ್ಲವೂ 'ಬ್ರಹ್ಮವೇ'. ★

NANDAKI
Ph. : 2480248 (5 lines)
Mobile : 9844009894 (Amar)
Tele Fax : 2125099 /2126420
Email : nandaki@vsnl.net

Investments & Holdings (P) Ltd.
ENGINEERS & DEVELOPERS (P) Ltd.

1st floor, CFC Building Annexe, #14/3,
Nrupathunga Road, Bangalore - 560 001

Contact us for advice on your
Investments (Mutual Funds, RBI Bonds, Infrastructure Bonds etc.)
Insurance (Life Insurance & General Insurance)
Home Loans
Construction of Flats & Houses

# ಸಾಂಸ್ಕೃತಿಕ ರಸಪ್ರಶ್ನೆಗಳು

ಡಾ। ಎಚ್. ವಿ. ನರಸಿಂಹ ಮೂರ್ತಿ, ಕುಂದಾಪುರ

1. 'ರಾಮಕೃಷ್ಣ ಮಿಷನ್' ಸಂಸ್ಥೆಯ ಸ್ಥಾಪಕರು ಯಾರು?
2. ಗಿರೀಶ್ ಕಾರ್ನಾಡರು ಬರೆದ ಮೊದಲ ನಾಟಕ ಯಾವುದು?
3. ಕನ್ನಡದ ಕವಿ ಪಂಪ ಮಹಾಭಾರತವನ್ನು ಯಾವ ಹೆಸರಿನಿಂದ ಬರೆದಿದ್ದಾನೆ?
4. ಎಲ್ಲೋರಾದ ಕೈಲಾಸ ದೇವಾಲಯವನ್ನು ಯಾರು ನಿರ್ಮಿಸಿದರು?
5. ಶ್ರವಣಬೆಳಗೊಳದ ಗೊಮ್ಮಟೇಶ್ವರನ ಶಿಲಾವಿಗ್ರಹವನ್ನು ಕಡೆದ ಶಿಲ್ಪಿಯಾರು?
6. ಶಿವನ ವಾಹನ ಯಾವುದು?
7. 'ಆದಿಕಾವ್ಯ' ಎಂದು ಪ್ರಸಿದ್ಧವಾದ ಗ್ರಂಥಯಾವುದು?
8. ಕಾಗಿನೆಲೆಯಲ್ಲಿ ಆದಿಕೇಶವಸ್ವಾಮಿಯ ದೇವಾಲಯ ಕಟ್ಟಿಸಿದವರು ಯಾರು?
9. ಜ್ಞಾನಪೀಠ ಪ್ರಶಸ್ತಿ ದೊರೆತ ಮೊದಲ ಕೃತಿಯ ಭಾಷೆ ಯಾವುದು?
10. ಅಂಬಿಕಾತನಯದತ್ತರಿಗೆ ಜ್ಞಾನಪೀಠ ಪ್ರಶಸ್ತಿ ಯಾವ ಕೃತಿಗಾಗಿ ದೊರೆಯಿತು?
11. 'ರಾಮಾಶ್ವಮೇಧ' ಕೃತಿಕಾರರು ಯಾರು?
12. ಇತಿಹಾಸಪ್ರಸಿದ್ಧ 'ತಕ್ಷಶಿಲಾ' ಎಲ್ಲಿದೆ?
13. 'ಕಾಳಿದಾಸ ಸಮ್ಮಾನ್' ಪಡೆದ ಮೊದಲ ಹಿಂದೂಸ್ಥಾನೀ ಗಾಯಕ ಯಾರು?
14. ಕನಕದಾಸರ ಗುರುಗಳು ಯಾರು?
15. ಮೈಸೂರು ರಾಜವಂಶದ ಪ್ರಾರಂಭದ ರಾಜಧಾನಿ ಯಾವುದು?
16. ದೇವತೆಗಳ ಶಿಲ್ಪಿ ಯಾರು?
17. 'ವಿಜಯದನಗರ' ಎಂದು ಹೆಸರುವಾಸಿಯಾದ ಭಾರತದ ಸ್ಥಳ ಯಾವುದು?
18. ಕರ್ನಾಟಕ ಸಂಗೀತದ ಪಿತಾಮಹ ಯಾರು?
19. ಯೋಗಸೂತ್ರದ ಕರ್ತೃ ಯಾರು?
20. ಕರ್ನಾಟಕದ ಪ್ರಸಿದ್ಧ ಅನ್ನಪೂರ್ಣೇಶ್ವರೀ ಕ್ಷೇತ್ರ ಯಾವುದು?

### ಉತ್ತರಗಳು :

1. ಸ್ವಾಮೀ ವಿವೇಕಾನಂದ 2. ಯಯಾತಿ 3. ವಿಕ್ರಮಾರ್ಜುನ ವಿಜಯ 4. ಎರಡನೇ ಕೃಷ್ಣ 5. ಅರಿಷ್ಟನೇಮಿ 6. ನಂದಿ 7. ಶ್ರೀಮದ್ರಾಮಾಯಣ 8. ಕನಕದಾಸರು 9. ಮಲಯಾಳಂ 10. ನಾಕುತಂತಿ 11. ಮುದ್ದಣ 12. ಪಾಕಿಸ್ಥಾನದ ರಾವಲ್ಪಿಂಡಿಯ ಬಳಿ 13. ಮಲ್ಲಿಕಾರ್ಜುನ ಮನ್ಸೂರ್ 14. ವ್ಯಾಸರಾಯರು 15. ಶ್ರೀರಂಗಪಟ್ಟಣ 16. ವಿಶ್ವಕರ್ಮ 17. ಫತೇಪುರ ಸಿಕ್ರಿ 18. ಪುರಂದರ ದಾಸ 19. ಪತಂಜಲಿ ಮಹರ್ಷಿ 20. ಹೊರನಾಡು.

ಪ್ರಕರಣ ಗ್ರಂಥಗಳು ಸಾರ ಸಂಗ್ರಹ

# ಕಥಾಲಕ್ಷಣ

**ಪ್ರೊ। ಎಸ್. ವೆಂಕಟೇಶ ಮೂರ್ತಿ,** ಎಂ. ಎಸ್. ಸಿ.

**ನೃಸಿಂಹಮಖಿಲಾಜ್ಞಾನತಿಮಿರಾಶಿಶಿರದ್ಯುತಿಮ್ ।**

**ಸಂಪ್ರಣಮ್ಯ ಪ್ರವಕ್ಷ್ಯಾಮಿ ಕಥಾಲಕ್ಷಣಮಂಜಸಾ ॥**

ಕಥಾ ಎಂದರೆ ಚರ್ಚೆ. ವಿದ್ವಾಂಸರ ನಡುವೆ ನಡೆದಾಗ ಮಾತ್ರ ಅದು ಕಥೆ ಎನಿಸಿಕೊಳ್ಳುತ್ತದೆ. ವಾದಿ ಪ್ರತಿವಾದಿಗಳ ನಡುವೆ ನಡೆಯುವ ಚರ್ಚೆಯ ಸ್ವರೂಪ, ಉದ್ದೇಶ ಹಾಗೂ ಪ್ರಯೋಜನಗಳನ್ನು ತಿಳಿಸುವುದೇ ಕಥಾಲಕ್ಷಣದ ವಿಷಯ.

## ಕಥೆಯಲ್ಲಿ ಎಷ್ಟು ವಿಧ ?

ವಾದ, ಜಲ್ಪ ಮತ್ತು ವಿತಂಡ ಎಂದು ಕಥೆಯಲ್ಲಿ ಮೂರು ಪ್ರಭೇದಗಳು. ವಾದ ಎಂದರೆ ಕೇವಲ ತತ್ವನಿರ್ಣಯದ ಉದ್ದೇಶದಿಂದ ಗುರು ಶಿಷ್ಯರ ನಡುವೆ ಅಥವಾ ಬೇರೆ ಸಜ್ಜನರ ನಡುವೆ ನಡೆಯುವ ಚರ್ಚೆ. ಜಲ್ಪ ಎಂದರೆ ಖ್ಯಾತಿ, ಲಾಭ, ಪರ ಪರಾಜಯ ಮುಂತಾದ ಉದ್ದೇಶಗಳಿದ್ದು ಸಜ್ಜನರ ನಡುವೆ ನಡೆಯುವ ಚರ್ಚೆ. ಸಜ್ಜನ ಮತ್ತು ಅಸಜ್ಜನರ ನಡುವೆ ನಡೆಯುವ ಚರ್ಚೆ ವಿತಂಡ. ಅಸಜ್ಜನನಾದ ಪ್ರತಿವಾದಿಯನ್ನು ಸೋಲಿಸುವುದೇ ಇದರ ಮುಖ್ಯ ಉದ್ದೇಶ.

## ಕಥಾ ಪ್ರಭೇದಗಳ ಲಕ್ಷಣವೇನು?

ವಾದಕಥೆಯು ಜಲ್ಪಕ್ಕಿಂತ ಉತ್ತಮ. ಆದರೆ ಇವೆರಡರಲ್ಲೂ ವಾದಿ ಮತ್ತು ಪ್ರತಿವಾದಿಗಳು ಕೇವಲ ಸಜ್ಜನರೇ ಆಗಿರುತ್ತಾರೆ. ಆದರೆ ವಿತಂಡದಲ್ಲಿ ಅಸಜ್ಜನರೂ ಅಧಿಕಾರಿಗಳೇ. ವಾದಿ ಪ್ರತಿವಾದಿಗಳಿಬ್ಬರಿಗೂ ಸ್ವಪಕ್ಷ ಸಾಧನೆ ಮತ್ತು ಪರಪಕ್ಷ ಖಂಡನೆಗೆ ಅವಕಾಶವಿರುವ ಕಥೆಯು ಜಲ್ಪವೆನಿಸುತ್ತದೆ. ಸಜ್ಜನನಾದ ವಾದಿಯು ಸ್ವಪಕ್ಷವನ್ನು ಸಮರ್ಥಿಸದೇ ಅಸಜ್ಜನ ಪ್ರತಿವಾದಿಯ ಪಕ್ಷವನ್ನು ಖಂಡಿಸುವುದು ವಿತಂಡದ ಲಕ್ಷಣ.

ಜ್ಞಾನಿಗಳಾದ ಸಜ್ಜನರು ಅಸಜ್ಜನರಿಗೆ ರಹಸ್ಯವಾದ ತತ್ವಗಳನ್ನು ಹೊರಗೆಡಹಬಾರದು. ಅಯೋಗ್ಯರಿಗೆ ತತ್ವಜ್ಞಾನವನ್ನು ಉಪದೇಶಿಸಿದರೆ ಅನರ್ಥವುಂಟಾಗುತ್ತದೆ. ಅಸಜ್ಜನರು ವಾದದಲ್ಲಿ ಮುಂದಿಡುವ ಪ್ರಮಾಣ, ಪ್ರಮೇಯ ಮುಂತಾದವುಗಳನ್ನು ಶಾಸ್ತ್ರ ವಿರುದ್ಧ ಮತ್ತು ಅಪ್ರಾಮಾಣಿಕ ಎಂಬುದಾಗಿ ಅವರ ನ್ಯಾಯಗಳಿಂದಲೇ ಅವರನ್ನು ಖಂಡಿಸಬೆಕು

## ಪ್ರಾಶ್ನಿಕರ ಲಕ್ಷಣವೇನು?

ಪವನಜ ಪ್ರಕಾಶನ, 1625, 5ನೇ ಬಿ ಕ್ರಾಸ್, 2ನೇ ಬ್ಲಾಕ್, ಬಿ. ಎಸ್. ಕೆ. Iಸ್ಟೇಜ್, ಬೆಂಗಳೂರು – 560 050



ಪ್ರಾಶ್ನಿಕರ ಮುಖ್ಯ ಲಕ್ಷಣವೆಂದರೆ, ಅವರು ರಾಗದ್ವೇಷಾದಿಗಳನ್ನು ಹೊಂದಿರಬಾರದು ಮತ್ತು ಸಕಲಶಾಸ್ತ್ರವಿಶಾರದರಾಗಿರಬೇಕು. ಜೊತೆಗೆ ಎಲ್ಲ ಬಗೆಯ ಸಂಶಯಗಳನ್ನು ಪರಿಹರಿಸುವವರು, ಸ್ವಯಂ ಸಂಶಯವಿಲ್ಲದಿರುವವರು ಮತ್ತು ವಾದಸರಣಿಯನ್ನು ಸರಿಯಾಗಿ ಗ್ರಹಿಸುವ ಸೂಕ್ಷ್ಮ ಬುದ್ಧಿಯುಳ್ಳವರೂ ಆಗಿರಬೇಕು. ಅವರು ಒಬ್ಬರೇ ಇರಬಹುದು ಅಥವಾ ಅನೇಕರಿರಬಹುದು. ಆದರೆ ವಿಷಮ ಸಂಖ್ಯೆಯಲ್ಲಿರಬೇಕು. ಪ್ರಾಶ್ನಿಕರಲ್ಲಿ ಭಿನ್ನಾಭಿಪ್ರಾಯ ಮೂಡಿದರೆ ಬಹುಮತದಿಂದ ನಿರ್ಣಯ ಕೈಗೊಳ್ಳಲು ಇದರಿಂದ ಸಾಧ್ಯ. ಕನಿಷ್ಟ ಒಬ್ಬನಿದ್ದರೂ ಸಾಕು. ಏಳಕ್ಕಿಂತ ಹೆಚ್ಚಿನ ಸಂಖ್ಯೆಯಲ್ಲಿ ಬೇಕಿಲ್ಲ.

ಪ್ರಾಶ್ನಿಕರು ಒಬ್ಬರೇ ಇರಲಿ ಅಥವಾ ಅನೇಕರಿರಲಿ ಅವರಲ್ಲಿ ಬಹಳ ಮುಖ್ಯವಾದ ಮತ್ತು ಅವಶ್ಯವಾಗಿ ಇರಲೇಬೇಕಾದ ಮುಖ್ಯ ಲಕ್ಷಣವೆಂದರೆ ವಿಷ್ಣುಭಕ್ತಿ. ಎಲ್ಲ ಸದ್ಗುಣಗಳಿಂದ ಕೂಡಿರುವ ಸಜ್ಜನರ ಲಕ್ಷಣ ಸಹಜವಾದ ವಿಷ್ಣುಭಕ್ತಿ. ಅವರ ಈ ಭಕ್ತಿ ಎಂದಿಗೂ ಕುಂದುವುದಿಲ್ಲ. ಬೇರೆ ಎಲ್ಲ ಸದ್ಗುಣಗಳಿದ್ದರೂ ವಿಷ್ಣುಭಕ್ತಿಯೊಂದು ಇಲ್ಲದಿದ್ದರೆ ಅಂಥವರು ಸಜ್ಜನರೇ ಅಲ್ಲ. ಸಭಾಪತಿ, ಸಭಾಧ್ಯಕ್ಷ ಮೊದಲಾದವು ಪ್ರಾಶ್ನಿಕರಿಗೆ ಪರ್ಯಾಯ ಹೆಸರುಗಳು. ವಾದ ಕಥೆಯಲ್ಲಿ ತತ್ವನಿರ್ಣಯವೇ ಮುಖ್ಯವಾದ್ದರಿಂದ ಪ್ರಾಶ್ನಿಕರ ಅನುಪಸ್ಥಿತಿಯಲ್ಲೂ ಚರ್ಚೆಯನ್ನು ನಡೆಸಬಹುದು. ಇದ್ದರೆ ಬಾಧಕವಿಲ್ಲ. ಜಲ್ಪ ಮತ್ತು ವಿತಂಡಗಳಲ್ಲಿ ಪ್ರಾಶ್ನಿಕರ ಉಪಸ್ಥಿತಿ ಅವಶ್ಯಕ.

## ವಾದ ಕಥೆಯ ರೀತಿ

ವಾದ ಕಥೆಯಲ್ಲಿ ವಾದಿ ಮತ್ತು ಪ್ರತಿವಾದಿಗಳು ಸಜ್ಜನರಿರಬೇಕು. ವಾದಿಯು ನಿರೂಪಿಸಿದ ಪ್ರಮೇಯದ ಬಗ್ಗೆ ಪ್ರತಿವಾದಿಯು ಪ್ರಮಾಣವನ್ನು ಕೇಳಬೇಕು. ಕೇವಲ ಯುಕ್ತಿಯಿಂದ ಯಾವುದೇ ವಿಷಯದ ಸೂಕ್ತ ನಿರ್ಣಯ ಸಾಧ್ಯವಿಲ್ಲ. ಆದ್ದರಿಂದ ಮೊದಲು ಆಗಮ ಅಥವಾ ಶ್ರುತಿಯನ್ನು ಕೊಡಬೇಕು. ವಾದಿ ನೀಡಿದ ಆಗಮವನ್ನೇ ಪ್ರತಿವಾದಿಯು ಅಪ್ರಮಾಣ ಎಂದು ವಾದಿಸಬಾರದು. ಆಗಮಕ್ಕೆ ಅನ್ಯಾರ್ಥ ಕಲ್ಪನೆ ಮಾಡುವುದರ ಮೂಲಕ ಅವನ ವಾದವನ್ನು ನಿರಾಕರಿಸಬೇಕು. ಇದಕ್ಕೆ ಆಗಮ ದೂಷಣ ಎಂದು ಹೆಸರು.

ಆಗಮಗಳಲ್ಲಿ **ಸದಾಗಮ** ಮತ್ತು **ದುರಾಗಮ** ಎಂದು ಎರಡು ವಿಧ. ಋಗ್ವೇದ,

ಸ್ಥಾಪನೆ : 1977 ದೂರವಾಣಿ : 2521607

**ಜನತಾ ಕೋ – ಆಪರೇಟಿವ್ ಬ್ಯಾಂಕ್ ಲಿ. ಉಡುಪಿ**

★ ಸಂಜೆ ಮತ್ತು ಭಾನುವಾರ ಬ್ಯಾಂಕಿಂಗ್ ಸೇವೆ

★ ಠೇವಣಿಗಳಿಗೆ 1% ಅಧಿಕ ಬಡ್ಡಿ

**ಸ್ನೇಹಮಯ ಸೌಹಾರ್ದ ಸೇವೆಯೇ ಬ್ಯಾಂಕಿನ ಧ್ಯೇಯ**

ಯಜುರ್ವೇದ, ಸಾಮವೇದ ಹಾಗೂ ಅಥರ್ವಣ ವೇದ, ಮಹಾಭಾರತ, ಪಂಚರಾತ್ರ, ಮೂಲ ರಾಮಾಯಣ ಮತ್ತು ಇವುಗಳಿಗೆ ಅನುಸಾರಿಯಾಗಿರುವ ಸ್ಮೃತಿ, ಇತಿಹಾಸ ಮುಂತಾದವುಗಳು ಮಾತ್ರ ಸದಾಗಮಗಳು.

ಮೇಲೆ ಹೇಳಿದ ಋಗಾದಿ ಸದಾಗಮಗಳಿಗೆ ವಿರುದ್ಧವಾದುದೆಲ್ಲವೂ ದುರಾಗಮ ಎನಿಸುತ್ತವೆ. ವಾದ ಕಥೆಯಲ್ಲಿ ಸದಾಗಮಗಳನ್ನು ಮಾತ್ರ ಪ್ರಮಾಣವನ್ನಾಗಿ ಅಂಗೀಕರಿಸಬೇಕು.

ವಾದಿಯು ಮಂಡಿಸಿದ ವಾದವನ್ನು ನಿರಾಕರಿಸಲು ಪ್ರತಿವಾದಿಯು ಅವನು ಉದಾಹರಿಸಿದ ಆಗಮಕ್ಕೆ ಅನ್ಯಾರ್ಥ ಕಲ್ಪಿಸುವುದರೊಂದಿಗೆ ಸ್ವಪಕ್ಷ ಸಾಧನೆಗೆ ತಾನೂ ಸದಾಗಮವನ್ನೇ ಪ್ರಮಾಣವಾಗಿ ಕೊಡಬೇಕು. ಇದರ ನಿರಾಕರಣೆಗೆ ವಾದಿಯು ಅನ್ಯಾರ್ಥವನ್ನು ಕಲ್ಪಿಸಬೇಕು ಅಥವಾ ತಾನು ಮೊದಲು ನೀಡಿದ್ದ ಆಗಮಕ್ಕೆ ಪ್ರತಿವಾದಿಯು ಮಾಡಿದ್ದ ಅನ್ಯಾರ್ಥವನ್ನು ನಿರಾಕರಿಸಬೇಕು. ಹೀಗೆ ಚರ್ಚೆ ನಡೆದಾಗ ಮಾತ್ರ ತತ್ವನಿರ್ಣಯ ಸಾಧ್ಯ.

ವಾದಿಯು ಪ್ರತಿವಾದಿಯ ವಾದಸರಣಿಯನ್ನು ಅಸಂಗತವೆಂದು ನಿರ್ಣಯಮಾಡಿ ತೋರಿಸಿದ ಮೇಲೆ ಅದನ್ನು ಸೌಹಾರ್ದದಿಂದ ಸ್ವೀಕರಿಸಬೇಕು. ಇಲ್ಲಿ ಜಯಾಪಜಯಗಳ ಪ್ರಸಕ್ತಿ ಇರುವುದಿಲ್ಲ.

ಪ್ರತ್ಯಕ್ಷ ಗೋಚರ ವಿಷಯದ ನಿರ್ಣಯಕ್ಕೆ ಪ್ರತ್ಯಕ್ಷಕ್ಕೆ ಸಂಬಂಧಿಸಿದ ದೃಷ್ಟಾಂತವನ್ನೇ ವಾದಿಯು ನೀಡಬೇಕು. ಸಾಕ್ಷಿಗೆ ಗಮ್ಯವಾದ ವಿಷಯಕ್ಕೆ ಸಾಕ್ಷಿಯೇ ಪ್ರಮಾಣ. ಅನುಮಾನ ಅಥವಾ ಯುಕ್ತಿಯನ್ನು ಎಂದೂ ಮೊದಲು ನೀಡಬಾರದು. ಯಾವಾಗಲೂ ಅಪೌರುಷೇಯ ಆಗಮವನ್ನೇ ಉದಾಹರಿಸಬೇಕಿಲ್ಲ. ಇಬ್ಬರಿಗೂ ಒಪ್ಪಿಗೆಯಾಗುವಂಥಹ ಸೂಕ್ತವಾದ ಆಪ್ತವಾಕ್ಯವನ್ನೂ ಸಹ ಪ್ರಮಾಣವನ್ನಾಗಿ ಉಪಯೋಗಿಸಬಹುದು. ವಾದಕಥೆಯಲ್ಲಿ ವಾದಿ - ಪ್ರತಿವಾದಿಗಳು ಇಬ್ಬರೇ ಇರಬೇಕೆಂಬ ನಿಯಮವೇನಿಲ್ಲ. ಇಂತಿಷ್ಟೇ ಸಮಯ ಎಂಬ ನಿರ್ಬಂಧವೂ ಇಲ್ಲ. ತತ್ವ ನಿರ್ಣಯವಾಗುವವರೆಗೆ ಅನೇಕರು ವಾದದಲ್ಲಿ ಭಾಗವಹಿಸಿ ಬಹುಕಾಲ ವಾಕ್ಯಾರ್ಥ ನಡೆಸಬಹುದು.

ವಾದ ಕಥೆಯಲ್ಲಿ ತತ್ವ ನಿರ್ಣಯಕ್ಕೆ ವಿರೋಧಿಯಾದ ಮಾತು ಅಥವಾ ಕೃತಿಯು ಕಂಡು ಬಂದರೆ ಅದು ಪರಾಜಯಕ್ಕೆ ಕಾರಣವಾಗುತ್ತದೆ. ವಾದಿ - ಪ್ರತಿವಾದಿಗಳಲ್ಲಿ ಯಾರಾದರೊಬ್ಬರು ಮೇಲಿನ ಕಾರಣಗಳಿಂದ ಪರಾಜಯಕ್ಕೊಳಗಾಗಿ ಅದನ್ನು ಅವರು ಒಪ್ಪಿಕೊಂಡರೆ ಅವರನ್ನು ಗೌರವಿಸಬೇಕು, ದೂಷಿಸಬಾರದು. ಗೆದ್ದವರಿಗೆ ವಿಶೇಷ ಸನ್ಮಾನವನ್ನು ಮಾಡಬೇಕು.

## ಜಲ್ಪ ಮತ್ತು ವಿತಂಡಗಳ ರೀತಿ

ಜಲ್ಪ ಕಥೆಯಲ್ಲಿ ವಾದಿ - ಪ್ರತಿವಾದಿಗಳಲ್ಲಿ ಯಾರಾದರೂ ಸೋಲುವ ತನಕ ವಾಕ್ಯಾರ್ಥ ನಡೆಯಬೇಕಾದ್ದು ಅಗತ್ಯ. ವಿರೋಧ, ಅಸಂಗತಿ, ನ್ಯೂನ, ಅನುಕ್ತಿ, ಸಂವಾದ, ಆಧಿಕ್ಯ ಎಂಬ ಆರು ದೋಷಗಳಲ್ಲಿ ಯಾವೊಂದನ್ನಾದರೂ ಹೊಂದಿದ್ದರೆ ಅಂತಹ ವಾದಿ ಅಥವಾ



ಪ್ರತಿವಾದಿಯು ಪರಾಜಿತನೆಂದು ನಿರ್ಣೀತವಾಗುತ್ತದೆ. ಈ ಆರು ದೋಷಗಳನ್ನು ನಿಗ್ರಹ ಸ್ಥಾನಗಳು ಎನ್ನುತ್ತಾರೆ.

ತಾನು ಹೇಳಿದ ಮಾತುಗಳಿಗೆ ಪೂರ್ವಾಪರ ಹೊಂದಿಕೆಯಾಗದಿದ್ದರೆ ಅದು ವಿರೋಧ ಎಂಬ ದೋಷ. ಆಕಾಂಕ್ಷಾ ಇಲ್ಲದಿರುವುದು ಅಸಂಗತಿ.

ಅಂದರೆ ವಾದಕ್ಕೆ ಸಂಬಂಧಿಸದ ವಿಷಯ. ಹೇಳಬೇಕಾದ ವಿಷಯಗಳು ಅನೇಕವಿದ್ದರೂ ಒಂದಂಶವನ್ನು ಮಾತ್ರ ಹೇಳಿದರೆ ಅದು ನ್ಯೂನ. ಜಿಜ್ಞಾಸ್ಯ ವಿಷಯವಾಗಿದ್ದರೂ ಈಗಾಗಲೇ ಸಿದ್ಧವಾಗಿರುವುದನ್ನೇ ಮತ್ತೆ ಅನುವಾದ ಮಾಡುವುದು ಅಧಿಕ. ವಾದಗ್ರಸ್ತ ಪ್ರಮೇಯವನ್ನು ಅಂಗೀಕರಿಸುವುದು ಸಂವಾದ. ಅವಶ್ಯವಾಗಿ ಹೇಳಬೇಕಾದ್ದನ್ನು ಹೇಳದೇ ಇರುವುದು ಅನುಕ್ತಿ.

ಜಲ್ಪ ಕಥೆಯಲ್ಲಿ ಹೇಳಿದ ನಿಯಮಗಳೇ ವಿತಂಡಕ್ಕೂ ಅನ್ವಯವಾಗುತ್ತವೆ. ಇವೆರಡೂ ರೀತಿಯ ಚರ್ಚೆಗಳಲ್ಲೂ ಸೋತವನು ತನ್ನ ಸೋಲನ್ನು ಒಪ್ಪಿಕೊಂಡರೆ ಅವನನ್ನು ಶಿಕ್ಷಿಸಬೇಕಿಲ್ಲ ಅಥವಾ ದಂಡ ವಿಧಿಸಬೇಕಿಲ್ಲ. ಸೋಲನ್ನು ಒಪ್ಪಿಕೊಳ್ಳದೇ ಹಠಮಾಡಿದರೆ ಶಿಕ್ಷಾರ್ಹನಾಗುತ್ತಾನೆ.

ಕೆಲವು ಸಲ ಚರ್ಚೆ ಪ್ರಾರಂಭವಾಗುವ ಮುನ್ನವೇ ವಾದಿ ಅಥವಾ ಪ್ರತಿವಾದಿ ಪರಾಜಿತನಾಗಬಹುದು. ವಾಕ್ಯಾರ್ಥಕ್ಕೆ ಅಗತ್ಯವಾದ ವ್ಯಾಕರಣ ಜ್ಞಾನವಿಲ್ಲದಿದ್ದರೆ ಅಂಥವರನ್ನು ಪ್ರಾಶ್ನಿಕರು ಪರಾಜಿತನೆಂದು ಘೋಷಿಸಬಹುದು. ಆದ್ದರಿಂದ ವಾದಿ ಪ್ರತಿವಾದಿಗಳು ಜ್ಞಾನದಲ್ಲಿ ಸಮಾನ ಸ್ಕಂದರಾಗಿರಬೇಕಾದ್ದು ಅಗತ್ಯ. ವಿದ್ಯಾಸಮರದಲ್ಲಿ ಮಾತ್ರ ಚರ್ಚೆಗೆ ಅವಕಾಶ. ಕೆಲವು ಸಂದರ್ಭಗಳಲ್ಲಿ ವಾದಿಗಳಲ್ಲಿ ಯಾರಿಗಾದರೂ ಕೆಲವು ಕಾರಣಗಳಿಂದ ಮಾತು ಹೊರಡದಿರಬಹುದು ಅಥವಾ ತಡವರಿಸಬಹುದು, ಇಲ್ಲವೇ ಅಪಸ್ಮಾರಾದಿ ದೋಷಗಳು ಎರಗಬಹುದು. ಅವರು ವಿದ್ಯಾವಂತರಾಗಿದ್ದರೆ ಅವರನ್ನು ಪರಾಜಿತರು ಎಂದು ಘೋಷಿಸದೇ ಮತ್ತೆ ಸರಿ ಹೋದ ಮೇಲೆ ಚರ್ಚೆಗೆ ಅವಕಾಶ ಕೊಡಬೇಕು. ಶ್ರೀ ಮದಾಚಾರ್ಯರ ಈ ಪ್ರಕರಣವು ಬ್ರಹ್ಮಕರ್ತಾದಿ ಆಗಮಗಳಿಗೆ ಅನುಸಾರವಾಗಿರುವುದರಿಂದ ಪರಮಪ್ರಮಾಣವು

**ಆನಂದತೀರ್ಥಮುನಿನಾ ಬ್ರಹ್ಮತರ್ಕಾನುಸಾರತಃ ।**

**ಕಥಾಲಕ್ಷಣಮಿತ್ಯುಕ್ತಂ ಪ್ರೀತ್ಯರ್ಥಂ ಶಾರ್ಙ್ಗಧನ್ವನಃ ॥**

MODERN INTERIORS & FURNITURE
Ph.: 2523504
Opp. : Sanskrit College, Maruthi Veethika, Udupi - 576 101
*Specialists in :* • Interior Decoration work and Furnishings.
• Steel & Wooden Furniture. • Sofa sets of different designs
• Computer Furniture and chairs of different Designs
• Kurlon & Duroflex Mattress and many more.

ನೀತಿ ಕಥೆ

# ಸೋಲಿನ ಸಿದ್ಧಿ

ಬಿ. ಸುಬ್ರಾಯ ಅಡಿಗ

ವಿದ್ಯಾರ್ಥಿಗಳ ಸೃಜನಶೀಲತೆಯನ್ನು ವಿಕಾಸಗೊಳಿಸಲು ಶಾಲೆಯಲ್ಲಿ ಕಥಾಸ್ಪರ್ಧೆಯನ್ನೇರ್ಪಡಿಸಲಾಯಿತು. ವಿದ್ಯಾರ್ಥಿಗಳಿಗೆ ಒಂದು ವಿಷಯ ಕೊಟ್ಟು ಒಂದು ತಿಂಗಳ ಅವಧಿ ನೀಡಲಾಯಿತು. ಅರ್ನೆಸ್ಟ್ ಹೆಮಿಂಗ್ವೇ ಪ್ರತಿಭಾವಂತ ವಿದ್ಯಾರ್ಥಿ. ಅವನ ಹಲವಾರು ಕತೆಗಳು ಶಾಲಾ ಪತ್ರಿಕೆಯಲ್ಲಿ ಪ್ರಕಟವಾಗಿದ್ದವು; ಮತ್ತು ಅವನಿಗೆ ಪುರಸ್ಕಾರಗಳೂ ಲಭಿಸಿದ್ದವು. 'ನೀನು ಸ್ಪರ್ಧೆಯಲ್ಲಿ ಭಾಗವಹಿಸುವಿಯಾ?' ಎಂದು ಸಂಗಾತಿಗಳು ಕೇಳಿದಾಗ, ಆತ ಅಭಿಮಾನದಿಂದ - "ಖಂಡಿತ ಭಾಗವಹಿಸುವೆ. ಈ ಪುರಸ್ಕಾರವೂ ನನಗೇ ಸಿಗುವುದು. ಆದರೆ ಸ್ಪರ್ಧೆಗಾಗಿ ಒಂದು ತಿಂಗಳ ಕಾಲಾವಕಾಶ ಅದೇಕೆ ಕೊಟ್ಟರೋ ತಿಳಿಯದು" - ಎಂದ.

ಆತ ಸಂತೋಷದಿಂದ ಮನೆಗೆ ಬಂದ. ಸ್ಪರ್ಧೆಯ ವಿಚಾರ ಅಕ್ಕನಿಗೆ ತಿಳಿದಾಗ- "ಈಗಲೇ ತಯಾರಿ ಆರಂಭಿಸು" ಎಂದಳು.

"ನೀನೂ ಎಂಥ ಮಾತಾಡುತ್ತೀ. ಇನ್ನೂ ಒಂದು ತಿಂಗಳ ಸಮಯವಿದೆ. ಕತೆ ಬರೆಯಲು ನನಗೆ ಬರೇ 2 ನಿಮಿಷ ಸಾಕು". ಅಸಡ್ಡೆಯಿಂದ ನುಡಿದ ಹೆಮಿಂಗ್ವೇ.

ತಮ್ಮನ ಮಾತಿನಿಂದ ಅಕ್ಕನಿಗೆ ದುಃಖವಾಯಿತು. ಅವನ ಅಹಂಕಾರ ಹಾಗೂ ವೇಳೆಗೆ ಸರಿಯಾಗಿ ಕೆಲಸ ಮಾಡದ ಸ್ವಭಾವ ಅವಳಿಗೆ ನೋವನ್ನುಂಟುಮಾಡಿತು.

ಬರೇ 2 ದಿನ ಉಳಿದಾಗ ಹೆಮಿಂಗ್ವೇಗೆ ಕತೆ ಬರೆಯುವ ನೆನಪಾಯಿತು. ಆತ ಬೇಗ ಬೇಗನೆ ಕತೆ ಬರೆದು ಶಾಲೆಯಲ್ಲಿ ಕೊಟ್ಟ. ತನಗೇ ಈ ಬಹುಮಾನ ಸಿಗುವುದೆಂದು ಆತ ಬಲವಾಗಿ ನಂಬಿದ್ದ.

ಫಲಿತಾಂಶದ ದಿನ ಆತ ಬೇಗಬೇಗನೆ ಶಾಲೆಗೆ ಹೋದ. ಪ್ರಿನ್ಸಿಪಾಲರು ಫಲಿತಾಂಶವನ್ನು ಓದಿ ಹೇಳಿದಾಗ ತನಗೆ ಬಹುಮಾನ ಬಂದಿಲ್ಲವೆಂದು ತಿಳಿದು ಹೆಮಿಂಗ್ವೇ ನಿರಾಶನಾದ. ವಿಫಲತೆ ಕಣ್ಣೀರಧಾರೆಯ ರೂಪದಲ್ಲಿ ಹೊರಹೊಮ್ಮಿತು.

ನಿರಾಶೆಯಿಂದ ಮನೆಗೆ ಬಂದಾಗ, ಅಕ್ಕ ಸ್ಪರ್ಧೆಯ ಫಲಿತಾಂಶದ ಬಗ್ಗೆ ಕೇಳಿದಳು. "ನಾನು ಸೋತು ಹೋದೆ" - ಎನ್ನುತ್ತಾ ಆತ ಬಿಕ್ಕಿ ಬಿಕ್ಕಿ ಅಳತೊಡಗಿದ. ಆಗ ಅಕ್ಕ ಇಂತೆಂದಳು. "ನೀನು ತುಂಬಾ ಪ್ರತಿಭಾಶಾಲಿಯೆಂದು ಬಲ್ಲೆ ನಾನು. ನಿನ್ನಲ್ಲಿ ಸೃಜನಶೀಲತೆಯಿದೆ, ಜತೆಗೆ ಒಂದು ಕೊರತೆಯೂ ಇದೆ. ನಿನ್ನ ಪುಟ್ಟ ಪುಟ್ಟ ಸಫಲತೆಗಳು ನಿನ್ನಲ್ಲಿ ಅಹಂಕಾರವನ್ನು ಹುಟ್ಟು ಹಾಕಿದವು. ನೀನು ಪ್ರತಿಯೊಂದು ಕೆಲಸವನ್ನೂ ತರಾತುರಿಯಲ್ಲಿ ಮಾಡುತ್ತೀ. ನಿನ್ನ ಕೆಲಸದಲ್ಲಿ ಅಸಡ್ಡೆ ಸೇರಿದೆ. ಒಬ್ಬ ಸಾಹಿತಿಗೆ ಅಹಂಕಾರ ಹಾಗೂ ಗಡಿಬಿಡಿ ಇವೆರಡೂ ವರ್ಜ್ಯ.

ಇನ್ನು ಮುಂದೆ ಯಾವ ಕೆಲಸವನ್ನೂ ಆತುರ ಆತುರವಾಗಿ ಮಾಡುವುದಿಲ್ಲವೆಂದು ಇಂದೇ ದೃಢನಿರ್ಧಾರ ಮಾಡು. ಅಲ್ಲದೆ ಸಫಲತೆ ದೊರೆತಾಗ ಅಹಂಕಾರ ಪಡುವುದನ್ನೂ ನಿಲ್ಲಿಸು" ಅಕ್ಕ ಮಾತು ಮುಗಿಸಿದಳು.

ಹೆಮಿಂಗ್ವೇ ಅಕ್ಕನ ಉಪದೇಶವನ್ನು ತಪ್ಪದೆ ಪಾಲಿಸಿದ.

ಈ ಹೆಮಿಂಗ್ವೇ ಮುಂದೆ ವಿಶ್ವವಿಖ್ಯಾತ ಸಾಹಿತಿಯೆನಿಸಿದ. ಸಾಹಿತ್ಯದ ಸರ್ವೋಚ್ಚ ಪ್ರಶಸ್ತಿಯಾದ 'ನೋಬಲ್ ಪುರಸ್ಕಾರ'ವೂ ಇವನಿಗೆ ಲಭಿಸಿತು. (ಸಂಗ್ರಹ)

ನಿವೃತ್ತ ಅಧ್ಯಾಪಕರು, ಸಂಡೂರು, ಬಳ್ಳಾರಿ ಜಿಲ್ಲೆ. 583 119



# ಬಿಂಬಪ್ರತಿಬಿಂಬಗಳ ಸಮಾನ ನಡತೆ

ಸಗ್ರಿ ರಾಘವೇಂದ್ರ ಉಪಾಧ್ಯಾಯ



**ವ**ನವಾಸದ ಸಂದರ್ಭದಲ್ಲಿ ದಂಡಕಾರಣ್ಯದಲ್ಲಿ ಸೀತಾದೇವಿ ಮಾಯಾಮಯವಾದ ಚಿನ್ನದ ಜಿಂಕೆಯ ಮೋಹಕ್ಕೊಳಗಾದಳೆಂದು ರಾಮಾಯಣ ಉಲ್ಲೇಖಿಸಿದೆ.

## ಶ್ರೀ ಮಧ್ವರ ನಿರ್ಣಯ :

ಸೀತಾದೇವಿ ನಿಜವಾಗಿಯೂ ಮೋಹಕ್ಕೊಳಗಾದಳೆಂದೇ ಇಟ್ಟುಕೊಂಡು 'ಆಪತ್ತಿನ ಕಾಲದಲ್ಲಿ ಮಹಾತ್ಮರ ಮನಸ್ಸೂ ಕಲುಷಿತವಾಗುವುದು' - ಎಂದು ಸಿದ್ಧಾಂತಿಸಿರುವ ಸುಭಾಷಿತಗಳೂ ಹೊರಟಿವೆಯಾದರೂ ಶ್ರೀ ಮಧ್ವರು ಸೀತಾದೇವಿಯ ಆ ನಡತೆಯ ಬಗ್ಗೆ ತಮ್ಮ ಮಹಾಭಾರತ ತಾತ್ಪರ್ಯ ನಿರ್ಣಯದಲ್ಲಿ (5-32) ಹೀಗೆ ಸ್ಪಷ್ಟಪಡಿಸಿರುವರು -

**ನಿರ್ದೋಷನಿತ್ಯವರಸಂವಿದಪಿ ಸ್ಮ ದೇವೀ**

**ರಕ್ಷೋವಧಾಯ ಜನಮೋಹಕೃತೇ ತಥಾಽಹ**

ಸೀತಾದೇವಿ ನಿರ್ದುಷ್ಟವಾದ ಜ್ಞಾನವನ್ನು ಯಾವಾಗಲೂ ಹೊಂದಿರುವವಳು. ಆದುದರಿಂದ ಚಿನ್ನದ ಜಿಂಕೆಯ ವಿಷಯದಲ್ಲಿ ಅವಳು ಮೋಹಕ್ಕೆ ಒಳಗಾಗಲು ಸಾಧ್ಯವೇ ಇಲ್ಲ. ಆದರೂ ಮೋಹಕ್ಕೊಳಗಾದವಳಂತೆ ನಟಿಸಿದ್ದು ರಾಮಚಂದ್ರನ ಮೂಲಕ ನಡೆಯಬೇಕಾದ ಮಾರೀಚಾದಿ ರಾಕ್ಷಸರ ಸಂಹಾರಕ್ಕೆ ಸರಿಯಾದ ಭೂಮಿಕೆಯನ್ನು ರಚಿಸುವುದಕ್ಕಾಗಿ. ಸೀತಾದೇವಿ ಜಿಂಕೆಯ ಬಗ್ಗೆ ಮೋಹಗೊಂಡವಳಂತೆ ನಟಿಸಿ, ಆ ಜಿಂಕೆಯನ್ನು ತಂದುಕೊಡಬೇಕೆಂದು ಶ್ರೀರಾಮಚಂದ್ರನಲ್ಲಿ ಪಟ್ಟು ಹಿಡಿದದ್ದರಿಂದ ತಾನೇ ರಾಮನ ಮೂಲಕ ಮಾರೀಚಾದಿಗಳ ಸಂಹಾರ ನಡೆಯಲು ಬೇಕಾದ ವಾತಾವರಣ ನಿರ್ಮಾಣವಾಯಿತು!

ಅಯೋಗ್ಯರು ಸೀತಾದೇವಿಯ ವ್ಯಕ್ತಿತ್ವವನ್ನು ತಪ್ಪಾಗಿ ತಿಳಿಯುವಂತಾಗಬೇಕೆಂಬುದೂ ಆ ನಟನೆಯ ಉದ್ದೇಶವಾಗಿತ್ತು.

## ದ್ರೌಪದಿಯ ಸಮಾನ ನಡತೆ :

ಹೀಗೆ ರಾಮಾಯಣದಲ್ಲಿ ಸೀತಾದೇವಿ ಚಿನ್ನದ ಜಿಂಕೆಯ ಮೋಹಕ್ಕೊಳಗಾಗಿ ನಡೆದುಕೊಂಡ ಘಟನೆಯ ನಿರೂಪಣೆ ನಡೆದಿದ್ದರೆ, ಮಹಾಭಾರತದಲ್ಲಿ ಇಂತಹದ್ದೇ ಒಂದು ಘಟನೆಯ ಉಲ್ಲೇಖ ಬಂದಿದೆ.

ವೇದಾಂತ ಉಪನ್ಯಾಸಕರು, ಸಂಸ್ಕೃತ ಕಾಲೇಜು, ಉಡುಪಿ



ಪಾಂಡವರು ವನವಾಸದಲ್ಲಿದ್ದಾಗ ಹಿಮಾಲಯದ ಬದರಿಕಾಶ್ರಮಕ್ಕೆ ಬಂದಿದ್ದರು. ಈಶಾನ್ಯದಿಕ್ಕಿನಿಂದ ಗಾಳಿ ಬಂದು ಸಾವಿರ ದಳಗಳನ್ನೊಳಗೊಂಡ ಒಂದು ಕಮಲ ದ್ರೌಪದಿಯ ಎದುರು ಬಂದು ಬೀಳುವುದು. ಅದನ್ನು ಕಂಡು ಸಂತುಷ್ಟಳಾದ ದ್ರೌಪದಿ

**ಯದಿ ತೇಽಹಂ ಪ್ರಿಯಾ ಪಾರ್ಥ ಬಹೂನೀಮಾನ್ಯಾಹರ** (ಮ. ಭಾ. ವನ 146-5)

ನಿನಗೆ ನಾನು ಪ್ರಿಯಳಾಗಿದ್ದರೆ ಇಂತಹ ಬಹು ಹೂಗಳನ್ನು ನನಗೆ ತಂದುಕೊಡು ಎಂದು ಭೀಮಸೇನನಲ್ಲಿ ಪಟ್ಟು ಹಿಡಿಯುವಳು.

**ಅಹಂಕಾರಂ ವಿಹಾಯಾಹಂ ಕಾಮಕ್ರೋಧೌ ಚ ಸರ್ವದಾ ।**

**.... ನಿತ್ಯಂ ಪ್ರಯತೋಪಚರಾಮ್ಯಹಮ್** (ವನ 233-19)

ತಾನು ಅಹಂಕಾರಾದಿ ಮಾನಸಿಕ ದೋಷಗಳನ್ನು ಹೇಗೋ ಹಾಗೆಯೇ ಯಾವುದೇ ಬಗೆಯ ಕಾಮನೆಯನ್ನೂ ಇಟ್ಟುಕೊಳ್ಳದೆ ಪತಿಯಂದಿರನ್ನು ಉಪಚರಿಸುವವಳೆಂದು ಸತ್ಯಭಾಮೆಯ ಎದುರು ಹೇಳಿಕೊಂಡಿರುವ ದ್ರೌಪದಿ ಸಾಮಾನ್ಯ ಮಹಿಳೆಯಂತೆ ಆ ಹೂಗಳ ಚಾಪಲ್ಯಕ್ಕೆ ಯಾಕೆ ಒಳಗಾದಳು? ಶ್ರೀ ಮಧ್ವರೂ ಆ ಸಂದರ್ಭದಲ್ಲಿ ದ್ರೌಪದಿಯ ಆ ನಡತೆಯ ಬಗ್ಗೆ ಹೆಚ್ಚು ಬೆಳಕು ಚೆಲ್ಲುವುದಿಲ್ಲ. '....ಕುತೂಹಲಾದ್ ದ್ರೌಪದೀ ಭೀಮಸೇನಂ ಬಹೂನ್ಯಾಚಯತ್' (ಮ. ಭಾ. ತಾ. ನಿ. 22-290) ಎಂಬುದಾಗಿ ಕುತೂಹಲಕ್ಕೊಳಗಾಗಿ ದ್ರೌಪದಿ ಅಂತಹ ಬಹುಹೂಗಳನ್ನು ತರಲು ಬೇಡಿಕೊಂಡಳೆಂದಷ್ಟೇ ನಿರೂಪಿಸಿರುವರು.

## ಬಿಂಬದಂತೆ ಪ್ರತಿಬಿಂಬ :

ದ್ರೌಪದೀದೇವಿ ಸೀತಾದೇವಿಯ ಪ್ರತಿಬಿಂಬ. 'ಆಭಾಸಕಾ ತ್ವಥ ರಮಾಽಸ್ಯ... ತದನುಗೀಃ ಶಿವತೋ ವರಿಷ್ಠಾ' (ಮ. ಭಾ. ತಾ. ನಿ. 1-15) ಎಂಬ ಮಾತಿನಲ್ಲಿ ರಮಾದೇವಿ ಪರಮಾತ್ಮನ ಪ್ರತಿಬಿಂಬಳಾಗಿದ್ದರೆ ಅಂತಹ ರಮಾದೇವಿಯ ಪ್ರತಿಬಿಂಬ ಸರಸ್ವತಿ - ಭಾರತಿಯರು ಎಂದು ಶ್ರೀ ಮಧ್ವರು ಸೀತಾದೇವಿ - ದ್ರೌಪದಿದೇವಿಯರ ಬಿಂಬಪ್ರತಿಬಿಂಬ ಭಾವರೂಪವಾದ

*With Best Compliments from :*
Ph.: 2365931, 2216327 (O)
2216326, 2247066 (R)
**SHARMA ENTERPRISES**
*Distributors of Karthikeya Papers & Boards Ltd.*
Kubsad Galli, HUBLI -580 028
*Dealers in Papers & Boards, Wedding Cards,*
*Mfg. of Students Note Books & Envelopes*

ಸಂಬಂಧವನ್ನು ಸ್ಪಷ್ಟಪಡಿಸಿರುವರು. ಆದ್ದರಿಂದ ಬಿಂಬ ಸ್ಥಾನೀಯಳಾದ ಸೀತಾದೇವಿ ನಡೆದುಕೊಂಡಂತೆ ಅವಳ ಪ್ರತಿಬಿಂಬಳಾಗಿರುವ ದ್ರೌಪದಿ ನಡೆದುಕೊಳ್ಳುವುದು ಸಹಜ. 'ರಕ್ಷೋವಧಾಯ'- ಎಂದಿರುವಂತೆ ಸೀತಾದೇವಿ ರಾಕ್ಷಸರ ಸಂಹಾರಕ್ಕೆ ವೇದಿಕೆಯನ್ನು ರಚಿಸುವುದಕ್ಕಾಗಿ ಚಿನ್ನದ ಜಿಂಕೆಯ ಮೋಹಕ್ಕೊಳಗಾದವಳಂತೆ ನಡೆದುಕೊಂಡಿದ್ದರೆ, ದ್ರೌಪದಿ ದೇವಿಯೂ ಭೀಮಸೇನನ ಮೂಲಕ ರಾಕ್ಷಸರ ಸಂಹಾರ ನಡೆಯುವಂತಾಗಲೆಂದೇ ಚಿನ್ನದ ಕಮಲ ಹೂಗಳ ಮೋಹಕ್ಕೆ ಒಳಗಾದವಳಂತೆ ನಡೆದುಕೊಂಡಿರುವಳು. ಆಕೆಯ ಉದ್ದೇಶದಂತೆ ಭೀಮಸೇನ ಗಂಧಮಾದನ ಪರ್ವತಕ್ಕೆ ಹೋಗಿ ಅಲ್ಲಿ ನೂರುಕೋಟಿ ಸಂಖ್ಯೆಯ ಕ್ರೋಧವಶ ಎಂಬ ರಾಕ್ಷಸರನ್ನು ಸಂಹರಿಸುವಂತಾಯಿತು.

ಆದುದರಿಂದ ದ್ರೌಪದಿ ಸೌಗಂಧಿಕ ಪುಷ್ಪಗಳನ್ನು ಅಪೇಕ್ಷಿಸಿದುದು ತನ್ನ ಪತಿಯ ಮೂಲಕ ದುಷ್ಟ ಸಂಹಾರ ರೂಪವಾದ ಸೇವೆ ನಡೆಯಲು ಪುಷ್ಟಿ ನೀಡುವುದಕ್ಕಾಗಿಯೇ ಹೊರತು ತನಗಾಗಿ ಅಲ್ಲ.

**ಯಶಸ್ಸು ಮತ್ತು ಧರ್ಮಗಳ ಅಭಿವೃದ್ಧಿಗಾಗಿ :**

ಮುಂದೆ ಕೆಲವು ದಿನಗಳ ಬಳಿಕ ಪಂಚವರ್ಣದ ಕಮಲಗಳನ್ನು ತರಲು ಭೀಮಸೇನನನ್ನು ಒತ್ತಾಯಿಸಿದರ ಉದ್ದೇಶ '... ಉವಾಚ ಭೀಮಸೇನಸ್ಯ ಯಶೋಧರ್ಮಾಭಿವೃದ್ಧಯೇ' (22-311) ಭೀಮಸೇನನಿಗೆ ಯಶಸ್ಸು ಹಾಗೂ ಧರ್ಮ ಅಭಿವೃದ್ಧಿಯಾಗಲಿ - ಎಂದು ಶ್ರೀ ಮಧ್ವರು ನಿರ್ಣಯಿಸಿರುವರು. ಈ ನಿರ್ಣಯವನ್ನೇ ದ್ರೌಪದಿಯ ಸೌಗಂಧಿಕ ಪುಷ್ಪಾಹರಣಾಪೇಕ್ಷೆಗೂ ಅನ್ವಯಿಸಿಕೊಳ್ಳಬೇಕು. ಅಂದರೆ ಭೀಮಸೇನನ ಯಶಸ್ಸು ಮತ್ತು ಪುಣ್ಯ ಹೆಚ್ಚಾಗಲೆಂದೇ ದ್ರೌಪದಿ ಸೌಗಂಧಿಕ ಪುಷ್ಪಗಳ ಅಪೇಕ್ಷೆಯನ್ನು ವ್ಯಕ್ತಪಡಿಸಿರುವಳು.

**ಪತಿಸೇವೆಯೇ ಹೊರತು ಪುಷ್ಪ ಚಾಪಲ್ಯವಲ್ಲ :**

ಅಂತೂ ರಾಮಾಯಣ ಹಾಗೂ ಮಹಾಭಾರತ ಈ ಎರಡು ಇತಿಹಾಸಗಳಲ್ಲೂ ಮೇಲ್ನೋಟಕ್ಕೆ ಚಿನ್ನದ ಜಿಂಕೆಯ ವ್ಯಾಮೋಹದಂತೆ, ಚಿನ್ನದ ಕಮಲದ ಚಾಪಲ್ಯದಂತೆ ಚಿತ್ರಿತವಾಗಿರುವ ಪತಿವ್ರತಾಶಿರೋಮಣಿಗಳ ನಡತೆ ಪತಿದೇವನ ಯಶಸ್ಸು ಮುಂತಾದುವನ್ನು ಅಭಿವೃದ್ಧಿ ಪಡಿಸುವುದಕ್ಕಾಗಿ ನಡೆಸಲಾದ ಪತಿಸೇವಾರೂಪವಾದದ್ದು. ★



*With Best Compliments from :*

**LAXMIDAS JEWELLERS**

"Megha Building" Balmatta Road,
Mangalore - 575 001.

**Phone : 2426060, 2421760**

# ಚೈತ್ರ ಮಾಸದ ಏಕಾದಶಿ ಕಥೆಗಳು

**ಅಚಿಂಜ್ಯೋ ಬಿಣಗಾ**

ಯುಧಿಷ್ಠಿರನು ವಾಸುದೇವನಿಗೆ ವಂದಿಸುತ್ತಾ ಚೈತ್ರ ಮಾಸದ ಶುಕ್ಲ ಪಕ್ಷದ ಏಕಾದಶಿಯ ಕುರಿತು ಪ್ರಶ್ನಿಸಿದಾಗ ವಸಿಷ್ಠ ಮಹರ್ಷಿ ಹಾಗೂ ದಿಲೀಪ ಚಕ್ರವರ್ತಿ ಇವರೊಳಗೆ ಈ ಹಿಂದೆ ನಡೆದ ಸಂವಾದಾತ್ಮಕವಾಗಿರುವ ಚೈತ್ರ ಶುಕ್ಲ ಏಕಾದಶಿಯಾದ ಕಾಮದಾ ಏಕಾದಶಿಯ ಮಹಿಮೆಯನ್ನು ಈ ರೀತಿಯಾಗಿ ವಿವರಿಸುತ್ತಾನೆ.

ಚೈತ್ರ ಮಾಸದ ಶುಕ್ಲ ಪಕ್ಷದ ಕಾಮದಾ ಏಕಾದಶಿಯು ಪರಮಪುಣ್ಯದಾಯಕವಾಗಿದ್ದು, ಪಾಪರೂಪದ ಇಂಧನವನ್ನು ಸುಡುವ ದಾವಾನಲವಾಗಿದೆ.

ಹಿಂದಕ್ಕೆ ಬಂಗಾರದ ಮಹಲ್ಲುಗಳಿಂದ ಕೂಡಿದ ನಾಗಪುರವೆಂಬ ಸುಂದರ ನಗರದಲ್ಲಿ ಪುಂಡರೀಕ ಮೊದಲಾದ ಅತಿ ಭಯಂಕರ ನಾಗಗಳು ವಾಸವಾಗಿದ್ದವು. ಗಂಧರ್ವ ಕಿನ್ನರ ಅಪ್ಸರೆಯರು ಈ ನಗರವನ್ನು ಸೇವಿಸುತ್ತಿದ್ದರು. ಲಲಿತೆ ಎಂಬ ಶ್ರೇಷ್ಠ ಅಪ್ಸರೆಯು ಲಲಿತನೆಂಬ ಗಂಧರ್ವನೊಡನೆ ವಾಸಿಸುತ್ತಿದ್ದರು. ಗಂಡ ಹೆಂಡತಿಯರಾದ ಇಬ್ಬರೂ ಕಾಮಪೀಡಿತರಾಗಿದ್ದರು. ಒಮ್ಮೆ ನಾಗರಾಜನಾದ ಪುಂಡರೀಕನು ರಾಜಸಭೆಯಲ್ಲಿ ಆಸೀನನಾದಾಗ ಮನೋರಂಜನೆ ನಡೆಯುವಾಗ ಲಲಿತನೊಬ್ಬನೇ ಬಂದು ಹಾಡುತ್ತಿದ್ದನು ಆಗ ಲಲಿತನಿಗೆ ಲಲಿತೆಯ ನೆನಪು ಬಂತು. ಹಾಡಿನಲ್ಲಿ ತಪ್ಪು ಉಂಟಾಗಿ ತಡವರಿಸತೊಡಗಿದನು. ನಾಗಗಳಲ್ಲಿ ಶ್ರೇಷ್ಠನಾದ ಕಾರ್ಕೋಟಕ ಲಲಿತನ ಮನದಳಲು ತಿಳಿದು ಈ ಸಂಗತಿಯನ್ನು ಪುಂಡರೀಕನಿಗೆ ತಿಳಿಸಿದನು. ಕಾರ್ಕೋಟಕನ ನುಡಿಯನ್ನು ಕೇಳಿ ನಾಗರಾಜನಾದ ಪುಂಡರೀಕನ ಕಂಗಳಲ್ಲಿ ಕ್ರೋಧವು ತುಂಬಿತು. ಅವನು ಕಾಮಾತುರನಾದ ಲಲಿತನಿಗೆ ನೀನು ನನ್ನ ಮುಂದೆ ಹಾಡುವಾಗಲೂ ಕೂಡ ಹೆಂಡತಿಯ ವಶೀಭೂತನಾಗಿರುತ್ತಿ. ಹೀಗಾಗಿ ನೀನು ರಾಕ್ಷಸನಾಗು ಎಂದು ಶಾಪ ನೀಡಿದನು.

ಪುಂಡರೀಕ ಮಹಾರಾಜನು ಹೀಗೆ ಶಾಪ ನೀಡುತ್ತಿದ್ದಂತೆ ಈ ಗಂಧರ್ವನು ರಕ್ಕಸನಾಗಿ ಕರ್ಮಫಲವನ್ನು ಭೋಗಿಸಹತ್ತಿದನು. ಲಲಿತೆ ತನ್ನ ಗಂಡನ ಆಕೃತಿ ಕಂಡು ಚಿಂತಾಗ್ರಸ್ತೆಯಾಗಿ ಅಳುತ್ತ ಗಂಡನ ಮುಂದೆ ಅಡವಿಗೆ ಹೋದಳು. ಅಲ್ಲಿರುವ ಆಶ್ರಮವನ್ನು ಕಂಡು ಮುನಿಯನ್ನು ನೋಡಿ ನಮಸ್ಕರಿಸಿದಾಗ ಮುನಿಯು ನೀನು ಯಾರು ಎಂದು ಪ್ರಶ್ನಿಸಿದನು. ಆಗ ಲಲಿತೆಯು ನಾನು ಗಂಧರ್ವ ಕನ್ಯೆಯೂ ನನ್ನ ಸ್ವಾಮಿಯು ಪಾಪದೋಷಗಳಿಂದ ರಾಕ್ಷಸನಾಗಿದ್ದಾನೆ. ರಾಕ್ಷಸ ಗುಣದಿಂದ ಬಿಡುಗಡೆ ಹೊಂದುವ ಉಪಾಯವನ್ನು ತಿಳಿಸಬೇಕು ಎಂದು ಬೇಡಿಕೊಂಡಾಗ ಮುನಿಯು ಪಾಪ ನಾಶಕವಾದ ಕಾಮದಾ ಏಕಾದಶಿಯ ವ್ರತವನ್ನು ನೀನು ಮಾಡು. ವ್ರತದ ಪುಣ್ಯವನ್ನು ನೀನು ಸ್ವಾಮಿಗೆ ನೀಡಿದ ಕ್ಷಣದಲ್ಲಿ ಶಾಪವು ದೂರವಾಗುವುದು ಎಂದು ತಿಳಿಸಿದನು. ಮುನಿಯ ಮಾತನ್ನು ಕೇಳಿ ಆನಂದಿತಳಾದ ಲಲಿತೆಯು ಏಕಾದಶಿಯ ವ್ರತ ಮಾಡಿ ದ್ವಾದಶಿಯಂದು

ಏಕಾದಶಿ ಮಹಿಮೆ

**ಅನಂತ ಚಿಂತಾಮಣಿ ಜ್ಯೋತಿಷೀ, ಬಿಣಗಾ, ಕಾರವಾರ**



ಈ ಬ್ರಹ್ಮರ್ಷಿಯ ಹತ್ತಿರ ವಾಸುದೇವನ ಶ್ರೀ ವಿಗ್ರಹದ ಸಮಕ್ಷ ತನ್ನ ಪತಿಯ ಉದ್ಧಾರಕ್ಕಾಗಿ ಪುಣ್ಯವನ್ನು ಧಾರೆಯೆರೆದು ನೀಡಿದಾಗ ಲಲಿತನ ಪಾಪ ದೂರವಾಯಿತು. ರಾಕ್ಷಸ ಭಾವ ಹೊರಟು ಹೋಗಿ ಗಂಧರ್ವತ್ವವು ಪ್ರಾಪ್ತವಾಯಿತು. ಅವರಿಬ್ಬರೂ ಕಾಮದಾ ಏಕಾದಶಿಯ ಪ್ರಭಾವದಿಂದ ಮೊದಲಿನಂತೆ ಸುಂದರ ರೂಪ ಧರಿಸಿ ವಿಮಾನವೇರಿ ಹೊರಟರು. ಕಾಮದಾ ಏಕಾದಶಿಯು ಬ್ರಹ್ಮ ಹತ್ಯಾದಿ ಪಾಪಗಳನ್ನು ಮತ್ತು ಪಿಶಾಚ ದೋಷವನ್ನು ನಾಶಗೊಳಿಸುತ್ತದೆ. ಈ ವ್ರತ ಕಥೆಯ ಪುಣ್ಯ ಶ್ರವಣದಿಂದ ವಾಜಪೇಯ ಯಜ್ಞದ ಫಲವು ಲಭಿಸುತ್ತದೆ.

## ವರೂಥಿನಿ ಏಕಾದಶಿ

ಶ್ರೀಕೃಷ್ಣನು ಯುಧಿಷ್ಠಿರನಿಗೆ ವರೂಥಿನಿ ಏಕಾದಶಿಯ ಮಹಿಮೆಯನ್ನು ತಿಳಿಸುತ್ತಾನೆ. ವರೂಥಿನಿ ಏಕಾದಶಿಯು ಇಹ ಹಾಗೂ ಪರಲೋಕದಲ್ಲಿ ಸೌಭಾಗ್ಯದಾಯಕವಾಗಿದ್ದು ಸೌಖ್ಯಲಾಭ ಪಾಪಹಾನಿ ಆಗುತ್ತದೆ. ಮಾಂಧಾತಾ ಮತ್ತು ಧುಂಧುಮಾರಾದಿ ಮಹಾರಾಜರಿಗೆ ಸ್ವರ್ಗ ಲೋಕಪ್ರಾಪ್ತಿಯಾಗಿದೆ. ಹತ್ತು ಸಾವಿರ ವರ್ಷಗಳ ತಪಸ್ಸಿನ ಫಲಕ್ಕೆ ವರೂಥಿನಿ ಏಕಾದಶಿಯು ಸಮವಾಗಿದೆ.

ಕುದುರೆ ದಾನಕ್ಕಿಂತ ಆನೆಯ ದಾನವೂ, ಅದಕ್ಕಿಂತ ಭೂಮಿದಾನ, ಅದಕ್ಕಿಂತ ತಿಲದಾನ, ತಿಲದಾನಕ್ಕಿಂತ ಸ್ವರ್ಣದಾನ, ಸ್ವರ್ಣದಾನಕ್ಕಿಂತ ಅನ್ನದಾನವು ಶ್ರೇಷ್ಠವಾಗಿದೆ. ವಿದ್ವಾಂಸರು ಕನ್ಯಾದಾನವನ್ನು ಅನ್ನದಾನಕ್ಕೆ ಸಮವೆಂದಿದ್ದಾರೆ. ಕನ್ಯಾದಾನವು ಧೇನುದಾನಕ್ಕೆ ಸಮವಾಗಿದೆ ಇವೆಲ್ಲಕ್ಕಿಂತ ಹೆಚ್ಚಿನದಾದ ವಿದ್ಯಾದಾನದ ಫಲವನ್ನು ವರೂಥಿನಿ ಏಕಾದಶಿಯು ದೊರಕಿಸಿಕೊಡುತ್ತದೆ. ಹೀಗೆ ವರೂಥಿನೀ ಏಕಾದಶಿಯು ಮಹಿಮಾಸಂಪನ್ನವಾಗಿದೆ.

ವ್ರತ ಮಾಡುವ ವೈಷ್ಣವರು ಕಂಚು, ಉದ್ದು ಮೊದಲಾದ ಹತ್ತು ವಸ್ತುಗಳನ್ನು ದಶಮಿಯಂದು ತ್ಯಜಿಸಬೇಕು. ಏಕಾದಶಿಯಂದು ಜೂಜಾಟ, ನಿದ್ರಿಸುವಿಕೆ ಅಸತ್ಯ ಮಾತು, ತಾಂಬೂಲ ಸೇವನೆ ಮೊದಲಾದ ಹನ್ನೊಂದು ಸಂಗತಿಯನ್ನು ತ್ಯಜಿಸಬೇಕು. ದ್ವಾದಶಿಯಂದು ಕಂಚು, ಉದ್ದು, ಮದಿರೆ, ಮಧು, ತೈಲ, ಪತಿತರೊಂದಿಗೆ ಹರಟೆ, ವ್ಯಾಯಾಮ, ಪರದೇಶಗಮನ, ಎತ್ತಿನ ಮೇಲೆ ಸವಾರಿ, ಎರಡು ಬಾರಿ ಊಟ, ಮೈಥುನ ಮೊದಲಾದವುಗಳನ್ನು ತ್ಯಜಿಸಿ ವರೂಥಿನೀ ಏಕಾದಶಿ ವ್ರತ ಮಾಡಬೇಕು. ರಾತ್ರಿಗೆ ಜಾಗರಣೆ ಹೊಂದಿ ಮಧುಸೂದನ ಪೂಜೆ ಮಾಡಿದರೆ ಪುಣ್ಯ ಪ್ರಾಪ್ತಿಯಾಗುವುದು. ವ್ರತಕಥೆ ಪಠಣ, ಶ್ರವಣದಿಂದ ಸಹಸ್ರ ಗೋದಾನ ಫಲ ಹಾಗೂ ವಿಷ್ಣು ಸಾಯುಜ್ಯವು ಲಭಿಸುತ್ತದೆ. ★

*With Best Compliments from :*



***"Bedsheet People"***

**"In Textile Field Since 1910"**

***RAJASHREE TEXTILE TRADERS***

Vasudev Enclave, Maidan 4th Cross Road, Mangalore - 575 001.

Phone : 2426624, 2421216, 5266624.

# ಗಳಿಕೆ, ಬಳಕೆ ಮತ್ತು ಉಳಿಕೆ

ಡಾ। ಎಚ್. ವಿ. ನರಸಿಂಹ ಮೂರ್ತಿ

ಗಳಿಕೆ, ಬಳಕೆ ಮತ್ತು ಉಳಿಕೆ - ಇವು ಸಮರ್ಥ ಜೀವನದ ಸಾರ್ಥಕ ಮಂತ್ರಗಳು. ಮಾನವ ಬದುಕಬೇಕು. ಅದಕ್ಕಾಗಿ ಅನೇಕ ಸಾಮಗ್ರಿಗಳು ಬೇಕು. ಅತಿಮುಖ್ಯವಾದ ಸಾಮಗ್ರಿಯೆಂದರೆ ಆಹಾರ. ಈ ಆಹಾರ ಮಾನವ ಸೃಷ್ಟಿಸುವ ವಸ್ತುವಲ್ಲ. ವಿಜ್ಞಾನ ಬಹುದೂರ ಸಾಗಿದೆ ನಿಜ. ಆದರೆ ಪ್ರಕೃತಿಯ ನೆರವಿಲ್ಲದೆ ಒಂದು ಕಾಳನ್ನು, ಒಂದು ಹನಿ ನೀರನ್ನು, ಒಂದು ಹಿಡಿ ಗಾಳಿಯನ್ನು ಸೃಷ್ಟಿಸಲು ನಮ್ಮಿಂದ ಸಾಧ್ಯವಿಲ್ಲ.

ಆದರೆ ಇವೆಲ್ಲದರ ಉತ್ಪನ್ನಕ್ಕೆ ಸೂಕ್ತ ಪರಿಸರವನ್ನು ಮಾತ್ರ ನಾವು ನಿರ್ಮಾಣ ಮಾಡಬಹುದು; ಮಾಡುತ್ತೇವೆ; ಮಾಡಬೇಕಾಗುತ್ತದೆ. ನೆಲ, ಜಲ, ಗಾಳಿ, ಆಕಾಶ ಮತ್ತು ಬೆಳಕಿಲ್ಲದೆ ಧಾನ್ಯ ಬೆಳೆಯದು; ಜೀವ ಉಳಿಯದು.

ಈ ಪಂಚ ಭೂತಗಳನ್ನು ಸೃಷ್ಟಿ ಮಾಡಲಿಲ್ಲ; ಮಾಡಲು ಸಾಧ್ಯವೂ ಇಲ್ಲ. ಅವು ಯಾರಿಂದಲೋ, ಯಾವಾಗಲೋ, ಹೇಗೋ ಸೃಷ್ಟಿಯಾಗಿವೆ. ಎಂದೋ, ಯಾರೋ ಸೃಷ್ಟಿಸಿದ ಕಾಳು ಒಂದಕ್ಕೆ ಸಾವಿರವಾಗಿ ಬೆಳೆದು, ನಮ್ಮನ್ನು ಬದುಕಿಸುತ್ತದೆ. ಅದಕ್ಕೆ ದೈವದತ್ತವಾದ ನೆಲ, ಜಲ, ಗಾಳಿ ಮತ್ತು ಬೆಳಕನ್ನು ಅಣಿಗೊಳಿಸುವುದು ಮಾತ್ರ ನಮ್ಮ ಕರ್ತವ್ಯ. ಈ ಕರ್ತವ್ಯವೇ ನಮಗೆ ಫಲವನ್ನು ಕೊಡುತ್ತದೆ. ಇದನ್ನೇ ಗಳಿಕೆ ಎನ್ನುವುದು.

ಬದುಕಿನಲ್ಲಿ ಗಳಿಕೆಯೇ ಮೊದಲ ಮಂತ್ರ; ಮೂಲ ತಂತ್ರ. ಜೀವಿಯು ಪ್ರಕೃತಿಯೊಡನೆ ಬೆರೆತು, ಅದರಿಂದ ದೇಣಿಗೆಯನ್ನು ಪಡೆಯುವುದು ಗಳಿಕೆಯ ನೈಜ ಅರ್ಥ. ಅದನ್ನೇ ಶರಣರು 'ಕಾಯಕ'ವೆಂದರು. 'ಕಾಯಕವೇ ಕೈಲಾಸ'ವೆಂದರು. 'ಕಾಯಕವೆಂದು ಕಾಯವ ಬಳಲಿಸದೆ, ತನು ಕರಗದೆ, ಮನ ನೋಯದೆ, ಬೇಡಿ - ಕಾಡಿ ಮಾಡುವುದು ದಾಸೋಹವೆ?' ಎನ್ನುತ್ತಾರೆ, ಶರಣರು. ದೇಹ ದುಡಿಮೆಯಲ್ಲಿ ಒಡಗೂಡಬೇಕು; ಅದಕ್ಕೆ ಬುದ್ಧಿ ಬೆಳಕಾಗಬೇಕು; ಮನಸ್ಸು ಪೂರಕವಾಗಬೇಕು. ಅದೇ ಕಾಯಕ; ಅದೇ ಕರ್ಮಯೋಗ. ಅದರಿಂದ ಬಂದ ಫಲಶ್ರೇಷ್ಠ ಮತ್ತು ಶ್ರೇಯಸ್ಕರ.

ಇನ್ನು ಬಳಕೆ ಜೀವನದ ಎರಡನೆ ಮಂತ್ರ. ನಾವು ಬದುಕಿರಲು ಆಹಾರ ಬೇಕು. ಅದರಂತೆ ಬೇರೆ ವಸ್ತುಗಳ ಅವಶ್ಯಕತೆಯೂ ಇದೆ. ಆಹಾರಕ್ಕಾಗಿಯೇ ಬದುಕುವವರೂ ಇದ್ದಾರೆ. ಬದುಕಿಗೆ ಅವಶ್ಯವಿಲ್ಲದ ಆಹಾರಗಳನ್ನೂ ಅವಶ್ಯಕತೆಗಿಂತ ಹೆಚ್ಚು ಆಹಾರವನ್ನೂ, ಅಸಾಧ್ಯ ವಸ್ತುಗಳನ್ನೂ ಬಳಸುವ ಪ್ರವೃತ್ತಿ ಬೆಳೆದಿದೆ. ವ್ಯಕ್ತಿಪ್ರತಿಷ್ಠೆಗಾಗಿ ಆಗುವ ದುಂದುವೆಚ್ಚವನ್ನು ತಡೆದರೆ ಅನೇಕರಿಗೆ ಅರೆಹೊಟ್ಟೆಗಾದರೂ ಅನ್ನ

'ಚೇತನಾ', ನೇರಂಬಳ್ಳಿ ರೋಡ್, ಕೊಟೇಶ್ವರ - 576 222, ಕುಂದಾಪುರ ತಾಲೂಕು.



ದೊರೆಯುತ್ತದೆ.

ಪ್ರತಿಷ್ಠಿತ ಸಮಾರಂಭಗಳು ದುಂದುವೆಚ್ಚದ ಆಗರಗಳಾಗಿವೆ. ಇಂತಹ ಪ್ರಸಂಗದಲ್ಲಿ ಒಬ್ಬ ವ್ಯಕ್ತಿ ಮಾಡುವ ಹಣದ ವೆಚ್ಚವಷ್ಟೇ ವ್ಯರ್ಥವಲ್ಲ. ಅವರನ್ನು ಸಂತೋಷಪಡಿಸಲು ಸಮಾರಂಭಕ್ಕೆ ಹೋಗುವವರು ತಮ್ಮ ಸಮಯವನ್ನು, ಹಣವನ್ನು ವ್ಯರ್ಥವಾಗಿ ವೆಚ್ಚಮಾಡಬೇಕಾಗುತ್ತದೆ. ಶ್ರೀಮಂತರೊಬ್ಬರ ಮನೆಯ ಮದುವೆಯಲ್ಲಿ ಅನಾವಶ್ಯಕವಾದ ವೆಚ್ಚಗಳೆಷ್ಟೆಂಬುದನ್ನು ಗಮನಿಸಬೇಕು. ಅಲ್ಲದೆ ಅದಕ್ಕೆ ಬರುವ ಆಹ್ವಾನಿತರಿಗೆ ಸಮಯದ ಜೊತೆಗೆ ವಾಹನದ ವೆಚ್ಚ ಬೇರೆ. ಮನೆಯ ಶೃಂಗಾರಕ್ಕೆ, ಪ್ರತಿಷ್ಠೆಯ ಪ್ರದರ್ಶನಕ್ಕೆ ಆಗುವ ವೆಚ್ಚವೂ ಅಷ್ಟೇ ನಿರರ್ಥಕ. ಇಂತಹ ದುಂದುವೆಚ್ಚಗಳನ್ನು ನಾವೇಕೆ ತಪ್ಪಿಸಬಾರದು? ಇದನ್ನು ಸರಕಾರದ ಕಾನೂನಿನ ನೆರವಿನಿಂದ ಮಾಡುವುದಕ್ಕಿಂತ ಜನಜಾಗೃತಿಯ ಆಂದೋಲನದಿಂದ ಮಾಡುವ ಅಗತ್ಯವಿದೆ.

ಇನ್ನು ಉಳಿಕೆ ಅಂತಿಮವಾದ ಮುಖ್ಯ ಮಂತ್ರ. ಬಳಕೆಯ ತಂತ್ರವನ್ನು ಕಟ್ಟುನಿಟ್ಟಾಗಿ ಪಾಲಿಸಿದರೆ ಉಳಿಕೆಯ ಮಂತ್ರದ ಸಿದ್ಧಿ ತಾನಾಗಿಯೇ ಆಗುತ್ತದೆ. ಅದನ್ನೇ ಈಶಾವಾಸ್ಯ ಉಪನಿಷತ್ತಿನಲ್ಲಿ 'ತೇನ ತ್ಯಕ್ತೇನ ಭುಂಜೀಥಾಃ ಮಾಗೃಧಃ ಕಸ್ಯಸ್ವಿದ್ಧನಂ' ಎಂದಿದೆ. ಅಂದರೆ ಮಾನವ ತನ್ನ ದುಡಿಮೆಯಿಂದ ಬಂದುದರಲ್ಲಿ ಅವನಿಗೆ ಅವಶ್ಯವಾದುದನ್ನು ಮಾತ್ರ ಭೋಗಿಸಬೇಕು. ಅವರಿಗಾಗಿ ಉಳಿಸಬೇಕು. ಹಾಗೆ ಮಾಡಿದಾಗ ನಮ್ಮ ಬದುಕು ಧನ್ಯವಾಗುತ್ತದೆ. ★

-: ಶುಭಾಶಯಗಳೊಂದಿಗೆ :-

| ಸದಾನಂದ ಶೇಟ್ ಜುವೆಲ್ಲರ್ಸ್ | ನ್ಯೂ ಸದಾನಂದ ಶೇಟ್ ಜುವೆಲ್ಲರ್ಸ್ |
|---|---|
| ಬಡಗುಪೇಟೆ, ಉಡುಪಿ - 576 101. | ಎಸ್.ಎಂ.ಎಸ್.ಪಿ. ಕಾಂಪ್ಲೆಕ್ಸ್, ಉಡುಪಿ. |
| ಫೋನ್: 2522667; 2522668 | ಫೋನ್ : 2522866 |

:: ಹಾರ್ದಿಕ ಶುಭಾಶಯಗಳೊಂದಿಗೆ ::

HP GAS

ರಾಘವೇಂದ್ರ ಆಚಾರ್ಯ

ಹಿಂದುಸ್ಥಾನ್ ಪೆಟ್ರೋಲಿಯಂ ಅಡುಗೆ ಅನಿಲ ವಿತರಕರು

ಫೇಮಸ್ ಕಾಂಪ್ಲೆಕ್ಸ್, ಸಿಟಿ ಬಸ್‌ಸ್ಟ್ಯಾಂಡ್ ಸಮೀಪ,ಉಡುಪಿ

ಫೋನ್ : 2521444, 2524693

( ಗ್ರಾಹಕರ ಸೇವೆಗೆ ಹೆಸರಾದ ಅಡುಗೆ ಅನಿಲ ಸಂಸ್ಥೆ )

# ಇದುವೇ ಜೀವ, ಇದು ಜೀವನ

ಯು. ಎಸ್. ಶ್ರೀನಿವಾಸ ರಾವ್

**ಮಾ**ನವನ ಜೀವನ ಮೈದಾನದಲ್ಲಿಯ ಹುಲ್ಲಿನಂತೆ. ತುಳಿಯುವವರಿಲ್ಲದಿದ್ದರೆ ಹಸಿರಾಗಿರುತ್ತದೆ ಎಂದು ಗೌತಮ ಬುದ್ಧನ ವಾಣಿ.

ಲರೋಷೆ ಫೊಕಾರೊ ಹೇಳುತ್ತಾನೆ "ಈರುಳ್ಳಿಯನ್ನು ಪದರ ಪದರವಾಗಿ ಸುಲಿದರೆ ಕೊನೆಗೆ ಏನೂ ಉಳಿಯುವುದಿಲ್ಲ. ನಮ್ಮ ಜೀವನವೂ ಹಾಗೆಯೇ" ಎಂದು.

ಜೀವನದಲ್ಲಿ ಉನ್ನತಿಯಾಗಲಿ, ಅವನತಿಯಾಗಲಿ ದೂರದಲ್ಲಿಲ್ಲ. ಅದು ಅವರವರ ಕೈಯಲ್ಲಿದೆ, ಮನಸ್ಸಿನಲ್ಲಿದೆ ಎಂಬುದು ರಾಮಕೃಷ್ಣ ಪರಮಹಂಸರ ನುಡಿ.

ಸರಳ ಜೀವನದ ಬಗ್ಗೆ ಮಾತಾಡಲು, ಬರೆಯಲು ನಾವು ಹಿಂಜರಿಯುವುದಿಲ್ಲ. ಆದರೆ ಹಾಗೆ ಬದುಕಲು ಮಾತ್ರ ಹಿಂಜರಿಯುತ್ತೇವೆಂದು ಕಾಲ್ಡ್ ವೆಲ್‌ನ ಅನಿಸಿಕೆ.

ಕಷ್ಟಗಳನ್ನು ಎದುರಿಸುವುದಕ್ಕೆ 'ಜೀವನ' ಎಂಬ ಹೆಸರು ಎಂಬುದು ಬಲ್ಲವರ ಮಾತಾದರೆ ಜೀವನದಲ್ಲಿ ಕಷ್ಟಗಳಾಗಲೀ, ಸುಖಗಳಾಗಲೀ ಬಂದರೆ ಬಿಟಿಎಸ್ ಬಸ್ಸಿನಂತೆ ಒಂದರ ಹಿಂದೆ ಮತ್ತೊಂದು ಬರುತ್ತವೆ. ಇಲ್ಲದಿದ್ದರೆ ಒಂದೂ ಬರುವುದಿಲ್ಲ ಎಂಬುದು ಹಾಸ್ಯ ಸಾಹಿತಿ ಬಿchi ಅವರ ಅಂಬೋಣ.

ಪ್ರೇಮ, ಜೀವನದಲ್ಲಿ ಗಂಡಿಗೆ ಒಂದು ಭಾಗ ಮಾತ್ರವಾಗಿದ್ದರೆ ಅದು ಹೆಣ್ಣಿಗೆ ಇಡೀ ಜೀವಮಾನವೇ ಆಗಿರುತ್ತದೆ ಎಂದು ಬೈರನ್ ಹೇಳುತ್ತಾನೆ.

ಹುಟ್ಟಿದ ಮನುಷ್ಯ ಬದುಕಿದರೆ ಸಾಲದು; ಬಾಳಬೇಕು. ಬಾಳಿದರೆ ಸಾಲದು ಉತ್ತಮವಾಗಿ ಬಾಳುವುದು ಹೇಗೆ ಎಂದು ಸತತವಾಗಿ ತಿಳಿದುಕೊಳ್ಳುತ್ತಾ ಇರುವುದೇ ಜೀವನ.

ಮನುಷ್ಯನ ಜೀವನದಲ್ಲಿ ನಿಜವಾದ ಮಿತ್ರರು ಮೂವರು ಮಾತ್ರ - ಹಣ, ಸಾಕುನಾಯಿ, ಮುದಿ ಹೆಂಡತಿ.

ಜೀವನ ಪರ್ಯಂತ ಯೌವನವನ್ನು ಕಾಪಾಡಲು ಸಾಧ್ಯವಿಲ್ಲ; ಆದರೆ ಮಗುವಿನಂತೆ ಇರಲು ಸಾಧ್ಯವಿದೆ ಎಂಬುದು ಬಲ್ಲವರ ಹಿತೋಪದೇಶ. ಇದುವೇ ಜೀವ ಇದು ಜೀವನ.

938, ಆಶೀರ್ವಾದ, ಬಿ.ಎಸ್.ಕೆ. 3 ನೇ ಹಂತ, 7ನೇ ಬ್ಲಾಕ್, ಕಾಳಿದಾಸ ನಗರ, ಹೊಸಕೆರೆ ಹಳ್ಳಿ, ಬೆಂಗಳೂರು-85

# ಪ್ರಾಚೀನ ಕಾಲದಲ್ಲಿ ನಿತ್ಯಕರ್ಮವಾಗಿ ಸರ್ಪಬಲಿ

**ಕೆ. ಜಿ. ಅಶೋಕ್ ಭಟ್**

**ವೇ**ದಾದಿಗಳಲ್ಲಿ ನಾಗದೇವರ ಸ್ಥಾನ ಬಹಳ ಉನ್ನತವಾಗಿದೆ. ಎಲ್ಲ ದೇವತೆಗಳೂ ನಾಗರೂಪವನ್ನು ಧರಿಸಿ ಕಾಣಿಸಿಕೊಳ್ಳುತ್ತಾರೆಂದು ವೇದವಚನವಿದೆ. 'ದೇವಾ ವೈ ಸರ್ಪಪ್ರತಿಮಯಾ ಚರಂತಿ'; 'ಬ್ರಹ್ಮಲೋಕೇ ಚ ಯೇ ಸರ್ಪಾಃ, ವಿಷ್ಣುಲೋಕೇ ಚ ಯೇ ಸರ್ಪಾಃ, ರುದ್ರಲೋಕೇ ಚ ಯೇ ಸರ್ಪಾಃ, ಇಂದ್ರಲೋಕೇ ಚ ಯೇ ಸರ್ಪಾಃ' ಇತ್ಯಾದಿ ಪೌರಾಣಿಕ ವಚನಗಳೂ, 'ಯೇ ಕೇ ಚ ಪೃಥವೀ ಮನು, ಯೇ ಅಂತರಿಕ್ಷೇ ಯೇ ದಿವಿ' ಇತ್ಯಾದಿ ವೇದವಚನಗಳೂ ಎಲ್ಲ ಲೋಕಗಳಲ್ಲಿಯೂ ನಾಗದೇವರ ಸನ್ನಿಧಾನವಿದೆ ಎಂಬುದನ್ನು ಸೂಚಿಸುತ್ತವೆ. ಯಜುರ್ವೇದದಲ್ಲಿ (ಬೋಧಾಯನಗೃಹ್ಯಕರ್ಮ ಸಮುಚ್ಚಯ) ಋಷಿತರ್ಪಣ ಕೊಡುವಾಗ 'ಸರ್ಪದೇವಜನಾಂಸ್ತರ್ಪಯಾಮಿ' ಎಂದು ತರ್ಪಣ ಕೊಡಲು ವಿಧಿ ಇದೆ. ನಿತ್ಯವೂ ನಾಗದೇವರ ಸ್ಮರಣೆಬೇಕೆಂಬ ಅರ್ಥವು ಇದರಿಂದ ಸಿದ್ಧಿಸುತ್ತದೆ.

ಸ್ಮೃತಿಕೌಸ್ತುಭದಲ್ಲಿ ಸರ್ಪಬಲಿಯ ಪ್ರಯೋಗವನ್ನು ಈ ರೀತಿ ಹೇಳಿದ್ದಾರೆ.

**'ಶ್ರವಣಾರ್ಕಮಾನಂತರಂ ಸಾಯಂಪ್ರಾತರ್ಬಲಿಂ ಹರೇತ್। ಅಪ್ರತ್ಯವರೋಹಣಾತ್ ಮಾರ್ಗಶೀರ್ಷ ಚತುರ್ದಶೀಪರ್ಯಂತಂ ಪೌರ್ಣಮಾಸೀಪರ್ಯಂತಂ ವಾ ತದಹೋರಾತ್ರಸಂಖ್ಯಾಕಬಲೀನ್ ತಸ್ಮಿನ್ನೇವ ದಿನೇದದ್ಯಾದ್ವಾ ಸರ್ಪದೇವಜನೇಭ್ಯಃ ಸ್ವಾಹೇತಿ ಮಂತ್ರಃ'**

ಶ್ರಾವಣ ಮಾಸದಿಂದ ಮಾರ್ಗಶೀರ್ಷಮಾಸದವರೆಗೆ ಬೆಳಿಗ್ಗೆ ಮತ್ತು ಸಾಯಂಕಾಲ ಬಲಿಕೊಡಬೇಕಾದ ವಿಧಿಯಿದು. ಸರ್ಪಸಂತತಿ ಬೆಳೆಯುವ ಸಮಯವೂ ಇದೇ. ಆದ್ದರಿಂದ ಶ್ರಾವಣ ಮಾಸದಲ್ಲಿ ನಾಗರಪಂಚಮಿ ಬರುತ್ತದೆ. ಮಾರ್ಗಶೀರ್ಷಮಾಸದಲ್ಲಿ ಸ್ಕಂದ ಪಂಚಮಿ ಬರುತ್ತದೆ. ಈ ಐದು ತಿಂಗಳಕಾಲ ದಿನಕ್ಕೆರಡು ಸಲ ಬಲಿಕೊಡುವ ವಿಧಿ ಇದೆ. ನಿತ್ಯ ಕೊಡಲು ಅಶಕ್ತನಾದರೆ ಇಷ್ಟು ದಿವಸಗಳ ಬಲಿಸಂಖ್ಯೆಯನ್ನು ಒಂದೇ ದಿವಸ ಕೊಡಬಹುದು ಎಂದು ಹೇಳಿದ್ದಾರೆ. ಇದೇ ಆಶ್ಲೇಷಾಬಲಿಯಾಗಿ ಪರಿಣಮಿಸಿರುವ ಸಾಧ್ಯತೆಯೂ ಇದೆ. **'ಭೌಮಾದಿ ಸರ್ಪಸರ್ಪೇಭ್ಯಃ ಸಂಭಾವಿತ ಬಾಧಾಪರಿಹಾರರ್ಥಮಿದಂ ಕರ್ತವ್ಯಮ್'** ಭೂಮಿಯಲ್ಲಿ ಸಂಚರಿಸುವ ಸರ್ಪಾದಿಗಳ ವಿಷಭಯವುಂಟಾಗದಿರಲೆಂದು ಇದನ್ನು ಮಾಡಬೇಕು. ಇದರ ಮಂತ್ರಗಳು ಹೀಗಿವೆ.

**ಯೇಸರ್ಪಾಃ ಪಾರ್ಥಿವಾ ಯೇ ಅಂತರಿಕ್ಷ್ಯಾ ಯೇ ದಿವ್ಯಾ ಯೇ ದಿಶ್ಯಾಃ ತೇಭ್ಯ ಇಮಂ ಬಲಿಮಹಾರ್ಷಂ ತೇಭ್ಯ ಇವಂ ಬಲಿಮುಪಾಕರೋಮಿ ॥**

**ಸರ್ಪೋಽಸಿ ಸರ್ಪತಾಂ ಸರ್ಪಾಣಾಮಧಿಪತಿರಸಿ ಅನ್ನೇನ ಮನುಷ್ಯಾಂ ಸ್ತ್ರಾಯಸೇ ಅಪೂಪೇನ ಸರ್ಪಾನ್ ಯಜ್ಞೇನ ದೇವಾನ್ । ತ್ವಯಿ ಮಾ ಸಂತಃ ತ್ವಯಿ ಸಂತಃ ಸರ್ಪಾ ಮಾ ಹಿಂಸಿಷುಃ॥ ಧ್ರುವಾಂ ತೇ ಪರಿದದಾಮಿ । (ಧ್ರುವಾಂ ಪುತ್ರಾದೀನಾತ್ಮಾನಂ ಚ ದದ್ಯಾತ್)**



ನಾಗಾರಾಧನೆ ಸರ್ವವರ್ಣಗಳಿಂದಲೂ ಬೇರೆ ಬೇರೆ ವಿಧಾನಗಳಿಂದ ನಡೆಯುತ್ತದೆ. ಬ್ರಾಹ್ಮಣೇತರರು ಹಾಗೂ ಸ್ತ್ರೀಯರೇ ಪ್ರಧಾನವಾಗಿ ಆಚರಿಸುವ ವಿಧಾನವು ದೇಶದಾದ್ಯಂತ ಕೆಲವು ಕಡೆ ಪ್ರಚಲಿತವಿದೆ. ಹುತ್ತಕ್ಕೆ ಹಾಲೆರೆಯುವ ವಿಧಾನ ಮೈಸೂರು ಕಡೆಯೂ, ಪ್ರತ್ಯಕ್ಷ ನಾಗಗಳಿಗೆ ಹಾಲು ಕುಡಿಸುವ ವಿಧಾನ ಮಹಾರಾಷ್ಟ್ರದಲ್ಲಿಯೂ ಪ್ರಸಿದ್ಧವಾಗಿದೆ. ಸುಂದರ ನಾಗವಿಗ್ರಹಗಳ ಕೆತ್ತನೆ ಇತ್ತೀಚಿನದ್ದಾಗಿದ್ದು ಪ್ರಾಚೀನಕಾಲದಲ್ಲಿ ದೊಡ್ಡ ಕೆಂಪುಕಲ್ಲನ್ನೇ ನಾಗನೆಂದು ಸಂಕಲ್ಪಿಸಿ ಆರಾಧಿಸುವ ರೂಢಿ ಇತ್ತೆಂದು ಕಾಣುತ್ತದೆ. ಚಿತ್ರಕೂಟರಚನೆ ಎಂಬ ಒಂದು ವಿಶೇಷವಾದ ವಿಧಾನವೂ ಅಲ್ಲಲ್ಲಿ ಪ್ರಚಲಿತವಿದೆ.

**'ನಾಗಃ ದೇವಯೋನಿವಿಶೇಷಃ'** ಎಂದು ಕೋಶಕಾರ ಹೇಳಿದ್ದರೂ

**ವಿದ್ಯಾಧರಾಪ್ಸರೋ ಯಕ್ಷರಕ್ಷೋ ಗಂಧರ್ವಕಿನ್ನರಾಃ ।**

**ಪಿಶಾಚೋ ಗುಹ್ಯಕಃ ಸಿದ್ಧೋ ಭೂತೋಽಮೀ ದೇವಯೋನಯಃ ॥**

**ಆದಿತ್ಯ ವಿಶ್ವವಸವಸ್ತುಷಿತಾ ಭಾಸ್ವರಾನಿಲಾಃ ।**

**ಮಹಾರಾಜಿಕಸಾಧ್ಯಾಶ್ಚ ರುದ್ರಾಶ್ಚ ಗಣದೇವತಾಃ ॥**

ಎಂದು ಅಮರದಲ್ಲಿ ಹೇಳಿರುವ ಗಣದೇವತೆಗಳು ಹಾಗೂ ದೇವಯೋನಿವಿಶೇಷಗಳಲ್ಲಿ ನಾಗ ಸೇರದಿರುವುದರಿಂದ ನಾಗದೇವರು ಬ್ರಹ್ಮರುದ್ರೇಂದ್ರಾದಿಗಳ ಹಾಗೆ ಸ್ವರ್ಗಾದಿಲೋಕಗಳ ಹಾಗೆ ವೈಭವೋಪೇತವಾದ ಪಾತಾಳಾದಿ ಲೋಕಗಳ ಅಧಿಪತಿಗಳೂ ಮಹಾಮಹಿಮೋಪೇತರೂ ನಿಗ್ರಹಾನುಗ್ರಹಸಮರ್ಥರೂ ಲೋಕಪರಿಪಾಲನಾರ್ಥ ಶ್ರೀಮಹಾವಿಷ್ಣುವಿನಿಂದ ನಿಯುಕ್ತರೂ ಆಗಿದ್ದಾರೆಂದು ತಿಳಿಯಬೇಕು. **'ದ್ವಿಶೀರ್ಷಾಃ ಸಪ್ತಶೀರ್ಷಾಶ್ಚ ದಶಶೀರ್ಷಾಸ್ತಥಾ ಪರೇ।'**

ಎಂಬಿತ್ಯಾದಿ ಪ್ರಮಾಣಪ್ರಕಾರ ನಾಗಲೋಕದಲ್ಲಿ ೩ ಹೆಡೆ, ೭ ಹೆಡೆ, ೧೦ ಹೆಡೆ, ೩೦ ಹೆಡೆ, ೫೦೦ ಹೆಡೆ, ೮೦೦ ಹೆಡೆ, ೧೦೦೦ ಹೆಡೆಯ ನಾಗದೇವತೆಗಳಿದ್ದಾರೆ. ಇವರೆಲ್ಲ ಮಹಾಮಹಿಮೆಯುಳ್ಳವರೂ ಮನುಷ್ಯರಿಗೆ ಸಂತತಿ ಆದಿ ಇಷ್ಟಾರ್ಥಗಳನ್ನು ಕರುಣಿಸುವವರೂ ರೋಗ ರುಜಿನಗಳನ್ನು ಪರಿಹರಿಸುವವರೂ ಆಗಿದ್ದಾರೆ. ಅಷ್ಟಕುಲನಾಗದೇವರು ಸುಪ್ರೀತರಾದರೆ ನಮಗೆ ಇಷ್ಟಾರ್ಥಗಳೆಲ್ಲವನ್ನೂ ಕರುಣಿಸುತ್ತಾರೆ. ಎಲ್ಲ ನಾಗದೇವತೆಗಳಲ್ಲಿಯೂ ಸಂಕರ್ಷಣ ರೂಪಿ ಪರಮಾತ್ಮನಿದ್ದು ಅವನೇ ನಮ್ಮ ಇಷ್ಟಾರ್ಥಗಳನ್ನು ಕರುಣಿಸುತ್ತಾನೆ. ಹಾಗಾಗಿದ್ದರಿಂದಲೆ ನವಪದಮಂಡಲ ಮಧ್ಯದಲ್ಲಿ ಸಂಕರ್ಷಣರೂಪೀ ಪರಮಾತ್ಮನಿಗೆ ಮುಖ್ಯಸ್ಥಾನವನ್ನು ಕಲ್ಪಿಸಿರುತ್ತಾರೆ.

**ಫಲಶ್ರುತಿ**

**ಶೇಷೋ ನಿಶ್ಶೇಷಕರ್ತಾಸ್ಯಾಜ್ಜಾಡ್ಯದಾರಿದ್ರ್ಯ ಹೃದ್ರುಜಾಮ್ ।**

**ತಕ್ಷಕೋ ವಿಘ್ನಹರ್ತಾಸ್ಯಾದನಂತೋಽಭೀಷ್ಟದಾಯಕಃ ॥**

**ವಾಸುಕಿರ್ವಸುದಾಯೀ ಸ್ಯಾತ್ ಶಂಖಪಾಲಃ ಸುಕೀರ್ತಿದಃ ।**

**ಮಹಾಪದ್ಮಃ ಶಾಂತಿ ಕಾಂತಿತುಷ್ಟಿಪುಷ್ಟಿಧೃತಿಪ್ರದಃ ॥**

**ಕಂಬಲಃ ಕಷ್ಟಹಾರೀ ಸ್ಯಾತ್ ಕರ್ಕೋಟಃ ಕ್ಷುದ್ರರೋಗಹೃತ್ ॥**

ಶೇಷದೇವರು ಜಾಡ್ಯ, ದಾರಿದ್ರ್ಯ, ಮನೋರೋಗ, ದೈಹಿಕರೋಗಗಳನ್ನು ನಿಶ್ಶೇಷವಾಗಿ ಹೋಗಲಾಡಿಸುತ್ತಾರೆ. ತಕ್ಷಕದೇವರು ವಿಘ್ನಗಳನ್ನೆಲ್ಲಾ ನಾಶಮಾಡುತ್ತಾರೆ. ಅನಂತ ದೇವರು ಸರ್ವಾಭೀಷ್ಟಗಳನ್ನೂ ಕರುಣಿಸುತ್ತಾರೆ. ವಾಸುಕಿಯು ಐಶ್ವರ್ಯಪ್ರದನಾಗಿದ್ದಾನೆ. ಶಂಖಪಾಲನು ಕೀರ್ತಿಯನ್ನೂ ಮಹಾಪದ್ಮನು ಶಾಂತಿ ಕಾಂತಿ ತುಷ್ಟಿ ಪುಷ್ಟಿ ಧೈರ್ಯಗಳನ್ನೂ ಅನುಗ್ರಹಿಸುತ್ತಾನೆ. ಕಂಬಲನು ಕಷ್ಟಕಾರ್ಪಣ್ಯಗಳನ್ನು ಹೋಗಲಾಡಿಸುತ್ತಾನೆ. ಕರ್ಕೋಟಕನು ಕ್ಷುದ್ರಾಭಿಚಾರಾದಿ (ಕ್ಷುದ್ರಾಭಿಚಾರ, ದೃಷ್ಟಿದೋಷ, ಮಹಾಭಿಚಾರ, ವಿಷದೋಷ, ಶತ್ರುಗಳ ಮಾರಣಾದಿ ಪ್ರಯೋಗ, ಶರೀರದ ವ್ಯಾಧಿಪೀಡೆಗಳು, ಸ್ಥಳಸಂಬಂಧ ಹಾಗೂ ಸಂಚಾರಸಂಬಂಧ) ದೋಷಗಳನ್ನು ನಿವಾರಿಸುತ್ತಾನೆ. ಈ ರೀತಿ ಅಷ್ಟಕುಲನಾಗರಿಂದ ನಾವು ಸರ್ವಾಭೀಷ್ಟಗಳನ್ನು ಹೊಂದಬಹುದಾಗಿದೆ.

**ಸಂಗ್ರಹ : 'ನಾಗದರ್ಶನ' ಕೃತಿಯಿಂದ ಉದ್ಧೃತ**

**ಸಾದರ ಸ್ವೀಕಾರ**

# ನಾಗದರ್ಶನ

(ನಾಗಾರಾಧನೆಯ ಸಮಗ್ರ ಚಿತ್ರಣ)



**ಸಂಪಾದಕ : ರಾಧಾಕೃಷ್ಣ ಕಲ್ಯಾಣ್‌ಪುರ್**

**ಪ್ರಕಾಶನ :** ವೇದವಾರಿಧಿ ಪ್ರತಿಷ್ಠಾನ, 3, ಐಟಿಐ ಬಡಾವಣೆ,
ಹೊಸ ಬಿಇಎಲ್ ರಸ್ತೆ, ರಾಜಾಮಹಲ್ ವಿಲಾಸ್
ಎರಡನೇ ಹಂತ, ಬೆಂಗಳೂರು - 560 094

**ಬೆಲೆ ರೂ. 200/-**

ತುಳುನಾಡಿನಲ್ಲಿ ಚಿರಪರಿಚತವಾದ ನಾಗಾರಾಧನೆಯ ಕುರಿತಂತೆ ತಜ್ಞ ವಿದ್ವಾಂಸರಾದ ಶ್ರೀ ಬನ್ನಂಜೆ ಗೋವಿಂದಾಚಾರ್ಯ, ಶ್ರೀ ಕೆ. ವಿ. ಗೋಪಾಲ್ ಭಟ್, ಶ್ರೀ ಎ. ವಿ. ನಾವಡ, ಶ್ರೀ ಶಂ ಭಾ ಜೋಷಿ, ಶ್ರೀ ಕಬ್ಬಿನಾಲೆ ಬಾಲಕೃಷ್ಣ ಭಾರದ್ವಾಜ, ಉಡುಪಿ ರಾಮನಾಥಾಚಾರ್ಯ ಮೊದಲಾದವರಿಂದ ಬರೆಸಿ ಮುದ್ರಿಸಿದ ಅನೇಕ ಲೇಖನಗಳ ಸಂಗ್ರಹ ಈ ಪುಸ್ತಕದಲ್ಲಿದೆ. ಸಾಕಷ್ಟು ವರ್ಣ ಚಿತ್ರಗಳು, ನಾಗಾರಾಧನೆಯ ವಿಧಿವಿಧಾನಗಳೂ ಅಡಕವಾಗಿ ಪುಸ್ತಕವು ಸಂಗ್ರಹಯೋಗ್ಯವಾಗಿದೆ.

**ಪ್ರತಿಗಳು ದೊರೆಯುವ ಸ್ಥಳ : ಶ್ರೀ ಪುತ್ತಿಗೆ ಮಠ, ಬಸವನಗುಡಿ ರಸ್ತೆ, ಬೆಂಗಳೂರು- 19**



**FORM No. IV**

## Statement of ownership and other particulars about the Newspaper

**SUGUNAMAALA**

| | | |
|---|---|---|
| 1. | Place of publication | : Car Street, Udupi |
| 2. | Period of Publication | : Monthly |
| 3. | Printer's Name | : B. G. Subba Rao |
| | Whether a citizen of India | : Yes |
| | Address | : Suguna Printers<br>Car Street, Udupi |
| 4. | Publisher's Name | : Prasanna Acharya |
| | Whether a citizen of India | : Yes |
| | Address | : Suguna Printers<br>Car Street, Udupi |
| 5. | Editor's Name | : M. Radhakrishna Rao |
| | Whether a citizen of India | : Yes |
| | Address | : Suguna Printers<br>Car Street, Udupi |
| 6. | Name and address of individuals who own the newspaper and partners or share holders holding more than one per cent of the total capital | Sujnana Trust (Regd.)<br>Sri Puthige Math<br>Udupi |

I, Prasanna Acharya, hereby declare that the particulars given above are true to the best of my knowledge and belief.

25th March 2005

Sd/-
**Prasanna Acharya**



# ದ್ವೈತ ಸಿದ್ಧಾಂತದ ಕಹಳೆ

**ಕೋಟೇಶ್ವರ ಸೂರ್ಯನಾರಾಯಣ ರಾವ್**

ಇತಿಹಾಸದ ದಾಖಲೆಯಂತೆ ದ್ವಾಪರಯುಗಾಂತ್ಯದಿಂದ ಭಗವಾನ್ ವೇದವ್ಯಾಸರಿಂದಾರಂಭಿಸಿ ಹಲವಾರು ಸಂತರ ಜೀವನಾಧಾರಿತ ಚಾರಿತ್ರಿಕ ದಾಖಲೆಗಳು ಭಾರತ ವರ್ಷದಾದ್ಯಂತ ಭಗ್ನಾವಶೇಷಗಳೊಂದಿಗೆ ಲಭ್ಯವಿರುತ್ತವೆ.

ಸಾಧಾರಣ ಒಂಭತ್ತು ನೂರು ವರ್ಷಗಳ ಹಿಂದೆ ಭಾರತಕ್ಕೆ ಲಗ್ಗೆಯಿಟ್ಟು ವಿದೇಶಿ ಮಿಷನರಿಗಳೂ, ಧರ್ಮಾಂಧರೂ ಮತ್ತು ವಾಮಪಂಥೀಯರೂ, ಬೌದ್ಧರೂ, ಗಾಣಪತ್ಯರೂ, ಪೌರರು, ಜೈನರೂ ಭಾರತದ ಸನಾತನ ಧರ್ಮಲೋಕವನ್ನು ಗೋಜಲಾಗಿಸಿದಾಗ, ಸಾತ್ವಿಕರೂ, ಸಜ್ಜನರೂ, ಧರ್ಮಬೀರುಗಳೂ ವೈದಿಕ ಧರ್ಮದ ಪುನರುಜ್ಜೀವನ ಮಾಡಬಹುದಾದ ಅವತಾರ ಪುರುಷನೊಬ್ಬನ ಬರುವಿಕೆಗಾಗಿ ನಿರೀಕ್ಷಣೆಯಲ್ಲಿದ್ದರು.

ನಮ್ಮ ಮಹಾನ್ ಗ್ರಂಥಗಳಲ್ಲಿ ಉಲ್ಲೇಖಿಸಿದಂತೆ ತ್ರೇತಾಯುಗದಲ್ಲಿ ಆಂಜನೇಯನಾಗಿ ದ್ವಾಪರದಲ್ಲಿ ಭೀಮಸೇನನಾಗಿ ಅವತರಿಸಿದಾಗ ವಜ್ರದೇಹಿಗಳಾದ ಇವರಿಂದ ದುಷ್ಟದಮನ ಕಾರ್ಯ ನಡೆದಿದ್ದರೆ - ಕಲಿಯುಗದಲ್ಲಿ ಬುದ್ಧಿ ಬಲದಿಂದ ಎದುರಾಳಿಗಳನ್ನು ಆಕ್ರಮಿಸಿ ನಿಶ್ಶಸ್ತ್ರಗೊಳಿಸಬಲ್ಲ ಶ್ರೀಮದಾಚಾರ್ಯರಾಗಿ ಪವಿತ್ರ ಕ್ಷೇತ್ರ ಉಡುಪಿಗೆ ಸಮೀಪದ ಪಾಜಕ ಕ್ಷೇತ್ರದಲ್ಲಿ ಉದಯಿಸಿದಾಗ ಸಾತ್ವಿಕರು ನಿಶ್ಚಿಂತರಾದರು.

ಚಿಕ್ಕಂದಿನಿಂದಲೇ ಪವಾಡಸದೃಶ ಕಾರ್ಯನಿರ್ವಹಿಸಿ ಅಚ್ಯುತ ಪ್ರೇಕ್ಷಾಚಾರ್ಯರ ಶಿಷ್ಯನಾಗಿ ಬೆಳಗುತ್ತಾ ಅದ್ವೈತ ಮತವನ್ನು ವಿಮರ್ಶೆ ಮಾಡುತ್ತಾ ದ್ವೈತ ಸಾಮ್ರಾಜ್ಯಕ್ಕೆ ಬುನಾದಿಯಾದರು ಶ್ರೀ ಮದಾಚಾರ್ಯರು.

ಸಂಪೂರ್ಣ ಭಾರತ ದೇಶವನ್ನು ಹಲವಾರು ಬಾರಿ ಪ್ರದಕ್ಷಿಣೆ ಮಾಡಿದ ಶ್ರೀ ಮಧ್ವಾಚಾರ್ಯರು ಆನಂದತೀರ್ಥರು, ಪೂರ್ಣಪ್ರಜ್ಞರು ಎಂಬ ಅನ್ವರ್ಥನಾಮದಲ್ಲಿ ಶೋಭಿಸುತ್ತಾ ನಿಗೂಢ ಹಿಮಾಲಯದ ಬದರಿಯಲ್ಲಿದ್ದ ಭಗವಾನ್ ವೇದವ್ಯಾಸರ ಕೃಪೆಯಿಂದ ದ್ವೈತ ಧ್ವಜವನ್ನು ಬಾನೆತ್ತರಕ್ಕೇರಿಸಿ ಶುದ್ಧ ವೈಷ್ಣವ ಸಂಪ್ರದಾಯವನ್ನು ಆಸ್ತಿಕರು ಸ್ವೀಕರಿಸುವಂತೆ ಮಾಡಿ ಶ್ರೀ ಹರಿ ಸರ್ವೋತ್ತಮ ತತ್ತ್ವವನ್ನು ಜನಮನದಲ್ಲಿ ಬಿತ್ತಿದರು. ನವರತ್ನ ಪ್ರಮೇಯಗಳೆಂಬ ದ್ವೈತ ಸಂದೇಶವನ್ನು ನಿರಾತಂಕವಾಗಿ ಬಿತ್ತಲನುವಾಗುವಂತೆ ಎಂಟು ಮಂದಿ ಬಾಲಸನ್ಯಾಸಿಗಳನ್ನು ಎಂಟು ಮಠಗಳಲ್ಲಿ ಸ್ಥಿತಗೊಳಿಸಿ ತಾವು ಪ್ರತಿಷ್ಠಿಸಿದ ಶ್ರೀಕೃಷ್ಣ ಪೂಜೆಯನ್ನು ಪರ್ಯಾಯ ಸರತಿಯಲ್ಲಿ ಪೂಜಿಸುವ ವ್ಯವಸ್ಥೆ ಮಾಡಿದವರು ಶ್ರೀ ಮದಾಚಾರ್ಯರು.

**‘ಮಹಾಲಕ್ಷ್ಮೀ ಕೃಪಾ’, 25/1, ಡಿ. ವಿ. ಜಿ. ಅಡ್ಡ ರಸ್ತೆ, ಬಸವನಗುಡಿ, ಬೆಂಗಳೂರು – 560 004**



ದ್ವೈತ ಸಿದ್ಧಾಂತ ಭದ್ರ ಬುನಾದಿಯಲ್ಲಿರುವಂತೆ ಮಾಡಲು ತಮ್ಮ ನಾಲ್ವರು ಶಿಷ್ಯರನ್ನು ಮೈಸೂರು ವಲಯದಲ್ಲಿ ಸ್ಥಾಪಿಸಿ ಸ್ಥಿತಗೊಳಿಸಿದಾಗ ಮಧ್ವಮತದ ಪ್ರಚಾರ ಪ್ರಕ್ರಿಯೆ ನಿರಂತರವಾಯ್ತು.

ಮಧ್ವಮತವನ್ನು ಸುಭದ್ರ ಪೀಠದಲ್ಲಿ ಸ್ಥಿತಗೊಳಿಸಿದ ಶ್ರೀಮದಾಚಾರ್ಯರು ತಮ್ಮ 79ನೇ ವಯಸ್ಸಿನಲ್ಲಿ ಶಿಷ್ಯರಿಗೆ ಐತರೇಯ ಭಾಷ್ಯವನ್ನು ವಿವರಿಸುತ್ತಿರುವಾಗ ಅದೃಶ್ಯರಾದರು. ಆದರೆ ಅವರು ಇಂದಿಗೂ ಬದರಿಯಲ್ಲಿ ಭಗವಾನ್ ವೇದವ್ಯಾಸರ ಸನ್ನಿಧಿಯಲ್ಲಿ ಸ್ಥಿತರಿದ್ದು, ಜಗತ್ತಿನ ಆಗು - ಹೋಗುಗಳಿಗೆ ಗಮನ ಹರಿಸುತ್ತಿರುವರೆಂದು ಭಾವುಕರ ನಂಬಿಕೆ. ಅದಕ್ಕೆ ಮತ್ತೊಂದು ದಾಖಲೆ - ಇತರ ಗುರುವರ್ಯರ ಬೃಂದಾವನದಂತೆ ಶ್ರೀ ಮಧ್ವರ ಪಂಚ ಭೌತಿಕ ಶರೀರಕ್ಕೆ ವೃಂದಾವನ ವಿಲ್ಲದಿರುವುದು ಈ ನಂಬಿಕೆಯ ಉಗಮ.

## ದ್ವೈತ ಸಂಸ್ಕೃತಿಯ ದಿಗ್ವಿಜಯ

ಶ್ರೀ ಮದಾಚಾರ್ಯರು ತಮ್ಮ ಭಾರತ ದರ್ಶನ ಕಾಲದಲ್ಲಿ ಶ್ರೀ ವಿಷ್ಣು ಸರ್ವೋತ್ತಮತ್ವವನ್ನು ಬಲವಾಗಿ ಪ್ರತಿಪಾದಿಸಿದುದರ ಪ್ರಭಾವದಿಂದಾಗಿ ಇಂದಿನ ‘ಗುಜರಾತ್’ ಅಂದಿನ ಸೌರಾಷ್ಟ್ರದಲ್ಲಿದ್ದ ಇವರ ಶಿಷ್ಯನಾದ ರಾಜಕುಮಾರ ಪಾಲನ ಕಾಲದಲ್ಲಿ ರಚಿತವಾದ ‘ಸಂಪ್ರದಾಯ ಪ್ರದೀಪ’ ವೆಂಬ ಹೆಸರಿನ ಗ್ರಂಥದಲ್ಲಿ ಆಚಾರ್ಯರ ಮೇಧಾವಿತ್ವವನ್ನು ಮುಕ್ತ ಕಂಠದಿಂದ ಶ್ಲಾಘಿಸಲಾಗಿದೆ.

ಶ್ರೀ ಮದಾಚಾರ್ಯರು ವೈಷ್ಣವ ಭೂಮಿ ಉತ್ತು - ಬಿತ್ತಿರುವುದಕ್ಕೆ ಪೂರಕವಾಗಿ - ನೀರುಣಿಸಿ, ಗೊಬ್ಬರವಿಟ್ಟು ಹುಲುಸಾದ ಬೆಳೆ ಬರುವಂತೆ ಮಾಡಿದವರು ಅವರ ಶಿಷ್ಯವೃಂದದವರು. ಆರಂಭದಲ್ಲಿ ದಕ್ಷಿಣ ಭಾರತಕ್ಕೆ ಸೀಮಿತವಾದ ದ್ವೈತ ಸಂಸ್ಕೃತಿ ಕ್ರಮೇಣ ಉತ್ತರ ಭಾರತಕ್ಕೆ ಪದಾರ್ಪಣ ಮಾಡಲು ಕಾರಣೀಭೂತರು ಶ್ರೀ ವ್ಯಾಸರಾಯತೀರ್ಥರಾಗಿದ್ದಾರೆ. ಹಾಗೂ ಶ್ರೀ ವಾದಿರಾಜ ತೀರ್ಥರು ಗುಜರಾತ್‌ನಲ್ಲಿ ಪ್ರಭಾವ ಬೀರಿದ್ದಾರೆ.

ಶ್ರೀ ವ್ಯಾಸತೀರ್ಥರ ಚರಿತ್ರೆಯ ದಾಖಲೆಯಿಂದ ಪಡೆದಂತೆ - ಅವರ ಉತ್ತರ ಭಾರತದ ಶಿಷ್ಯರಾದ ಲಕ್ಷ್ಮೀಪತಿ ತೀರ್ಥರಿಂದಾಗಿ ಪ್ರಭಾವಿತರಾದ ಮಾಧವ ಪುರಿಯೆಂಬಾತ ಯತಿಯಾದುದೂ ಮಾಧವ ಪುರಿಯಿಂದ ಈಶ್ವರ ಪುರಿಯೆಂಬವರು ಯತಿದೀಕ್ಷೆ ಹೊಂದಿರುವುದೂ ಸೇರಿ - ಕಾರ್ಯರಂಗ ವಿಸ್ತಾರವಾಯಿತು. ಮುಂದೆ ದ್ವೈತ ಸಂಸ್ಕೃತಿಯು ವಿಭಿನ್ನ ಕೋನಗಳಿಂದ ಪಸರಿಸಲಾರಂಭಿಸಿದಾಗ ಬಂಗಾಲದ ಜನಮನದಲ್ಲಿ ಅಪಾರ ಗೌರವವನ್ನು ಪಡೆದ ಶ್ರೀ ಚೈತನ್ಯ ಮಹಾಪ್ರಭುವಿನಿಂದಾಗಿ ರಾಷ್ಟ್ರದುದ್ದಕ್ಕೂ ವಿಸ್ತಾರಗೊಳ್ಳಲು ಕಾರಣವಾಯ್ತು. ತನ್ನ ನೂರಾರು ಶಿಷ್ಯರುಗಳೊಂದಿಗೆ ಶ್ರೀಕೃಷ್ಣ ಸಂಕೀರ್ತನೆಯ ತಂಡವನ್ನು ರಚಿಸಿದ ಶ್ರೀ ಚೈತನ್ಯರು ತನ್ಮೂಲಕ ದ್ವೈತ ಸಂಸ್ಕೃತಿಯ ಬೆಳವಣಿಗೆಗೆ ಹರಿಕಾರರಾದುದು ಇತಿಹಾಸದ ದಾಖಲೆ.

ಶ್ರೀ ವ್ಯಾಸರಾಜ ಸ್ವಾಮಿಗಳು ವಿದ್ಯಾನಗರದ ವಿದ್ಯಾಪೀಠದಲ್ಲಿ ಕುಲಪತಿಗಳಾಗಿದ್ದಾಗ ಉತ್ತರ ಭಾರತದ ಶ್ರೀ ವಲ್ಲಭಾಚಾರ್ಯರು ಅಲ್ಲಿಗೆ ಆಗಮಿಸಿ ಭಾಗವತ ಪುರಾಣದಲ್ಲಿ ಪುಷ್ಟಿ ವಾದವನ್ನು ಮಂಡಿಸಿದ್ದಾರೆನ್ನುವುದು 'ಗದ ಸಂಪ್ರದಾಯ ಕುಲದೀಪಿಕೆ'ಯಲ್ಲಿ ಪ್ರಕಾಶಿತಗೊಂಡಿದೆ. ಇದರೊಂದಿಗೆ ಶ್ರೀ ವ್ಯಾಸರಾಜರ ಪ್ರಭಾವವು ಶ್ರೀ ಚೈತನ್ಯ ಹಾಗೂ ವಲ್ಲಭಾಚಾರ್ಯರ ಮೇಲೆ ಬೀರಿರುವುದು ಸ್ಪಷ್ಟ.

ಒರಿಸ್ಸಾ ಕವಿ ಕರ್ಣಕವೂರನೆಂಬಾತನು ತನ್ನ 'ಗೌರಾಂಗ ನಿರ್ದೇಶದೀಪಿಕಾ' ಗ್ರಂಥದಲ್ಲಿ ಶ್ರೀ ವ್ಯಾಸರಾಯರ ಗ್ರಂಥವನ್ನು ವ್ಯಾಸ ಸಂಹಿತೆಯೆಂದು ನಿರ್ದೇಶಿಸಿರುವುದು ಅಂದಿನ ವಿದ್ಯಮಾನ.

**ಶ್ರೀ ಮಧ್ವ ಕಲ್ಪವೃಕ್ಷಸ್ತು ಜಯಾರ್ಯ ಕಾಮಧುಕ ಸ್ಮೃತಃ।**

**ಚಿಂತಾಮಣಿಸ್ತು ವ್ಯಾಸಾರ್ಯಃ ಮುನಿತ್ರಯ ಮುದಾಹೃತಮ್ ॥**

ಶ್ರೀ ಮದಾಚಾರ್ಯರನ್ನು ಕಲ್ಪವೃಕ್ಷವನ್ನಾಗಿಯೂ, ಶ್ರೀ ಜಯತೀರ್ಥರನ್ನು ಕಾಮಧೇನುವನ್ನಾಗಿಯೂ, ಶ್ರೀ ವ್ಯಾಸತೀರ್ಥರನ್ನು ಸರ್ವಾಭೀಷ್ಟಪ್ರದ ಚಿಂತಾಮಣಿಯಾಗಿಯೂ, ವೈಷ್ಣವ ಸಮಾಜದಲ್ಲಿ ಚಿತ್ರಿಸಲಾಗಿದೆ.

## ಶ್ರೀ ವಾದಿರಾಜ ತೀರ್ಥರು

ಹದಿನೈದನೆಯ ಶತಮಾನದಲ್ಲಿ ಭಾವಿ ಸಮೀರರಾದ ಶ್ರೀ ವಾದಿರಾಜ ಯತಿಶ್ರೇಷ್ಠರು ತಮ್ಮ ಭಾರತ ದರ್ಶನ ಕಾಲದಲ್ಲಿ ಸೌರಾಷ್ಟ್ರಕ್ಕೆ (ಇಂದಿನ ಗುಜರಾತ್) ಆಗಮಿಸಿ ಅಲ್ಲಿ ವೈಷ್ಣವ ಸಂಪ್ರದಾಯದ ಗುರುಗಳಾದ ಶ್ರೀಕೃಷ್ಣ ಯತಿಗಳನ್ನು ಸಂಪರ್ಕಿಸಿ ಅವರ ಬಹುಕಾಲ ವಾಸಿಯಾಗದಿದ್ದ ರೋಗವನ್ನು ಗುಣಪಡಿಸಿ ತನ್ಮೂಲಕ ಶ್ರೀಕೃಷ್ಣ ಯತಿಗಳಿಗೆ ಹಾಗೂ ಅವರ ಅಪಾರ ಶಿಷ್ಯ ವೃಂದಕ್ಕೆ ತಪ್ತ ಮುದ್ರಾಧಾರಣೆ ಮಾಡಿಸಿ ತಮ್ಮ ಮಠದ ಶಿಷ್ಯರನ್ನಾಗಿಸಿದ ಇತಿಹಾಸದ ದಾಖಲೆ ಲಭ್ಯವಿದೆ.

ಶ್ರೀ ವಾದಿರಾಜ ತೀರ್ಥರ ನಂತರ ಮುಂದಿನ ಯತಿಗಳು ಭಾಷಾ ತೊಂದರೆಯಿಂದಾಗಿ ಗುಜರಾತಿನೊಂದಿಗೆ ಸಂಪರ್ಕ ರಹಿತರಾದುದರಿಂದ ಮಠದ ಬಾಂಧವ್ಯ ತಪ್ಪಿದರೂ ಅಲ್ಲಿನ ಶಿಷ್ಯರು ಇಂದಿಗೂ ತಾವು ಉಡುಪಿ ಮಠದ ಶಿಷ್ಯರೆಂದು ಅಭಿಮಾನದಿಂದ ಹೇಳಿಕೊಳ್ಳುವ ಭಕ್ತಿಯನ್ನು ತೋರಿದ್ದಾರೆ. ಇಂದಿಗೂ ಗುಜರಾತಿನ ವೈಷ್ಣವರು ತುಲಸಿ ಮಾಲಾಧಾರಕರಾಗಿರುವುದು ಇದಕ್ಕೆ ಪೂರಕವಾಗಿದೆ.

ಬಂಗಾಲದಲ್ಲಿ ಹದಿನೆಂಟನೆಯ ಶತಮಾನದಲ್ಲಿ ಚೈತನ್ಯ ಪ್ರಭುವಿನ ಅನೇಕ ಶಿಷ್ಯರಿಂದಾಗಿ ಪ್ರಬಲ ವೈಷ್ಣವ ಸಂಪ್ರದಾಯವು ಉತ್ತರ ಭಾರತದಲ್ಲಿ ಬೇರೂರಿರುವುದು ಕಂಡು ಬರುತ್ತದೆ. ಪ್ರಭುವಿನ ಶಿಷ್ಯರಾದ ರಾಧಾ ದಾಮೋದರ ಹಾಗೂ ಬಲದೇವ ವಿದ್ಯಾಧರ ಭೂಷಣರ ಕೃತಿಗಳಿಂದಾಗಿ ಅಲ್ಲಿನ ಜನತೆ ದ್ವೈತ ಸಂಸ್ಕೃತಿಯನ್ನು ಅತ್ಯಾದರದಿಂದ ಬರಮಾಡಿಕೊಂಡಿತು. ಬಲದೇವ ವಿದ್ಯಾಭೂಷಣನ 'ಪ್ರಮೇಯ ರತ್ನಾವಳಿ' ಗ್ರಂಥದಿಂದ-



**ಶ್ರೀ ಮಧ್ವಃ ಪ್ರಾಹ ವಿಷ್ಣುಂ ಪರತಮಖಿಲಾಮ್ನಾಯವೇದ್ಯಂ ಚ ವಿಶ್ವಂ।**

**ಸತ್ಯಂ ಭೇದಂ ಚ ಜೀವಾನ್ ಹರಿಚರಣಜುಷಸ್ತಾರತಮ್ಯಂ ಚ ತೇಷಾಮ್ ॥**

**ಮೋಕ್ಷಂ ವಿಷ್ಣ್ವಂಘ್ರಿಲಾಭಂ ತದಮಲಭಜನಂ ತಸ್ಯ ಹೇತುಂ ಪ್ರಮಾಣಂ।**

**ಪ್ರತ್ಯಕ್ಷಾದಿತ್ರಯಂ ಚೇತ್ಯುಪದಿಶತಿ ಹರಿಃ ಕೃಷ್ಣ ಚೈತನ್ಯ ಚಂದ್ರಃ ॥**

ಸರ್ವೋತ್ತಮ ವಿಷ್ಣು ಎಲ್ಲ ಆಗಮಗಳಿಂದ ಅರಿಯಲ್ಪಡುವವ, ವಿಶ್ವಸತ್ಯ, ಪಂಚಭೇದ ಸತ್ಯ, ಜೀವರು ಹರಿಚರಣ ಸೇವಕರು, ಅವರಲ್ಲಿ ತಾರತಮ್ಯವಿದೆ, ವಿಷ್ಣುವಿನ ಪಾದಾಂಘ್ರಿ ಸೇರುವುದೇ ಮೋಕ್ಷ; ನಿರ್ಮಲ ಭಜನೆಯೇ ಅದಕ್ಕೆ ಸಾಧನ ಪ್ರತ್ಯಕ್ಷ - ಯುಕ್ತಿ - ಆಗಮ ಈ ಮೂರೇ ಪ್ರಮಾಣಗಳು ಎಂದು ಶ್ರೀ ಮಧ್ವಾಚಾರ್ಯರು ಹೇಳಿದರೆಂದ ಚೈತನ್ಯದೇವನು ಉಪದೇಶಿಸುತ್ತಾನೆ.

ಮಧ್ವ ಸಿದ್ಧಾಂತದಿಂದ ಆಕರ್ಷಿತರಾದ ಚೈತನ್ಯ ಮಹಾಪ್ರಭುವಿನ ಪರಂಪರೆಯಲ್ಲಿ ಮೂಡಿಬಂದ ಶ್ರೀ ಭಕ್ತಿ ವೇದಾಂತ ಪ್ರಭುಪಾದರು ಅಂತಾರಾಷ್ಟ್ರೀಯ ಶ್ರೀಕೃಷ್ಣ ಮಹಾಪ್ರಜ್ಞಾ ಸಂಘವನ್ನು ಹುಟ್ಟುಹಾಕುವುದರೊಂದಿಗೆ ಪರಮಾದ್ಭುತವೆನಿಸಿದ ಕಾರ್ಯವನ್ನು 1966ರಲ್ಲಿ ಮಾಡಿದುದು ದಾಖಲೆಯಾಗಿದೆ.

1966ರಲ್ಲಿ ಕೇವಲ ಭಾರತೀಯ ಪ್ರಾಚೀನ ಗ್ರಂಥಗಳು ಹಾಗೂ ನಲವತ್ತು ಡಾಲರ್‌ನೊಂದಿಗೆ ಅಮೇರಿಕಕ್ಕೆ ಪದಾರ್ಪಣೆ ಮಾಡಿದ ಹಾಗೂ ಹರೇಕೃಷ್ಣ ಪಂಥವನ್ನು ಸೃಷ್ಟಿಸಿ ಇಂದು ಜಗತ್ತಿನಾದ್ಯಂತ 435 ಶ್ರೀ ಹರೇಕೃಷ್ಣ ದೇಗುಲಗಳನ್ನು ನಿರ್ಮಿಸಿದ ಕೀರ್ತಿಗೆ ಭಾಜನರಾಗಿದ್ದಾರೆ. ಅವರು ಪ್ರತಿಪಾದಿಸಿದ ಶ್ರೀ ವಿಷ್ಣು ಸರ್ವೋತ್ತಮತ್ವ ಹಾಗೂ ಕಠೋರ ನಿಯಮವನ್ನು ತಮ್ಮ ಶಿಷ್ಯರು ಪಾಲಿಸುವಂತೆ ಮಾಡಿದ್ದಾರೆ. ಶಿಖೆ, ಕಚ್ಚೆ ಪಂಚೆ, ಜನಿವಾರ, ಗೋಪೀಚಂದನಧಾರಣೆ - ಏಕಾದಶಿ ಆಚರಣೆ ಮತ್ತು ಶುದ್ಧ ಶಾಖಾಹಾರ ನಿಬಂಧನೆಯೊಡನೆ ದ್ವೈತ ಸಂಘಟನೆಯನ್ನು ಅಂತರರಾಷ್ಟ್ರೀಯವಾಗಿಸಿದ್ದಾರೆ.

ದೈನಂದಿನ ಪೂಜಾ ವಿಧಾನದಲ್ಲಿ ಬದಲಾವಣೆಗಳಿದ್ದರೂ ಮೂಲ ಆದರ್ಶವಾದ ಶ್ರೀಮನ್ನಾರಾಯಣನೇ ಸರ್ವಶ್ರೇಷ್ಠನೆನ್ನುವ ನೀತಿ ಅರ್ಥಪೂರ್ಣ.

ಉತ್ತರ ಭಾರತದ ರೂಪ ಗೋಸ್ವಾಮಿ - ಜೀವ ಗೋಸ್ವಾಮಿಯೆಂಬ ಸಂತರು ದ್ವೈತ ಸಿದ್ಧಾಂತದ ಪ್ರಮೇಯ ನವರತ್ನವೆಂಬ ನವರತ್ನಗಳಿಂದ ಪ್ರಭಾವಿತರಾಗಿ ತಾವು ನಂಬಿದ ಅದ್ವೈತದ ಪೊರೆಯಿಂದ ಹೊರಬಂದು ದ್ವೈತವನ್ನು ಆಲಿಂಗಿಸಿದ ಘಟನೆ ಉಲ್ಲೇಖಾರ್ಹ.

## ಗೌಡಸಾರಸ್ವತ ಸಮಾಜ - ದ್ವೈತ ಕಕ್ಷೆಯಲ್ಲಿ

ಗೋವಾದಿಂದ 15ನೇ ಶತಮಾನದಲ್ಲಿ ಪಶ್ಚಿಮ ಕರಾವಳಿಯಾದ್ಯಂತ ವಲಸೆ ಬಂದ ಗೌಡ ಸಾರಸ್ವತ ಬ್ರಾಹ್ಮಣ ಸಮೂಹವನ್ನು ದ್ವೈತ ದೀಕ್ಷೆಗೆ ಒಳಪಡಿಸಿ ಪರಿವರ್ತಿತಗೊಳಿಸುವಲ್ಲಿ ಉಡುಪಿಯ ಫಲಿಮಾರು ಶ್ರೀಗಳಾದ ಶ್ರೀ ರಾಮಚಂದ್ರತೀರ್ಥರು ಕಾರಣೀಭೂತರಾಗಿದ್ದಾರೆ.

ಅವರು ನಾರಾಯಣತೀರ್ಥರೆಂಬ ಸಾರಸ್ವತ ಬಂಧುವಿಗೆ ಯತಿದೀಕ್ಷೆ ನೀಡಿ ದ್ವೈತ ಮತಾನುಯಾಯಿಯಾಗುವಂತೆ ಮಾಡಿದುದು ಇತಿಹಾಸ.

ನಾರಾಯಣ ತೀರ್ಥರಿಂದಾಗಿ 1476ರಲ್ಲಿ ಗೋಕರ್ಣ ಪರ್ತಗಾಳಿ ಮಠವೆಂಬ ದ್ವೈತ ಮಠವೊಂದು ಸ್ಥಾಪಿಸಲ್ಪಟ್ಟಿತು. ಪೋರ್ಚುಗೀಸರ ದಬ್ಬಾಳಿಕೆಯಿಂದ ಬೇಸತ್ತ ಸಾರಸ್ವತರಿಗೆ ನಾರಾಯಣ ತೀರ್ಥರ ಮಠವು ಆಶ್ರಯವೊದಗಿಸಿತು. ಶ್ರೀ ನಾರಾಯಣ ತೀರ್ಥರಿಂದಾಗಿ ಕಾಶಿಮಠವೂ ದ್ವೈತ ಸಂಪ್ರದಾಯದ ಉಡಿಯಲ್ಲಿ ಬಂದಿರುವುದು ಐತಿಹಾಸಿಕ ದಾಖಲೆ. ಈ ಎರಡೂ ಮಠಗಳು ಗೋಪೀ ಚಂದನ ಧಾರಣೆ ಹಾಗೂ ಅಂಗಾರ ಅಕ್ಷತೆಯ ಲಾಂಛನವನ್ನು ತಮ್ಮದಾಗಿಸಿಕೊಂಡವು.

ಮಧುರೆ ಜಿಲ್ಲೆಯಲ್ಲಿ ಸ್ಥಿತರಾಗಿದ್ದ ನೆಯ್ಗೆ ವೃತ್ತಿಯವರು ಸೌರಾಷ್ಟ್ರ ಬ್ರಾಹ್ಮಣರೆನಿಸಿಕೊಂಡು ಮಧುರೆ ಜಿಲ್ಲೆಯಲ್ಲಿ ಸ್ಥಿತರಾಗಿದ್ದಾರೆ. ಆ ಸಮುದಾಯ ಶ್ರೀ ವ್ಯಾಸ ತೀರ್ಥರಿಂದ ಮುದ್ರಾಂಕನ ಪಡೆದು ದ್ವೈತ ದೀಕ್ಷೆ ಹೊಂದಿದೆ.

ಭಾರತ ವರ್ಷದ ಪೂರ್ವ ದಿಕ್ಕಿನಲ್ಲಿರುವ ಆಸ್ಸಾಂ ಪ್ರಾಂತ್ಯದಲ್ಲಿಯೂ ಮಾಧ್ವ ಶಿಷ್ಯರು ಅಪಾರ ಸಂಖ್ಯೆಯಲ್ಲಿದ್ದು ಅವರದೇ ಶೈಲಿಯಲ್ಲಿ ದ್ವೈತ ಸಂಪ್ರದಾಯವನ್ನು ಪಾಲಿಸುತ್ತಿದ್ದಾರೆ. ಉತ್ತರಾದಿ ಮಠದಿಂದ ಮುದ್ರಾಂಕನ ಪಡೆದ ಗಯಾವಾಡ ಬ್ರಾಹ್ಮಣರು ಮಾಧ್ವ ಸಂಪ್ರದಾಯಸ್ಥರಾಗಿ ಸೇವೆ ಸಲ್ಲಿಸುತ್ತಿದ್ದಾರೆ.

ಇಂದು ಸುಮಾರು ಮುವತ್ತಕ್ಕೂ ಹೆಚ್ಚು ಮಾಧ್ವ (ದ್ವೈತ) ಮಠಗಳ ಪರಂಪರೆಯಿಂದಾಗಿ ದ್ವೈತ ಸಂಸ್ಕೃತಿಯು ಆಳವಾಗಿ ಜನರಲ್ಲಿ ಬೇರೂರಲು ಕಾರಣವಾಯ್ತು. ದ್ವೈತ ಗ್ರಂಥಗಳು ಸಾವಿರಗಳ ಸಂಖ್ಯೆಯಲ್ಲಿ ಪ್ರಕಾಶಿತ ಗೊಂಡವು. ಶ್ರೀ ಮದಾಚಾರ್ಯರ ನಂತರ ಪ್ರಭಾವಿ ಅವತಾರ ಪುರುಷರು (ಚೈತನ್ಯ ಮಹಾಪ್ರಭು, ವಲ್ಲಭಾಚಾರ್ಯ, ಭಕ್ತಿ ವೇದಾಂತ ಪ್ರಭುಪಾದ) ಎಲ್ಲಾ ಪರಂಪರೆಯಲ್ಲಿ ಉದಯಿಸಿ ದ್ವೈತ ಧ್ವಜವನ್ನು ಎತ್ತಿ ಹಿಡಿದು ಜನಮನವನ್ನು ಸೂರೆಗೊಂಡಿರುವುದು ಸತ್ಯ. ಭಾರತದಾದ್ಯಂತ ಶ್ರೀ ಕೃಷ್ಣ - ವೆಂಕಟೇಶ, ಜನಾರ್ದನ, ಶ್ರೀ ರಾಮಚಂದ್ರ, ನರಸಿಂಹ ದೇಗುಲಗಳು ಸ್ಥಾಪಿತಗೊಂಡು ಶ್ರೀ ಸರ್ವೋತ್ತಮ ತತ್ವ ಚಿರಾಯುವಾಯ್ತು. ಹರೇಕೃಷ್ಣ ಪಂಥ ವಿಶ್ವವ್ಯಾಪಿಯಾಯಿತು.


*With Best Compliments from :*

ESTD : 1930
Grams : "HANUMANCO"



**THE HANUMAN TRANSPORT COMPANY PVT. LTD.**

**P. B. No. 27, Chitpadi, Udupi - 576 101**

**Phone Office : 2520319** **Managing Director : 2521239**

# ದೈವ ಪುರುಷ ಪ್ರಯತ್ನ

ಪ್ರೊ. ಬಿ. ವಿ. ಮಾರ್ಕಾಂಡೇಯ

**ನ**ಮ್ಮ ಪ್ರಾಚೀನರು ಅದೃಷ್ಟವನ್ನು ನಂಬಿದ್ದರೂ, ಮನುಷ್ಯ ಪ್ರಯತ್ನಕ್ಕೇ ಪ್ರಾಧಾನ್ಯವಿತ್ತಿದ್ದಾರೆ. ಮನುಷ್ಯ ಪ್ರಯತ್ನ ಮೊದಲು, ಅನಂತರ ದೈವ, ಅದೃಷ್ಟ, ವಿಧಿ, ಹಣೆ ಬರಹ ಇವೆಲ್ಲವೂ ಅದೃಷ್ಟ - ಅ - ದೃಷ್ಟ ನೋಡಿರಲ್ಪಡದ್ದು, ಕಂಡಿರದ್ದ, ನಮಗೆ ಅದು ಕಂಡಿಲ್ಲ, ಕಾಣದು. ಆದನ್ನೇ 'ವಿಧಿ' ಎಂದು ಕರೆದಿದ್ದಾರೆ. "ಅದು ನಮ್ಮ ಹಣೆಯ ಬರಹ" ಎನ್ನುತ್ತೇವೆ. ನಮ್ಮೆಲ್ಲ ಸೋಲುಗಳಿಗೂ ಕೆಲವರು ವಿಧಿಯೇ ಕಾರಣ ಎನ್ನುತ್ತಾ, ಗೆಲುವು ಮಾತ್ರ ತಮ್ಮಿಂದಾದದ್ದು ಎಂದು ಭ್ರಮಿಸುತ್ತಾರೆ. ಯೇಸೂಕ್ರಿಸ್ತರೆನ್ನುತ್ತಾರೆ- "ಮಾನವನೇ ತನ್ನ ಆತ್ಮಶಿಲ್ಪಿ" ಮನುಷ್ಯ ಪ್ರಯತ್ನ ವಿಲ್ಲದೇ ದೈವೀ ಸಹಾಯವಿಲ್ಲ ಎನ್ನುವುದೂ ಸತ್ಯವೇ. ಕಷ್ಟ - ಪ್ರಯತ್ನ "ನದೈವಮಿತಿ ಸಂಚಿಂತ್ಯ ತ್ಯಜೇದುದ್ಯೋಗ ಮಾತ್ಮನಃ - ಎನ್ನುವ ಆರ್ಯೋಕ್ತಿಯೇ ಇದೆ. ದೈವವನ್ನೇ ನಂಬಿ. ಮನುಷ್ಯ ತನ್ನ ಉದ್ಯೋಗವನ್ನು, ಪ್ರಯತ್ನವನ್ನು ಬಿಡಬಾರದು. ನಾವು ವಿಧಿಯ ಕೈವಾಡ ಎನ್ನುತ್ತಾ ಸುಮ್ಮನೇ ಇರಬಾರದು. ಪರಿಸ್ಥಿತಿ, ಜನತೆ ನಮಗೆ ಪೂರಕ, ಅನುಕೂಲವಾಗುವಂತೆ ಮಾಡಬೇಕು. ಎ. ಎಂ. ಜೋಸೆಫ್‌ರೆಂದಂತೆ ಅದೃಷ್ಟ ಸಂದರ್ಭ ಮತ್ತು ಜನತೆ ನಮಗೆ ಅಧೀನವಾಗುವಂತೆ ಯತ್ನಿಸಬೇಕೇ ವಿನಾ, ನಾವೇ ಅವಕ್ಕೆ ತುತ್ತಾಗಬಾರದು. "ಅದೃಷ್ಟವು ಪುರುಷ ಪ್ರಯತ್ನದಿಂದಲೇ ಆದದ್ದು" ಎಂದು ಹೊಸಕೆರೆ ಚಿದಂಬರಯ್ಯನವರು ಒತ್ತಿ ಹೇಳುತ್ತಾರೆ. ಇದರರ್ಥ ಜಗತ್ತಿನಲ್ಲಿ ಪರಾತ್ಮರ ಶಕ್ತಿ ಇಲ್ಲವೇ ಇಲ್ಲ ಎನ್ನುವುದಲ್ಲ.

### ನಿಸರ್ಗಾತೀತವಾದ ಶಕ್ತಿ

ನಿಸರ್ಗಾತೀತವಾದ ಶಕ್ತಿಯನ್ನೇ ಹಿಂದಿನವರು ದೇವರು ಎಂದು ಕರೆದರು. ಇಂದಿನ ವಿಜ್ಞಾನಿಗಳೂ ಅದನ್ನೇ ಶಕ್ತಿ, ಪಾವರ್, ಎನರ್ಜಿ ಎಂದು ಕರೆದರು. ಅದರು ಇಂದಿಗೂ ಮಾನವಾತೀತವಾಗಿಯೇ ಇದೆ. ಕವಿಗಳು, ಸಾಹಿತಿಗಳು ಇದನ್ನೇ ನಿಸರ್ಗ, ಪ್ರಕೃತಿ ಎಂದಿದ್ದಾರೆ. ಅದನ್ನು ನಾವು ಒಂದು ರೀತಿಯಲ್ಲಿ ನಿಯಂತ್ರಿಸಿದ್ದೇವೆ. ನಿಯಂತ್ರಿಸುತ್ತೇವೆ ಎಂದು ಬೀಗುತ್ತಿದ್ದಂತೆ ಅದು ತನ್ನ ಹಿಡಿತವನ್ನು ಮತ್ತೂ ಬಿಗುಗೊಳಿಸುತ್ತಿದೆ. ನಿತ್ಯವೂ ನಡೆಯುವ ಅನಾಹುತ, ಅವಘಡ, ಸಾವು - ನೋವು, ಹಳೆಯ ಅಪರೂಪದ ರೋಗಗಳ ಸಾಮಾನ್ಯೀಕರಣ, ಸಾರ್ವತ್ರೀಕರಣ, ಹೊಸ ಹೊಸ ಮಹಾರೋಗಗಳ ಉದಯ ಮುಂತಾದವು ಇನ್ನೂ ಭಯಂಕರವಾಗುತ್ತಿವೆ. ಷೇಕ್ಸ್‌ಪೀಯರರೆಂದಂತೆ, "ನಾವೆಷ್ಟೇ ಅದೃಷ್ಟವನ್ನು ಕಡೆಗಣಿಸಿದರೂ, ಅದನ್ನು ರೂಪಿಸುವ ಶಕ್ತಿಯ ಪ್ರಾಬಲ್ಯ ಅಧಿಕವಾಗಿದೆ". ಇನ್ನೂ ಅದೃಷ್ಟದ ಆಟ ವಿಚಿತ್ರವಾಗಿಯೇ ಉಳಿದಿದೆ. ಪರ್ವತದಷ್ಟು ಮೇಲಿಂದ ಬಿದ್ದರೂ, ಏನೊಂದೂ ಆಗದ, ಇದ್ದಲ್ಲಿಯೇ ಅವಘಡಕ್ಕೀಡಾಗುವ ವಿಚಿತ್ರ ಸನ್ನಿವೇಶ ಹೆಚ್ಚುತ್ತಲೇ ಇವೆ. ಸುಭಾಷಿತ ತಿಳಿಸುವಂತೆ ಅದೃಷ್ಟ ಚೆನ್ನಾಗಿದ್ದರೆ ಹಾವೂ ಹೂವಿನ ಮಾಲೆಯಾಗುತ್ತದೆ. ಅದೇನೇ ಇದ್ದರೂ ಪುರುಷ ಪ್ರಯತ್ನಕ್ಕೆ ಮಾತ್ರ ದೈವೀ ಸಹಾಯ ಎನ್ನುವ ಕಟು ಸತ್ಯವನ್ನರಿತು ಆಚರಿಸಿದಾಗ ಮಾತ್ರ ನಮ್ಮ ಜೀವನ ಸುಖ ಶಾಂತಿಯಿಂದ ಕೂಡಿರುತ್ತದೆ.



### ಸತ್ಯದ ಅರಿವು – ಮನುಕುಲ ಉಳಿವು

ಭಾರತೀಯರು ಮೊದಲಿನಿಂದಲೂ ನಿಸರ್ಗಾತೀತವಾದ ಶಕ್ತಿಯಲ್ಲಿ ನಂಬಿಕೆಯನ್ನು ಇರಿಸಿಕೊಂಡವರು. ಮನುಷ್ಯ ಪ್ರಯತ್ನಕ್ಕೆ ಪ್ರಥಮ ಪ್ರಾಶಸ್ತ್ಯವಿತ್ತು ತಾನು ಮಾಡಿದ ಕಾರ್ಯ-ಕರ್ತವ್ಯವನ್ನು ಮುಗಿಸಿ ಅದರ ಫಲಾಫಲಗಳನ್ನು ಪರಮಾತ್ಮನಿಗೆ ಬಿಡಬೇಕೆಂದು, ಅದರಿಂದ ಕಾರ್ಯತೃಪ್ತಿಯೊಂದಿಗೆ, ಮಾನಸಿಕ ಸಮತೋಲನ ಉಂಟಾಗುವ ಸತ್ಯವನ್ನು ಬೋಧಿಸಿದರು. ನಿಷ್ಕಾಮಕರ್ಮ 'ಕರ್ಮಣ್ಯೇವಾಧಿಕಾರಸ್ತೇ ಮಾಫಲೇಷು ಕದಾಚನ' ನಿನಗೆ ಕರ್ತವ್ಯಮಾಡುವುದರಲ್ಲಿ ಮಾತ್ರ ಅಧಿಕಾರವಿದ್ದದ್ದು, ಅದರ ಫಲದಲ್ಲಲ್ಲ ಎಂದು ಗೀತಾಚಾರ್ಯರೇ ತಿಳಿಸಿದ್ದಾರೆ. 'ಸುಖ - ದುಃಖೇ ಸಮೇಕೃತ್ವಾ ಲಾಭಾ ಲಾಭೌ ಜಯಾ ಜಯೌ' ಸುಖ ದುಃಖ ಲಾಭಾ ಲಾಭ, ನೋವು - ನಲಿವು ಎರಡನ್ನೂ ಸಮಭಾವ ಸಮಚಿತ್ತದಿಂದ ಸ್ವೀಕರಿಸಿದಾಗ ಮಾತ್ರ ಬಾಳು ಸಹ್ಯವಾಗುತ್ತದೆ. ಜೀವನ ಜೇನಾಗುತ್ತದೆ ಎನ್ನುವ ಕಟುಸತ್ಯವನ್ನು ಜಗತ್ತಿಗೆ ತಿಳಿಸಿದ್ದಾರೆ. ಇಂದಿನ ವೈದ್ಯಕೀಯ ವಿಜ್ಞಾನ, ಮನೋವಿಜ್ಞಾನಗಳೂ ಇದನ್ನು ಇಂದು ಅರಿತು ಇದರ ಅಗತ್ಯವನ್ನು ಒತ್ತಿ ಹೇಳುತ್ತಿವೆ.

### ಪ್ರಗತಿ – ವಿಗತಿ

ಇಂದು ವಿಜ್ಞಾನ - ತಂತ್ರಜ್ಞಾನದ ಪ್ರಗತಿಯಿಂದಾಗಿ ನಾವು ನೀರಲ್ಲಿ ಮೀನಾಗಿ ನೆಲದಲ್ಲಿ ಹುಲಿಯಾಗಿ, ವ್ಯೋಮದಲ್ಲಿ ಖೇಚರರಾಗಿ, ಇಂದ್ರ - ಚಂದ್ರರಲ್ಲಿ ಮುತ್ತಿನವಸೃಷ್ಟಿ ಪ್ರತಿರೂಪ (ಕ್ಲೋನಿಂಗ್) ಹಂತವನ್ನೂ ಮೀರಿದ್ದೇವೆ ಎಂದು ಬೀಗುತ್ತಿದ್ದೇವೆ. ಹಿಂದಿನವರು ಕನಸು - ಕನಸಿನಲ್ಲಿಯೂ ಕಂಡಿರದ ಅದ್ಭುತ ಸಾಧನೆಗಳನ್ನು ಮಾಡಿದ್ದೇವೆ ಎಂದೂ ಬೀಗುತ್ತಿದ್ದೇವೆ. ಆದರೆ ನಿಸರ್ಗ ಇವೆಲ್ಲವನ್ನೂ ಮೀರಿ ಹಿಂದಿಗಿಂತಲೂ ಅಧಿಕ ಸಂಖ್ಯೆಯ ರೋಗ - ರುಜಿನಗಳು, ಹೊಸ ಹೊಸ ಖಾಯಿಲೆಗಳು ಹಿಂದೆ ಬಲು ಅಪರೂಪವಾಗಿ ಅದೂ ವೃದ್ಧಾಪ್ಯದಲ್ಲಿ ಮಾತ್ರ ತೋರಬಹುದಾಗಿದ್ದ ಹೈಪರ್ ಎಸಿಡಿಟಿ, ಎಮೆಬಿಕಡೈಸೆಂಟ್ರಿ, ಆಲ್ಸರ್, ಕ್ಯಾನ್ಸರ್, ಡಯಾಬಿಟಿಸ್, ಹೈಬ್ಲಡ್‌ಪ್ರೆಶರ್, ಏಡ್ಸ್, ಹಾರ್ಟ್ ಎಟೇಕ್, ಹಾರ್ಟ್‌ಫೈಲ್ಯೂರ್, ಎಂಕ್ಸೈಟ ಡಿಪ್ರೆಶನ್, ಹಸ್ಟೀರಿಯಾ, ಸೈಕೋಡಿಸಾರ್ಡರ್‌ಗಳ ಸಂಖ್ಯೆ ಅತ್ಯಧಿಕವಾಗಿ 30 ವರ್ಷ ಪ್ರಾಯ ದಾಟುವುದರೊಳಗೆ ಇವೆಲ್ಲ 'ಸರ್ವೇಸಾಮಾನ್ಯ' ಎನ್ನುವಂತಾಗಿದ್ದರೆ ನಮ್ಮ ಪ್ರಗತಿಗೆ ಅರ್ಥವಾದರೂ ಏನು?

ಇವಕ್ಕೆಲ್ಲಾ ಮೂಲಕಾರಣ ನಮ್ಮಲ್ಲಿಯ ಆಧುನಿಕತೆಯ ನಾಗರಿಕತೆಯ ಅತಿರೇಕ ಮತ್ಸರ - ಲೋಭ, ಸ್ವಾರ್ಥಾತಿರೇಕ ಯಾಂತ್ರಿಕ ಅನಿಶ್ಚಿತತೆಯ ಅವಸರದ ಜೀವನದಿಂದಾಗಿ ಟೆನ್ಶನ್ - ಸಂಸ್ಕೃತಿಯ ಅಭಾವ ಎಲ್ಲ ರೋಗಗಳಿಗೂ ಮೂಲ ಬರಿಯ ಬಾಹ್ಯ ವಸ್ತುಗಳ ಟಿ. ವಿ. ಸಂಪತ್ತು ಮೋಟರ್‌ಕಾರು, ವಿಲಾಸೀ ವಸ್ತುಗಳು ಎಂದೂ ಸೌಖ್ಯ ಮನಃಶಾಂತಿ ತಾರದೇ ಅಸೌಖ್ಯ - ಅಶಾಂತಿ ಅಧಿಕಗೊಳಿಸುವುವು. ಜೀವನ ಮೌಲ್ಯ ಸಾಮಾಜಿಕ ಮೌಲ್ಯ ಧರ್ಮ, ನೀತಿ, ಸಚ್ಚಾರಿತ್ರ, ಸಾಹಿತ್ಯ, ಕಲೆ ಮತ್ತು ಸಾಂಸ್ಕೃತಿಕ ಅಂಶಗಳ ಬೆಳವಣಿಗೆಯಿಲ್ಲದೇ ನಮ್ಮ ಬರಿಯ ನಾಗರಿಕತೆಯ ಪ್ರಗತಿ ಬ್ರೇಕಿಲ್ಲದ ಮೋಟಾರಿನಂತೆ ಅನಾಹುತ ವಿನಾಶ ತರುವುದೆಂಬ ಕಟುಸತ್ಯವೊಂದೇ ಮನುಕುಲ ಉಳಿಸೀತು.

# ಸುಗುಣಾಂತರಂಗ

ಸಂಪುಟ : 20 ಮೇಷ ಮಾಸ ಸಂಚಿಕೆ : 4 ಏಪ್ರಿಲ್ 2005

## ಸುಗುಣ ಬಳಗ

ಸಂಸ್ಥಾಪಕರು :
ಶ್ರೀ ಶ್ರೀ ಸುಗುಣೇಂದ್ರತೀರ್ಥ ಶ್ರೀಪಾದರು
ನಿರ್ದೇಶಕ : ಬನ್ನಂಜೆ ಗೋವಿಂದಾಚಾರ್ಯ
ಸಂಪಾದಕ : ಎಂ. ರಾಧಾಕೃಷ್ಣರಾವ್
ಪ್ರಕಾಶಕ : ಪ್ರಸನ್ನಾಚಾರ್ಯ
ಮುದ್ರಕ : ಬಿ.ಜಿ. ಸುಬ್ಬರಾವ್



ಸಲಹಾ ಮಂಡಳಿ
ಬನ್ನಂಜೆ ರಾಮಾಚಾರ್ಯ
ಮಳಗಿ ಜಯತೀರ್ಥಾಚಾರ್ಯ
ಡಾ। ಯು. ಪಿ. ಉಪಾಧ್ಯಾಯ
ಬಿಂದು ಮಾಧವಾಚಾರ್ಯ ನಾಗಸಂಪಿಗೆ
ಸಗ್ರಿ ರಾಘವೇಂದ್ರ ಉಪಾಧ್ಯಾಯ
ಡಾ। ಎನ್. ವೆಂಕಟೇಶ ರಾವ್
ಚಿಪ್ಪಗಿರಿ ನಾಗೇಂದ್ರಾಚಾರ್ಯ
ಗಂಜೀಫಾ ರಘುಪತಿ ಭಟ್
ಕಡೆಕಾರು ಶ್ರೀಶ ಭಟ್
ಉಡುಪಿ ರಾಮನಾಥಾಚಾರ್ಯ
ಬಿ. ಜಿ. ರವಿಕುಮಾರ್



ಸಂಪರ್ಕವಿಳಾಸ :
ಸಂಚಾಲಕ, ಸುಗುಣಮಾಲಾ ಮಾಸಪತ್ರಿಕೆ
ರಥಬೀದಿ, ಉಡುಪಿ - 576 101, ಉಡುಪಿ ಜಿಲ್ಲೆ, ಕರ್ನಾಟಕ
ದೂರವಾಣಿ : (0820) 2522222, 2531047
Tel Fax : 0820-2521272
E-Mail:mprasannaacharya@yahoo.com
Website:http://WWW.shreeputhige.org



ಚಂದಾವಿವರ
ವಾರ್ಷಿಕ : ರೂ. 80/- 15 ವರ್ಷ ರೂ. 1000/-
ಜಾಹೀರಾತು ವಿವರ :
ಅರ್ಧ ಪುಟಕ್ಕೆ ರೂ. 750/- ಒಂದು ಪುಟಕ್ಕೆ ರೂ. 1500/-


ಮುಖಪುಟ

**ಉಡುಪಿ ಶ್ರೀಕೃಷ್ಣ**

ಕೃಪೆ : ಶ್ರೀ ಶೀರೂರು ಮಠ, ಉಡುಪಿ


| | |
|---|---|
| ಸುವಾಣಿ | 1 |
| ಮರ್ಮಮೀಮಾಂಸೆ<br>ಸುಶ್ರೀ | 3 |
| ಮುಖಪುಟ ಲೇಖನ<br>ಶತಾವಧಾನೀ | 6 |
| ಶ್ರೀ ಸುಧಾ ಸುವಚನ ಲೇಖಾಂಕ - 37<br>ಶ್ರೀ ಶ್ರೀ ಸುಗುಣೇಂದ್ರ ತೀರ್ಥ ಶ್ರೀಪಾದರು. | 42 |
| ಕಥಾಲಕ್ಷಣ<br>ಪ್ರೊ। ಎಸ್. ವೆಂಕಟೇಶ ಮೂರ್ತಿ | 17 |
| ಮನಸ್ಸಿನ ವಿಶ್ವರೂಪ<br>ಮ. ಗೋ. ಹೆಗಡೆ | 21 |
| ವೇದದಲ್ಲಿ ಬ್ರಹ್ಮಚಿಂತನೆ<br>ಡಾ। ಎನ್. ಕೆ. ಉದಯಶಂಕರ್ | 25 |
| ಬಿಂಬ ಪ್ರತಿಬಿಂಬಗಳ ಸಮಾನ ನಡತೆ<br>ಸಗ್ರಿ ರಾಘವೇಂದ್ರ ಉಪಾಧ್ಯಾಯ | 29 |
| ಮಧ್ವರು - ಮಾಧ್ವರು<br>ಎ. ಬಿ. ಕುಂಜಾರ್, ಬೆಂಗಳೂರು | 45 |


ಇನ್ನಿತರ ಲೇಖನಗಳು ಒಳಪುಟಗಳಲ್ಲಿ

**2005 ಮೇ ತಿಂಗಳ ವಿಶೇಷಗಳು**

4 ಸರ್ವೈಕಾದಶೀ - ಕುಂಜೂರು ರಥ 8 ಅಮಾವಾಸ್ಯೆ
11 ಅಕ್ಷಯ ತೃತೀಯಾ -ಪರಶುರಾಮ ಜಯಂತಿ
13 ಕನ್ನರ್ಪಾಡಿ ರಥ 14 ವೃಷಭ ಸಂಕ್ರಮಣ
15 ಗಂಗೋತ್ಪತ್ತಿ 20 ಸರ್ವೈಕಾದಶೀ
21 ವಸಂತ ದ್ವಾದಶಿ - ವೇದವ್ಯಾಸ ಜಯಂತಿ, ವಿದ್ಯಾಮಾನ್ಯ ತೀರ್ಥರ ಆರಾಧನೆ
22 ನೃಸಿಂಹ ಜಯಂತಿ 23 ಕೂರ್ಮ ಜಯಂತಿ
26 ಸಂಕಷ್ಟ ಚತುರ್ಥಿ ಚ. ಉ. ಘಂ. 9-35


## ಶ್ರೀ ಪುತ್ತಿಗೆ ವಿದ್ಯಾಪೀಠಕ್ಕೆ ಪ್ರವೇಶಾವಕಾಶ

ಸನಾತನ ವೈದಿಕ ಸಂಸ್ಕೃತಿಯ ಘೋಷಣೆಯ ಉದ್ದೇಶದಿಂದ ಪರಮಪೂಜ್ಯ ಶ್ರೀ ಶ್ರೀ ಸುಗುಣೇಂದ್ರ ತೀರ್ಥ ಶ್ರೀಪಾದರ ದಿವ್ಯಮಾರ್ಗದರ್ಶನದಲ್ಲಿ ಹಿರಿಯಡ್ಕ ಶ್ರೀ ಪುತ್ತಿಗೆ ಮಠದಲ್ಲಿ ಸುವರ್ಣಾನದಿಯ ತೀರದ ಪ್ರಶಾಂತವಾದ ಆಶ್ರಮದ ವಾತಾವರಣದಲ್ಲಿ ಕಳೆದ 20 ವರ್ಷಗಳಿಂದ ಗುರುಕುಲ ಪದ್ಧತಿಯಲ್ಲಿ ವೇದ - ವೇದಾಂತ - ಆಗಮ - ಪೌರೋಹಿತ್ಯ - ಜ್ಯೋತಿಷ್ಯ ಮುಂತಾದ ವಿಷಯಗಳನ್ನು ಬೋಧಿಸುತ್ತಾ ಈ ವಿದ್ಯಾಪೀಠವು ನೂರಾರು ವಿದ್ಯಾರ್ಥಿಗಳನ್ನು ಸಮಾಜಕ್ಕೆ ನೀಡಿದೆ.

ಈ ವಿದ್ಯಾಪೀಠಕ್ಕೆ 'ಯು.ಜಿ.ಸಿ.'ಯಿಂದ ಮಾನ್ಯತೆ ದೊರೆತಿದ್ದು, ಇಲ್ಲಿ ಸಂಸ್ಕೃತದ ಪಿಯುಸಿ, ಡಿಗ್ರಿ, ಎಂ. ಎ. ತರಗತಿಗಳು ರಾಷ್ಟ್ರೀಯ ಸಂಸ್ಕೃತ ವಿದ್ಯಾಪೀಠ, ತಿರುಪತಿ (ಮಾನಿತ ವಿಶ್ವವಿದ್ಯಾಲಯ) ಇದರ ಅಧೀನದಲ್ಲಿ ಆರಂಭವಾಗಿವೆ.

ಇದೀಗ ಈ ವಿದ್ಯಾಪೀಠಕ್ಕೆ ಕರ್ನಾಟಕ ರಾಜ್ಯ ಸರಕಾರದ ಧಾರ್ಮಿಕ ದತ್ತಿ ಇಲಾಖೆಯಿಂದ ತಂತ್ರಸಾರ ಆಗಮಕ್ಕೆ ಅನುಮತಿ ಪ್ರಾಪ್ತವಾಗಿದೆ. ಒಟ್ಟು ಏಳು ವರ್ಷದ ಅಧ್ಯಯನದ ವ್ಯವಸ್ಥೆಯಿರುವ ಈ ವಿದ್ಯಾಪೀಠಕ್ಕೆ ಸೇರಲು ಇಚ್ಛಿಸುವ ವಿದ್ಯಾರ್ಥಿಗಳು ಜೂನ್ 15, 2005ರ ಒಳಗಾಗಿ ಸಂಪರ್ಕಿಸುವುದು.

ಪ್ರವೇಶಾವಕಾಶಕ್ಕೆ ವಿದ್ಯಾರ್ಹತೆ ಎಸ್. ಎಸ್. ಎಲ್.ಸಿ. ಉತ್ತೀರ್ಣತೆ.

ಹೆಚ್ಚಿನ ವಿವರಗಳಿಗಾಗಿ : ಪ್ರಾಂಶುಪಾಲರು, ಶ್ರೀ ಪುತ್ತಿಗೆ ವಿದ್ಯಾಪೀಠ
ಶ್ರೀ ಸುಗುಣೇಂದ್ರ ತೀರ್ಥ ವೇದ ಆಗಮ ಸಂಸ್ಕೃತ ಮಹಾಪಾಠಶಾಲಾ,
ಶ್ರೀ ಪುತ್ತಿಗೆ ಮಠ, ಪುತ್ತಿಗೆ ಹಿರಿಯಡ್ಕ, ಉಡುಪಿ. 576 113
ದೂರವಾಣಿ : 0820-2542205, 9448279303




ಶ್ರೀ ಪುತ್ತಿಗೆ ವಿದ್ಯಾಪೀಠದಲ್ಲಿ ನಡೆದ ಸಂವಾದ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಭಾವಹಿಸಿದವರು ಇಸ್ರೇಲ್ ದೇಶದ ಶ್ರೀ ಯುವಾಲ್ ಎಲಿಆವ್, ಶ್ರೀಮತಿ ರವಿತ್ ಎಲಿಆವ್.

ಮರ್ಮಮೀಮಾಂಸೆ

# ಶಿಬುಚಕ್ರವರ್ತಿ

ಇನ್ನು ಮೇಲೆ ವಿಮಾನ ಹೊರಡುವುದು, ನೆಲಬಿಡುವುದು, ಮೇಲೇರುವುದು ವಿಳಂಬವಾಗ ಹತ್ತಿದ್ದರೆ ಇಂಜಿನು ಹಾಳಾಗಿದೆಯೇನೋ ಎಂದು ಭಾವಿಸುವ ಆವಶ್ಯಕತೆ ಇಲ್ಲವಂತೆ. ನಿಮ್ಮ ವಿಮಾನದಲ್ಲಿ ಅಕ್ಕಂಪಕ್ಕದಲ್ಲಾರೋ ಫಕ್ಕಾರಾಜಕಾರಣಿ ಶಾಸಕ ಪ್ರಶಾಸಕರಾರೋ ಕೂತಿರಬೇಕು ಎಂದು ಭಾವಿಸಬೇಕಂತೆ. ಸರಕಾರಿ ವಿಮಾನವಾದರಂತೂ ಅದೇ ಖರೆಯಂತೆ.

ಯಾಕೆಂದರೆ ನೋಡಿದಿರಲ್ವಾ ಜಾರ್ಖಂಡ್‌ನಲ್ಲಿ? ವಿಮಾನ ಲೇಟ್‌ಮಾಡಿ ಬಹುಮತಗೆದ್ದದ್ದು. ತಿಪ್ಪರಲಾಗ ಹಾಕಿದ್ದು. ಸರ್ಕಸ್ ಮಾಡಿ ಸರ್ಕಾರ ಸ್ಥಾಪಿಸಿದ್ದು.

ಹಿಂದೆ ಬಹುಮತವನ್ನು ರಿಸಾರ್ಟ್‌ಗಳಲ್ಲಿ ಕಟ್ಟಿಹಾಕುವುದು ಸಂಪ್ರದಾಯವಾಗಿತ್ತು. ಈಗಂತೂ ಹೈಟೆಕ್ ಪಾಲಿಟಿಕ್ಸ್ ಬಂದ ಮೇಲೆ ಬಹುಮತವನ್ನು ಹೈಜಾಕ್ ಮಾಡುವುದು, ಆಕಾಶದಲ್ಲಿ ಕಟ್ಟಿಹಾಕುವುದು, ತೇಲಿಬಿಡುವುದು ಶುರುವಾಗಿದೆಯಂತೆ ನೋಡಿ. ವಿಮಾನ ಮೆಲ್ಲ ಮೆಲ್ಲ ಚಲಿಸುತ್ತಿದ್ದರೆ ಅಥವಾ ಇಳಿಯಲು ಮೀನಮೇಷ ಮಾಡುತ್ತಿದ್ದರೆ ಈಗ ರಾಜಕೀಯ ಹವಾಮಾನ ಚೆನ್ನಾಗಿಲ್ಲವೆಂದೇ ಭಾವಿಸಬೇಕಾಗುತ್ತದೆಯಂತೆ.

ಅಂತೂ ಜಾರ್ಖಂಡ್‌ನಲ್ಲಿ ಜಾರಿಕೊಂಡಾದರೂ ಏನಕೇನಪ್ರಕಾರೇಣ ಶಿಬುಚಕ್ರವರ್ತಿ ಏಕದಿನಚಕ್ರಾಧಿಪತಿಯಾಗಿ ಮೆರೆದೇ ಬಿಟ್ಟರಲ್ಲ? ಅದಕ್ಕೆ ತಾನೇ ಹೇಳುವುದು ಪೋಲಿಟ್ರಿಕ್ಸ್ ಎಂದು.

ರಾಜಕೀಯದಲ್ಲೇನುಬೇಕಾದರೂ ಆಗಬಹುದು ಎಂಬುದನ್ನು ಈ ಹಿಂದೆ ಜನ ಆಡಿಕೊಳ್ಳುತ್ತಿದ್ದರು. ಆದರೆ ಆಶ್ಚರ್ಯವೇನೆಂದರೆ ಈಗ ರಾಜಕಾರಣಿಗಳೇ ಅದನ್ನು ಹೇಳತೊಡಗಿದ್ದು, ಜೊತೆಗೆ ಅದು ರಾಜಕೀಯದ ಧರ್ಮ, ಮೈತ್ರಿ ಧರ್ಮ ಎಂದು ಧರ್ಮೋಪದೇಶ ಕೂಡ ಮಾಡಹತ್ತ್ಯಾರಂತೆ! ಕಲಿಕಾಲ ಶುರುವಾಗಿದೆ ಎಂಬುದಕ್ಕೆ ಅದುವೇ ಸಾಕ್ಷಿಯಲ್ಲವೇ?

ಕಲಿಕಾಲದಲ್ಲಿ ರಾಜಕಾರಣಿಗಳು ಧರ್ಮಾಧಿಕಾರಿಗಳ ಮಾತನ್ನು ಆಡುತ್ತಾರಂತೆ. ಧರ್ಮಾಧಿಕಾರಿಗಳಂತೆ ಪೋಸ್ ಕೊಡುತ್ತಾರಂತೆ. ಪೂಜೆ ಹೇಗೆ ಮಾಡಬೇಕು ಮಂತ್ರ ಹೇಗೆ ಹೇಳಬೇಕು ಎಂದು ಪೂಜಾರಿಗಳಿಗೆ ಉಪದೇಶಮಾಡುತ್ತಾರಂತೆ. ಧರ್ಮಾಧಿಕಾರಿಗಳು ಕೂಡಾ ರಾಜಕಾರಣಿಗಳ ಮಾತನ್ನಾಡುವುದಂತೆ. ಅದನ್ನು ಉಡಬೇಕಾದವರು ಇದನ್ನು ಉಡುವುದಂತೆ. ಇದನ್ನು ಉಡಬೇಕಾದವರು ಅದನ್ನು ಉಡುವುದಂತೆ. ಉಲ್ಟಾಪಲ್ಟ. ಇದುವೇ ಕಲಿಕಾಲವಂತೆ.

ಅಂತೂ ರಾಜಕೀಯದಲ್ಲೇನುಬೇಕಾದರೂ ಆಗಬಹುದು ಎಂಬುದಕ್ಕೆ ಕನಕಗೋಪುರ ಕೆಡಹಿದವರೇ ನ್ಯೂಯಾರ್ಕಿನ ಆ ಅವಳಿ ಗೋಪುರ ಕೂಡಾ ಕೆಡಹಿದ್ದು, ಮತ್ತೆ ಅವರೇ ಬಂದು ಲಾಲ್‌ಬಾಗಿನ ಕಂಪೌಂಡು ಕೂಡಾ ಬೀಳಿಸಿದ್ದು ಎಂಬಿತ್ಯಾದಿ ದಿವ್ಯ ಅಣಿಮುತ್ತುಗಳೇ



ಪುರಾವೆಯಾಗಬಹುದು. ಅದಕ್ಕೆ ನಮ್ಮ ಮಾನ್ಯ ರಜಿರಾಜ್ಯಪಾಲರೇ ತೀರ್ಪುನ್ನೂ ನೀಡಬಹುದು. ಆದರೆ ಸ್ವಾರಸ್ಯವೆಂದರೆ ರಾಜಕೀಯದಲ್ಲೇನುಬೇಕಾದರೂ ಆಗಬಹುದಾದ್ದರಿಂದ ಅದನ್ನು ಪ್ರತಿಭಟಿಸುವವರ ನಾಯಕರೇ ಆ ಕೃತ್ಯವನ್ನು ಓಟುಪಾಡಿಗಾಗಿ ಮಾಡಿಸಿರಬಹುದಲ್ಲವೇ? ಯಾಕೆಂದರೆ ಅದರಿಂದ ಅವರಿಗೆ ಓಟಿನ ಗಂಟೆಂಬ ಮಹಾಪ್ರಯೋಜನ, ಜೀವನದ ಪುರುಷಾರ್ಥ ಲಭಿಸುವುದರಿಂದ?

ಹಿಂದೆ ರಾಜ್ಯಪಾಲರೆಂದರೆ ರಾಜಕಾರಣಾತೀತರು ಗೌರವಾನ್ವಿತ ಮಹಾಶಯರು ಎಂಬ ಭಾವನೆ ಹೊರಹೊಮ್ಮುತ್ತಿತ್ತು. ಆ ಆಶಯದಂತೆಯೇ ಮಾನ್ಯ ಹಾಲಿರಾಷ್ಟ್ರಪಾಲರ ಆಯ್ಕೆಯೂ ಆಗಿತ್ತು. ಇದೀಗ ಅದು ಬದಲಾಗಿ ಓಡಾಡಿ ರಾಜಕಾರಣ ಮಾಡುವವರು ಮಂತ್ರಿಗಳು. ಓಡಾಡಿ ಸುಸ್ತಾಗಿದ್ದವರು ಕೂತಲ್ಲೇ ರಾಜಕಾರಣ ಮಾಡುವವರು ರಾಜ್ಯಪಾಲರಾಗುವುದು ಎಂಬಂತಾಗಿದೆಯೇ? ಅಥವಾ ಅವರ ರಾಜಕಾರಣವನ್ನು, ತುಂಟಾಟವನ್ನು ತಂಟೆಯನ್ನು ಉಪದ್ರವವನ್ನು ತಡೆಯಲಿಕ್ಕಾಗದಿದ್ದರೆ ಅವರನ್ನು ಅಸಹಾಯಕ ರಾಜಕಾರಣಿಯನ್ನಾಗಿಸಲು ಪರಊರಲ್ಲಿ ರಾಜ್ಯಪಾಲರನ್ನಾಗಿಸುವುದೇ?

ರಾಜ್ಯಪಾಲರ ಹುದ್ದೆ ಒಂದು ಸಮಾಧಾನಕರ ಬಹುಮಾನವಾಗಿ ಬಿಟ್ಟಿದೆಯೇ? ರಾಜ್ಯಪಾಲರ ಹುದ್ದೆ ಗಟ್ಟಿಮುಟ್ಟಾದವರಿಗೆ ಕೊಡುವುದು ಬಿಟ್ಟು ವಾನಪ್ರಸ್ಥಾಶ್ರಮಿಗಳಿಗೇನೇ ಮೀಸಲಿಟ್ಟರೆ ಹೇಗೆ? ಅಥವಾ ಉಪೇಕ್ಷಿತವರ್ಗಕ್ಕೆ ಅಬ್ರಾಹ್ಮರಿಗೆ ಮೀಸಲಿಟ್ಟರೆ ಹೇಗೆ? ಹಾಗೆ ಮಾಡಿದರೆ ನಮ್ಮ ಓಟ್‌ಬ್ಯಾಂಕ್ ಖಾತೆಯಲ್ಲಿ ಧಿಢೀರನೇ ಒಂದು ವರ್ಷದ ಮಟ್ಟಿಗಾದರೂ ಹತ್ತು ಪರ್ಸೆಂಟ್ ಲಾಭ ಉಕ್ಕಬಹುದಲ್ವಾ? ಅಥವಾ ರಾಜ್ಯಪಾಲಿಕೆಯರಿಗೇ ಮೀಸಲಿಟ್ಟರೆ ಫಿಫ್ಟಿ ಪರ್ಸೆಂಟ್ ಉಕ್ಕಬಹುದಲ್ವಾ?

ಅಥವಾ ರಾಜಕಾರಣಿಗಳಲ್ಲಿ ಮಾಜಿ ಆದಮೇಲೆ ನಿರುದ್ಯೋಗ ಸಮಸ್ಯೆ ನೀಗಲು ಮಾನ್ಯ ಮೌಲಿಮಣಿಯವರಂತೆ ಬರವಣಿಗೆಯ ಹಭ್ಯಾಸವನ್ನು, ವ್ಯಾಸಹವ್ಯಾಸವನ್ನು ಮೈಗೂಡಿಸಿಕೊಂಡಿರಬೇಕು. ಆದರೆ ರಾಜಕಾರಣಿ ಮತ್ತು ಉತ್ತಮ ಬರಹಗಾರ ಇವೆರಡೂ ಒಂದೆಡೆ ಜೊತೆಗೆ ಹೇಗೆ ಕೂಡುತ್ತದೆ ಎಂದು ಸಮಸ್ಯೆ ಬರಬಹುದಾದರೂ ಯಾವದಾದರೊಂದನ್ನು ಸೆಕ್ರೆಟರಿ ಮಹಾಶಯರಿಗೆ ಅಥವಾ ಮನೆಯವರಿಗೆ ವರ್ಗಾಯಿಸಿದರೆ ಸಮಸ್ಯೆ ಪರಿಹರಿಸಲಿಕ್ಕೆ ಸಾಧ್ಯವಿದೆ. ಅಥವಾ ಮಾಜಿ ರಾಜಕಾರಣಿಗಳು ತಮ್ಮ ಆತ್ಮ ಚರಿತ್ರೆಯನ್ನಾದರೂ ರಚಿಸಿ ಬರೆದು ಸೇಲ್ ಮಾಡಿದರೂ ಆಗುತ್ತದೆ.

ಅದಲ್ಲದಿದ್ದರೆ ಕನಕಗೋಪುರದಂತಹ ಯಾವುದಾದರೂ ಧಾಳಿಗೋಪುರವನ್ನು ಯಾರಾದರೂ ಹುಡುಕಿಕೊಟ್ಟರೆ ಮೂರು - ನಾಲ್ಕು ತಿಂಗಳು ಅಥವಾ ಜೀವನವಿಡೀ ದೂಡಲು ಅಡ್ಡಿಯಿಲ್ಲ. ಅಂತೂ ರಾಜಕಾರಣಿಗಳು ಒಂದು ಪಕ್ಷ ಮಾಜಿಯಾದರೆ ಕಪ್ಪು ನಾಯಿಯನ್ನು ಬಿಳಿ ಮಾಡುವಂತಹ ಕೆಲಸ ಸಿಕ್ಕರೆ ಒಳ್ಳೆಯದು. ಇಲ್ಲದಿದ್ದರೆ ಜಾತ್ಯತೀತತೆ, ಕೋಮುವಾದ, ಸಾಮಾಜಿಕ ಅನ್ಯಾಯ ಮೊದಲಾದ ಸವಕಲು ನಾಣ್ಯಗಳನ್ನೇ ತಿಕ್ಕಿಕೊಂಡು ಚರ್ವಿತ ಚರ್ವಣಗಳನ್ನೇ ಚರ್ವಣ ಮಾಡುತ್ತಾ ಪಿಷ್ಟ ಪೇಷಣ ಮಾಡುತ್ತಾ ಜಗಿಯುತ್ತಾ ಕಾಲ ಕಳೆಯ ಬೇಕಾಗುತ್ತದೆ.

ಇತ್ತೀಚೆ ರಾಜಕೀಯದಲ್ಲಿ ಬೇಗಬೇಗನೆ ಸ್ಥಿತ್ಯಂತರಗಳು ಆಗಲು ಶುರುವಾದ ಮೇಲೆ ಹೆಚ್ಚೆಚ್ಚು ಜನರು ಮಾಜಿಗಳಾಗುತ್ತಿದ್ದು, ಅವರು ನಿರ್ಭಯರಾಗಿ ಪದಾಲಂಕೃತರಿಗೆ

ಭಯೋತ್ಪಾದಕರಾಗುತ್ತಿದ್ದಾರೆ. ಯಾಕೆಂದರೆ ಪದಾಲಂಕೃತರಿಗಿರುವ ಕೆಳಗೆ ಬೀಳುತ್ತೇವೆ ಎಂಬ ಭಯ ಅವರಿಗಿರುವುದಿಲ್ಲ. ಅದಲ್ಲದಿದ್ದರೆ ಆಗಾಗ ವಿಜಯೋತ್ಸವದಂತೆ ಪರಾಜಯೋತ್ಸವವನ್ನಾದರೂ ಮಾಡಬೇಕಾಗುತ್ತದೆ. ಅಥವಾ ಮಕ್ಕಳು ದೇಶದಲ್ಲೇ ಇದ್ದರೆ ಅವರನ್ನು ತಯಾರುಮಾಡುವ ಕರ್ತವ್ಯನಿರತತೆ ಬಂದು ಮಾಜಿಗಳೇ ಆಗದಂತೆ ಮಾಡಬಹುದು. ಅದು ಬಿಟ್ಟು ಅಂತಹವರನ್ನೆಲ್ಲಾ ರಾಜ್ಯಪಾಲರನ್ನಾಗಿಸಿದರೆ ಪದೇ ಪದೇ ಜಾರ್ಖಂಡ್ ಕಾಂಡ ತಲೆ ಎತ್ತುವುದರಲ್ಲಿ ಸಂಶಯವಿಲ್ಲ.

ಅಂತೂ ರಾಜ್ಯಪಾಲರಿಗೂ ರಾಜ್ಯದಲ್ಲಿ ಪಾಲು ಉಂಟೆಂದು ಗೋವಾದಲ್ಲೂ ಜಾರ್ಖಂಡ್‌ನಲ್ಲೂ ಸಿದ್ಧವಾಯ್ತಲ್ಲವೇ? ರಾಜ್ಯಪಾಲರೂ ಸರಕಾರದ ಜೊತೆ ಮ್ಯೂಸಿಕಲ್ ಚಯರ್ ಆಡಬಹುದೆಂದು ತೋರಿಸಿದ ಹಾಗಾಯ್ತಲ್ಲವೇ?

ಅಂದ ಹಾಗೆ ಈ ಎಲ್ಲಾ ನಾಟಕ ನೋಡಿದರೆ ಕುತೋ ಮುಂಡ : ಎಂಬ ಐತಿಹಾಸಿಕ ಪ್ರಶ್ನೆ ಮುಂಡನಮಿಶ್ರ ಮಿಶ್ರಸರಕಾರಕ್ಕೆ ಸರಿಯಾಗಿ ಸಲ್ಲುತ್ತದಲ್ಲವೇ?

ಅಲ್ಲಾ ಈ ಮುಂಡ ಅವರಿಗೆ ಶಿಬುಚಕ್ರವರ್ತಿಗಳಕ್ಕಿಂತ ಮುಂಚೆನೇ ಕುರ್ಚಿಯಲ್ಲಿ ಹೋಗಿ ಕೂತಿದ್ದರೆ ಏನಾಗುತ್ತಿತ್ತು?

ಬಹುಶಃ ಈ ಮುಂಡ ಜನಾಂಗವೇ ಮಂದಗತಿದ್ದಿರಬೇಕು. ಆದ್ದರಿಂದಲೇ ನೋಡಿ ಇವರಿಗೆ ಕೋಮುವಾದದ ಕೋಲಿನಿಂದ ಸದಾ ಹೊಡೆಸಿಕೊಳ್ಳಲಿಕ್ಕೆ ಗೊತ್ತು ಹೊರತು ಅದಕ್ಕೆ ಪ್ರತಿಯಾಗಿ ರೋಮುವಾದದ ಪ್ರಬಂಧವನ್ನು ಎಂದಾದರೂ ಮಂಡಿಸಿದ್ದಾರಾ ನೋಡಿ. ಇವರಿಗೆ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಅಂತಾರಾಷ್ಟ್ರೀಯ ವಿವಾಹರಾದವರ ನಾಮಕರಣ ಮಾಡುವುದಕ್ಕೆ ಸುಮ್ಮನೆ ಕಿರಿಕ್ ಮಾಡುವುದಕ್ಕೆ ಗೊತ್ತು ಅದು ಬಿಟ್ಟು ಅವರ ಸ್ಮರಣಾರ್ಥ ಅವರೇ ಬದುಕಿದ್ದಾಗ ತಮ್ಮ ಅಮೃತ ಹಸ್ತದಿಂದ ಶಿಲಾನ್ಯಾಸ ಮಾಡಿದ ಅಯೋಧ್ಯಾ ರಾಮಮಂದಿರವನ್ನು ತಮ್ಮ ಇಟಲಿ ಮಾರ್ಬಲ್‌ನಲ್ಲಿ ಕಟ್ಟಿಸಿಕೊಡಲು ಆ ಮಹಾತಾಯಿಯಲ್ಲಿ ಪ್ರಾರ್ಥಿಸಬಹುದಲ್ವಾ?

ಅಂತೂ ಈ ಮುಂಡ ಪಾರ್ಟಿಯವರು ದಿಲ್ಲಿಗೆ ಹೋಗಿ ಆ ಮದರಮ್ಮನ ಮುಂದೆ ಆ ಪಾಸ್ವಾನ್ ಫೈಲ್ವಾನರು ರಾಜ್ಯಪಾಲರಿಗೆ ಯೂಪಿಪಿ, ಐಪಿಯೇ ಎಂದು ದುಂಡಾವರ್ತನೆ ನಡೆಸುವುದನ್ನು ನೋಡಿಬರುವಷ್ಟರಲ್ಲಿ ಪಟ್ಟಾಭಿಷೇಕದ ಮುಹೂರ್ತ ಮುಗಿದು ಹೋಗಿತ್ತೋ ಏನೋ?

ಅಂತೂ ಬಾಲಕೃಷ್ಣ ಕಿರುಬೆರಳಲ್ಲಿ ಗೋವರ್ಧನಗಿರಿಯನ್ನು ಎತ್ತಿದಂತೆ ಅದ್ಯಾವನೋ ಚಾಮುಂಡನಂತೆ ಮುಂಡ ಅವರ ಮುಂಡಾಸನ್ನು ಸದ್ಯಕ್ಕೆ ಎತ್ತಿ ಹಿಡಿದಿದ್ದಾನೆ ಕಾಣುತ್ತೆ. ಅದ್ಯಾವಾಗ ಬೀಳಿಸುತ್ತಾನೋ ಆ ರಾಜ್ಯಪಾಲರಿಗೇ ಗೊತ್ತು.

ಅಂತೂ ಇಂತೂ ಬಹುಮತ ಬರದಿದ್ದರೇನಂತೆ ರಾಜ್ಯಪಾಲರು ನಮ್ಮ ಪಾಲಾಗಿದ್ದರೆ ಸಾಕು ಎಂಬ ಪತ್ರಿಕೆಯೊಂದರ ವ್ಯಂಗ್ಯೋಕ್ತಿ ಅದೆಷ್ಟು ಮಾರ್ಮಿಕವಲ್ಲವೇ? ಸಮಯೋಚಿತವಲ್ಲವೇ?

ಅಂತೂ ಪ್ರಜಾಪ್ರಭುತ್ವದ ನೂತನ ಮೌಲ್ಯವನ್ನು ಸಂಸ್ಥಾಪಿಸಿದ ರಜಿ ರಾಜ್ಯಪಾಲರೂ ಶಿಬುಚಕ್ರವರ್ತಿಗಳೂ ಇತಿಹಾಸದಲ್ಲಿ ಏಕೈಕರಾಗಲೆಂದು ಏಕಕಂಠದಿಂದ ಹಾರೈಸೋಣವೇ?

**- ಸುಶ್ರೀ**

ಶ್ರೀಮದನುವ್ಯಾಖ್ಯಾನ ಅನುಸಂಧಾನಪೂರ್ವಕ

# ಶ್ರೀ ಸುಧಾಸುವಚನ

ಶ್ರೀ ಶ್ರೀ ಸುಗುಣೇಂದ್ರತೀರ್ಥ ಶ್ರೀಪಾದರು

ಲೇಖಾಂಕ -37 ಮೊಕ್ಕಾಂ: ಶ್ರೀಕೃಷ್ಣ ಬೃಂದಾವನ, ನ್ಯೂಜೆರ್ಸಿ ಅಮೇರಿಕ

ಇದೀಗ ಜಯಾರ್ಯರು ಯದ್ವಾ ಎಂದು ಆಚಾರ್ಯರ ಮಂಗಳ ಶ್ಲೋಕವನ್ನು ಇನ್ನೊಂದು ದೃಷ್ಟಿಕೋನದಿಂದ ನೋಡಹತ್ತಿದ್ದಾರೆ. ಇದೀಗ ಈ ಶ್ಲೋಕ ನಾರಾಯಣನ ಲಕ್ಷಣಕೀರ್ತನ ಮಾಡಲಿಕ್ಕೆ ಬಂದಂತೆ ಕಾಣುತ್ತಿದೆ.

ಹಿಂದಿನಾರ್ಥಕ್ಕಿಂತಲೂ ಇದು ಬೆಟರೂಂತ ಸೂಚಿಸಲು ಇಲ್ಲಿ ಯದ್‌ವಾ ಎಂದಿದ್ದಾರೆ ಅನ್ನಬಹುದು. ಯಾಕೆಂದರೆ ಹಿಂದಿನಾರ್ಥವಿವರಣೆ ಮಾಡುವಾಗ ಒಂದು ಅಸ್ವಾರಸ್ಯಕ್ಕೆ ಅವಕಾಶ ಇರುತ್ತಿತ್ತು. ಅಲ್ಲ ನೀವು ಎಷ್ಟೆಲ್ಲ ನಾರಾಯಣ ನಮ್ಮ ಎಂದು ಬಹಳವಾಗಿ ಉಪಪಾದನೆ ಮಾಡುತ್ತೀರಲ್ವಾ ಆ ನಾರಾಯಣ ಯಾರು? ನಮ್ಮೂರಿನವನಾ? ಬೇರೆ ಊರಿನವನಾ? ಅವನ ಸ್ವರೂಪ ಏನು? ಎಂಬುದನ್ನೇ ಹೇಳದೆ ವಿಳಾಸವನ್ನೂ ತಿಳಿಸದೆ ನೀವು ಅವನಿಗೆ ಪರಮುನಮ್ಯತ್ವ ಉಪಪಾದಿಸುತ್ತಿದ್ದೀರಲ್ವಾ? ಏನು ಕಥೆ? ಅಂತ ಯಾರಾದರೂ ಕೇಳಿದರೆ ಹೌದಲ್ವಾ ನಾನು ನಾರಾಯಣ ಯಾರೂಂತ ಹೇಳದೆ ಸುಮ್ಮನೆ ನಮ್ಯತ್ವವನ್ನು ಪ್ರತಿಪಾದಿಸಿದೆನಲ್ಲಾ! ಸರಿ ಸರಿ ಹಾಗಿದ್ದರೆ ನಾರಾಯಣ ಯಾರೂಂತ ಮೊದಲು ಹೇಳಿಬಿಡುತ್ತೇನೆ ಅಂತ ಸಮಜಾಯಿಸಿಕೆ ಹೇಳಬೇಕಾಗುತ್ತಿತ್ತು. ಅದಕ್ಕೋಸ್ಕರ ಮೊದಲೇ ಜಯಾರ್ಯರು ಅದಕ್ಕೆ ಅವಕಾಶ ಬಾರದಿರಲೀಂತ ತಾನೇ ಯದ್ವಾ ಎಂದು ಶುರು ಮಾಡಿದ್ದಿರಬೇಕೆಂದು ಕಾಣುತ್ತದೆ. ಯದ್ ಹಿಂದೆ ಹೇಳಿದ್ದೇನಿದೆ ನಮ್ಯತ್ವೋಪಪಾದಕವಿಶಿಷ್ಟಾತ್ವಾದಿಗಳು, ಅದು ವಾ ನಂತರದ್ದು ಅಥವಾ ಯದ್ ಮುಂದೆ ಹೇಳುವುದೇನಿದೆ ಲಕ್ಷಣ ಕಥನಗಳು ಅದು ವಾ ಮುಂದಿನದ್ದು ಎಂದರ್ಥ. ವಾ ಎಂದರೆ ಅಲ್ಲ ಎಂದಲ್ಲ. ಮೊದಲು ನಂತರವಲ್ಲ ಎಂದಷ್ಟೇ ಅರ್ಥ.

ಇಲ್ಲಿ ಜಯಾರ್ಯರು ನಾನಿರ್ಧಾರಿತ ಸ್ವರೂಪಸ್ಯ ಪ್ರಣಾಮಃ ಯುಕ್ತಃ ಎಂದಿದ್ದಾರೆ. ಇಲ್ಲಿ ನಾನಿರ್ಧಾರಿತ ಸ್ವರೂಪಂ ಪ್ರತಿ ಪ್ರಣಾಮಃ ಯುಕ್ತಃ ಎನ್ನಬೇಕಿತ್ತು ಅನ್ನಿಸಬಹುದು. ಆದರೆ ಹಾಗೆ ಹೇಳುವಾಗ ನಾವು ನಮಸ್ಕಾರ ಮಾಡಬೇಕಾದರೆ ನಾರಾಯಣನೇ ತನ್ನ ಸ್ವರೂಪವನ್ನು ತಾನು ತಿಳಿದುಕೊಂಡಿರ್ಬೇಕು ಎಂಬರ್ಥ ಸೂಸುವ ಸಂಭವವಿದೆ. ಅದಕ್ಕೋಸ್ಕರ ಪ್ರಣಾಮ ಮಾಡುವವನಿಗೆ ಅದು ಯುಕ್ತವಲ್ಲ ಎಂದು ಸೂಚಿಸಲು ಸ್ವರೂಪಸ್ಯ ಎಂದಿರಬೇಕು. ಇಲ್ಲಿ ಸ್ವರೂಪಾದಿ ನಿರ್ಧಾರ ಮಾಡದೆ ಪ್ರಣಾಮ ಮಾಡಬಾರದೂಂತ ನೇರ ಹೇಳದೆ ಯುಕ್ತವಲ್ಲ ಎಂದಷ್ಟೇ ಹೇಳಿದ ಉದ್ದೇಶವೇನೆಂದರೆ ಹಾಗಿದ್ದರೆ ಶಿಶುಗಳು, ಬಾಲಕರು ಭಗವಂತನ ಪ್ರಣಾಮ ಮಾಡಬಾರದಾ? ಎಂದು ಕೇಳಬಹುದು. ಅದಕ್ಕೋಸ್ಕರ ಯುಕ್ತಃ ಎಂದಿಷ್ಟೇ ಹೇಳಿದ್ದು. ಹಾಗಂತ ಶಿಶು ಪ್ರಣಾಮವು ಆಯುಕ್ತವೆಂದೂ ಅರ್ಥವಲ್ಲ ಎಂದೂ ತಿಳಿದುಕೊಳ್ಳಬೇಕು.

ಯದ್ವಾ - ಅನಿರ್ಧಾರಿತ ಸ್ವರೂಪಸ್ಯ ಎಂದರೆ ಪ್ರಣಾಮಮಾಡುವವನಿಗೆ ತನ್ನ ಸ್ವರೂಪ ನಿರ್ಧಾರ ಆಗಿರಬೇಕೂಂತ ಅಭಿಪ್ರಾಯವಾಗಬಹುದು. ತಾನು ಸರ್ವಗುಣಸಂಪನ್ನನಲ್ಲ, ಸರ್ವಜ್ಞನಲ್ಲ ಎಂದು ಸ್ವರೂಪನಿರ್ಧಾರವಾಗದಿದ್ದರೆ ಅಥವಾ ತಾನೇ ಸರ್ವಜ್ಞ ಎಂದು ಅಹಂಕಾರಿಯಾದವನ ಪ್ರಣಾಮ ಯುಕ್ತವಲ್ಲವೆಂಬರ್ಥವೂ ಇಲ್ಲಿ ಯುಕ್ತವಾಗಬಹುದು. ಆದಾಗ ಸ್ವರೂಪ ಎಂಬ ಪದಕ್ಕೆ ಹೆಚ್ಚು ಒತ್ತು ಬಿದ್ದ ಹಾಗಾಗುತ್ತದೆ. ಅಥವಾ ಬಾಹ್ಯರೂಪ ನಿರ್ಧಾರವಾಗಿದ್ದರೂ ನಮ್ಯನ ಸ್ವರೂಪನಿರ್ಧಾರವಾಗಬೇಕು ಎಂದರ್ಥ.

ಇಲ್ಲಿ ಅನಿರ್ಧಾರಿತ ಸ್ವರೂಪಸ್ಯ ಅಂದರೆ ಇತರವ್ಯಾವೃತ್ತತ್ವೇನ ಅನಿಶ್ಚಿತ ಸ್ವರೂಪಸ್ಯ ಎಂದರ್ಥ. ನ ಚ ಅಂತರೇಣ ಲಕ್ಷಣಂ ಅಂದರೆ ಲಕ್ಷಣಜ್ಞಾನಂ ವಿನಾ ಶಿಷ್ಯಾಣಾಂ ಎಂದು ಅಧ್ಯಾಹಾರ ಮಾಡಬೇಕು. ವಿಭವಾತ್ ಅಂದರೆ ವಿಭವಂ ಅಪೇಕ್ಷ್ಯ ಎಂದು ಲ್ಯಬ್ ಲೋಪನಿಮಿತ್ತ ಪಂಚಮೀ. ಅಂದರೆ ಐಶ್ವರ್ಯಾತಿಶಯ ಜ್ಞಾಪನಮ್ ಅಪೇಕ್ಷ್ಯ ಎಂದರ್ಥ. ಅದು ಯಾಕೆ ಐಶ್ವರ್ಯಾತಿಶಯ ಜ್ಞಾಪನವೆಂದರೆ ಆದರಾತಿಶಯ ಉತ್‌ಪತ್ತಿಗಾಗಿ ಎಂದು ತಿಳಿಯಬೇಕು. ಯಾಕೆಂದರೆ ಆದರವು ಆಂತರಬಾಹ್ಯ ಐಶ್ವರ್ಯಾನುಗುಣತಾನೇ?

ಇಲ್ಲಿ ನಿಖಿಲಪೂರ್ಣಗುಣೈಕದೇಹತ್ವವನ್ನು ಒಂದೇ ಲಕ್ಷಣ ಅಂತ ಹೇಳಿದರೆ ವೈಭವಕಡಿಮೆ ಮಾಡಿದಂತಾಗುತ್ತದೆ. ಮಾತ್ರವಲ್ಲ, ವಿಶೇಷತಾಗಳಲ್ಲಿ ವೈಯ್ಯರ್ಥ್ಯವೂ ಕಾಣಿಸಿಕೊಳ್ಳಬಹುದಾಗುತ್ತದೆ. ಅದಕ್ಕೋಸ್ಕರ ವೈಭವದಲ್ಲಾದರೆ ವೈಯರ್ಥ್ಯವಿಲ್ಲವಾದ್ದರಿಂದ ವಿಭವಾತ್ ಎಂದಿದ್ದಿರಬೇಕೆಂದನಿಸುತ್ತದೆ. ವೈಯ್ಯರ್ಥ್ಯವಿಲ್ಲದಿದ್ದರೆ ಅದು ವೈಭವವೂ ಆಗುವುದಿಲ್ಲವಾದ್ದರಿಂದಲೂ.

ಒಂದು ಬಗೆ ಹುಳಿ ಒಂದು ಬಗೆ ಖಾರ ಮಾಡುವ ಸ್ಥಳದಲ್ಲಿ ಹತ್ತು ಬಗೆ ಹುಳಿ ಹತ್ತು ಬಗೆ ಖಾರ ಮಾಡಿದರೆ ತಾನೇ ವೈಭವ ಅನ್ನುವುದು? ಒಂದು ಲಡ್ಡು ಹಾಕುವ ಸ್ಥಳದಲ್ಲಿ ಮೂರು ಮೂರು ಹಾಕಿದರೆ ತಾನೇ ಅದು ವೈಭವವಾಗುವುದು? ಅದರಿಂದ ವೈಭವ ಯಾವಾಗಲೂ ಅನೇಕಗಳಾಗಿರಬೇಕು.

ವಿಶೇಷೇಣ ಭವಃ ವಿಭವಃ. ವಿಶೇಷ ಅಂದರೆ ವಿಗತಶೇಷ ಯಾವುದನ್ನೂ

ಬಿಡಲಿಲ್ಲ ಎಂದರ್ಥ. ಎಲ್ಲ ಬಗೆಯದ್ದೂ ಎಂದು. ಒಂದು ಕಾರು ಸಾಕಿದ್ದರೂ ಎಲ್ಲಾ ಬಗೆಯ ಕಾರುಗಳನ್ನು ಮನೆಯ ಎದುರು ನಿಲ್ಲಿಸಿದರೆ ತಾನೇ ವಿಭವ? ಆ ವಿಭವವೇ ಢಂ ಢಂ ಆಗುವ ತನಕ ಬಂದರೆ ಆಡಂಬರ ಎಂದರ್ಥ.

ಸಾಮಾನ್ಯವಾಗಿ ಜನರಿಗೆ ವಿಭವವಿಲ್ಲದೇ ಹೋದರೆ ಮಹತ್ತ್ವಬುದ್ಧಿಯೇ ಬರುವುದಿಲ್ಲವಾದ್ದರಿಂದ ವಿಭವ ಅವಶ್ಯಬೇಕಾದ್ದರಿಂದ ಜಯತೀರ್ಥಾರ್ಯರು ವಿಭವಾದನೇಕಾನಿ ಲಕ್ಷಣಾನಿ ಎಂದಿದ್ದಾರೆ.

ಇಲ್ಲಿ ಮೊದಲನೆಯದಾಗಿ ನಿಖಿಲಗುಣತ್ವವನ್ನೇನು ಲಕ್ಷಣವಾಗಿ ಹೇಳುತ್ತಿದ್ದಾರೆ ಅದು ಪರಮಾತ್ಮನಲ್ಲಿ ಅಸಂಭವಿ. ಜಡ ಜೀವರುಗಳ ನಿಖಿಲಗುಣಗಳು ಪರಮಾತ್ಮನಲ್ಲಿ ಎಂತು? ಎಂದು ಪ್ರಶ್ನೆ ಉದ್‌ಭವಿಸಬಹುದು.

ಉತ್ತರ - ಸ್ವರೂಪತಃ ಗುಣವೃತ್ತಿಜಾತ್ಯವಚ್ಛಿನ್ನ ಅಭಾವಾಧಿಕರಣತ್ವಂ ನಿಖಿಲಗುಣತ್ವಂ ಎಂದು ಪರಿಷ್ಕರಿಸಬೇಕು ಎಂದು. ಈಶ್ವರೇ ಸುಖಂ ನಾಸ್ತಿ ಎಂದು ಹೇಳಲಿಕ್ಕೆ ಬಂದರೆ ಆವಾಗ ಸುಖವೃತ್ತಿಜಾತ್ಯವಚ್ಛಿನ್ನ ಅಭಾವಾಧಿಕರಣತ್ವವು ಈಶ್ವರನಲ್ಲಿ ಬರುತ್ತಿತ್ತು. ಹಾಗೆ ಹೇಳಲಿಕ್ಕಾಗುವುದಿಲ್ಲ. ಈಶ್ವರೇ ಜೀವೀಯ ಸುಖಂ ನಾಸ್ತಿ ಎಂದು ಹೇಳಬೇಕು. ಆವಾಗ ಗುಣವೃತ್ತಿಜಾತಿನಿತ್ವಾವಚ್ಛೇದಕತಾ ಜೀವೀಯತ್ವಾವಚ್ಛಿನ್ನವಾಯಿತು. ನಿರವಚ್ಛಿನ್ನ ಆಗಲಿಲ್ಲ. ಲಕ್ಷಣದಲ್ಲಿರುವ ಸ್ವರೂಪತಃ ಎಂಬುದಕ್ಕೆ ನಿರವಚ್ಛಿನ್ನ ಎಂದರ್ಥ. ಅವಚ್ಛೇದಕತೆಯು ನಿರವಚ್ಛಿನ್ನವಾಗಬೇಕಾದರೆ ಈಶ್ವರೇ ಸುಖಂ ನಾಸ್ತಿ ಎಂಬ ನಿರವಚ್ಛಿನ್ನಗುಣವೃತ್ತಿಜಾತಿನಿಷ್ಠ ಅವಚ್ಛೇದಕತಾಕಪ್ರತಿಯೋಗಿತಾಕ ಅಭಾವವು ಈಶ್ವರನಲ್ಲಿ ಇಲ್ಲವಾದ್ದರಿಂದ ತಾದೃಶ ಅಭಾವಅನಧಿಕರಣತ್ವರೂಪಲಕ್ಷಣವು ಪರಮಾತ್ಮನಲ್ಲಿ ಬಂತು. ಸ್ವರೂಪತಃ ನಿಖಿಲಗುಣತ್ವ ಬಂತು. ಲಕ್ಷಣ ಬಂತು.

ಇದರಂತೆನೇ ಮುಂದೆ ಪೂರ್ಣಗುಣತ್ವಂ ಸ್ವತಃ ಗುಣೈಕದೇಹತ್ತ್ವಂ ಲಕ್ಷಣವನ್ನೂ ನಿಷ್ಕೃಷ್ಟಗೊಳಿಸಬೇಕಾಗುತ್ತದೆ. ಪರಿಷ್ಕಾರಗೊಳಿಸಬೇಕಾಗುತ್ತದೆ.

ಅದು ಹೇಗೆಂದು ಮುಂದೆ ನೋಡೋಣ

(ಸಶೇಷ)

**ಸಾದರ ಸ್ವೀಕಾರ**

## ಋಷಿಚ್ಛಂದೋ ದೇವತಾ ನಿರ್ಣಯ

**ಲೇಖಕರು : ಕೆ. ವಿ. ಗೋಪಾಲ ಭಟ್** **ಬೆಲೆ ರೂ. 15-00**

**ಪ್ರಕಾಶನ :** ರತ್ನಾವತೀ ಪ್ರಕಾಶನ, ಜ್ಯೋತಿರ್ಮಂದಿರಂ,
ಕಲ್ಯ - ಕಾಪು ಅಂಚೆ - 574 106, ಉಡುಪಿ ಜಿಲ್ಲೆ.



# ಮನುಜಜನುಮ

ಮಾನವಜನ್ಮ ದೊಡ್ಡದು ಅದ ಹಾಳಮಾಡಬೇಡಿ ಹುಚ್ಚಪ್ಪಗಳಿರಾ? ಎಂದು ದಾಸರು ಸಂಕಟಪಟ್ಟದ್ದುಂಟು.

ಆದರೆ ನಮಗೆಂದೂ ದಾಸರಂತೆ ಮನುಜಜನುಮ ದೊಡ್ಡದ್ದಾಗಿ ಕಂಡದ್ದುಂಟಾ? ಇಲ್ಲ.

ಕಾರಣ ನಾವು ನಮ್ಮ ಜೀವನವನ್ನು ಜೀವನಸಮಯವನ್ನು ಗುರುತಿಸಿಕೊಂಡ, ಗ್ರಹಿಸಿಕೊಂಡ ಪರಿ.

ಜೀವನ ಎಂದರೆ ಬರೇ ಹುಟ್ಟು ಸಾವುಗಳ ಮಧ್ಯದ ಸುಖಮಯಸಮಯ ಎಂಬ ಕಲ್ಪನೆ ಇಟ್ಟು ಕೊಂಡಾಗ ಮನುಜಜನುಮ ದೊಡ್ಡದಾಗಿ ಕಾಣದು. ಚಿಕ್ಕದಾಗಿ ಕಾಣುತ್ತದೆ. ಹೊರತು ಅದಕ್ಕಿಂತಲೂ ಹಿಂದೆಯೂ ಅತೀತವಾಗಿಯೂ ಅನಾಗತವಾಗಿಯೂ ಜೀವನವೊಂದಿದೆ, ಜೀವನ ಅನಂತ ಎಂಬ ವಾಸ್ತವಕ್ಕೆ ಬಂದಾಗ ಆ ನೆಲೆಯಲ್ಲಿ ದೃಷ್ಟಿನೆಟ್ಟಾಗ ಮಾತ್ರ ಈ ಮನುಜಜನುಮ ಸಾಧನಾಪಥದಲ್ಲಿ ನಿಜವಾಗಿಯೂ ದೊಡ್ಡದಾಗಿ ಕಾಣಬರುತ್ತದೆ. ದೊಡ್ಡ ಮೈಲಿಗಲ್ಲಾಗಿ ಕಾಣುತ್ತದೆ.

ಜೀವನವೆಂದರೆ ಏ ಪಿರೇಡ್ ಆಫ್ ಎಂಜಾಯ್‌ಮೆಂಟ್ ಎಂಬ ಅರ್ಥ ಇಟ್ಟುಕೊಂಡಾಗ ಮಾನವ ಜನ್ಮ ಕೊನೆಗೂ ಚಿಕ್ಕದಾಗಿಯೇ ಕಾಣುವುದು.



ಅದಕ್ಕೋಸ್ಕರವೇ ಏನೋ ಸಮಸ್ತ ಪ್ರಾಣಿಸಂಕುಲಗಳಲ್ಲಿ ನಗಾಡುವ ಪ್ರಾಣಿ ಮನುಷ್ಯ ಮಾತ್ರ ಆಗಿದ್ದು ಕಾಣುತ್ತೆ. ಅದು ಬಿಟ್ಟು ಇದೊಂದು ಸಾಧನಾವಕಾಶ, ಆತ್ಮೋದ್ಧಾರದ ಅವಕಾಶ. ಜೀವನದ ಪ್ರತಿಯೊಂದು ಕ್ಷಣಗಳೂ ತಿರುಗಿ ಬರಲಾರದ ಅಮೂಲ್ಯ ರತ್ನಗಳು ಎಂಬ ದೃಷ್ಟಿಯಲ್ಲಿ ನೋಡಿದಾಗ ನಿಜವಾಗಿಯೂ ದೊಡ್ಡದಲ್ಲವೇ?

ಈ ಸಮಗ್ರ ಭೂಮಿ ಇದು ಕರ್ಮ ಭೂಮಿ ಸ್ವರ್ಗ ನರಕಗಳು ಸುಖದುಃಖಗಳ ಭೋಗಭೂಮಿಗಳು ಎಂಬ ಮನೋಭೂಮಿಕೆಯ ಹಿನ್ನೆಲೆಯಲ್ಲಿ ನೋಡಿದಾಗ ಈ ಭೂಮಿಯಲ್ಲಿ ಮನುಜಜನುಮ ನಿಜವಾಗಿಯೂ ಭೂಮವಾಗಿ ಕಾಣುತ್ತದೆ.

ವಸ್ತುವಿನಲ್ಲಿರುವ ನಿಜವಾದ ದೊಡ್ಡತನ ಚಿಕ್ಕತನ ಗೋಚರವಾಗುವುದು ಈ ರೀತಿ ಒಳಗಣ್ಣಿನಿಂದ ನೋಡಿದಾಗ ಮಾತ್ರ.

ಹೊರಗಣ್ಣಿನಿಂದ ದಡ್ಡತನ ತೆರೆದಾಗ ಮನುಜಜನುಮ ಚಿಕ್ಕದಾಗಿ ಕಾಣುತ್ತದೆ. ಒಳಗಿನ ದೊಡ್ಡಕಣ್ಣಿನಿಂದ ನೋಡಿದಾಗ ಮನುಜಜನುಮ ಅಸೀಮವಾಗಿ ಕಾಣುತ್ತದೆ. ಅದಕ್ಕೋಸ್ಕರ ಗುಡ್ಡದ ಮೇಲೇರಿ ಕಣ್ಣು ಹಾಯಿಸಬೇಕು. ಎತ್ತರದ ದೃಷ್ಟಿಯಿಂದ ನೋಡಬೇಕು. ಪ್ರತಿಯೊಬ್ಬನೂ ಮಾಡಬೇಕಾದ್ದು ಒಳಗಿನ ದೃಷ್ಟಿಯ ತುಷ್ಟಿಪುಷ್ಟಿ.

ಆದಾಗಲೇ ಈ ಮನುಜನುಮ ಮಹಾನಾಗಿ ಮನದಟ್ಟಾಗುತ್ತದೆ.

**ಇತ್ತೀಚೆ ಅಮೇರಿಕಾದ ಅರಿಜೋನಾದ ಚಾಂಡ್ಲರ್‌ನಲ್ಲಿ ದಾಸ ಸಂದೇಶ ಸಂವಹನ ಕಾರ್ಯಕ್ರಮದಲ್ಲಿ**

**ಶ್ರೀ ಶ್ರೀ ಸುಗುಣೇಂದ್ರತೀರ್ಥ ಶ್ರೀಪಾದರು**

**ನೀಡಿದ ಉಪನ್ಯಾಸದ ಸಾರ.**



# ಮಧ್ವರು - ಮಾಧ್ವರು

ಎ. ಬಿ. ಕುಂಜಾರ್, ಬೆಂಗಳೂರು

ವಿಶಿಷ್ಟವಾದ ವೈದಿಕ ಪದಗಳಲ್ಲಿ 'ಮಧ್ವ' ನಾಮವೂ ಒಂದು. ಶ್ರೀಮದಾನಂದ ತೀರ್ಥರು ಈ ಅಪೌರುಷೇಯ ಪದವನ್ನು ಗುರುತಿಸಿ ಮೆಚ್ಚಿಕೊಂಡಿದ್ದರು. ತನ್ನ ಕಾವ್ಯನಾಮವನ್ನಾಗಿ ಇಟ್ಟುಕೊಂಡಿದ್ದರು. ಮುಂದೆ ಈ ಕಾವ್ಯನಾಮದಿಂದಲೇ ಅವರನ್ನು ಗುರುತಿಸುವ ರೂಢಿಯನ್ನೂ ಜನ ಮಾಡಿಕೊಂಡರು.

ವಿನೀತಭಾವದ ಅಭಿವ್ಯಕ್ತಿ ಮಧ್ವನಾಮದ ಶಕ್ತಿ. ಶ್ರೀ ಆನಂದ ತೀರ್ಥರಿಗೆ ಅನ್ವರ್ಥಕವಾದ ವ್ಯುತ್ಪತ್ತಿಯೂ ಅದಕ್ಕಿದೆ. ಆಚಾರ್ಯರ ಸಿದ್ಧಾಂತ - ಸಾರವೂ ಅದರೊಳು ಹುದುಗಿದೆ.

ಮತ್ + ಅ = ಮಧ್ವ; ಇದು ಮಧ್ವನಾಮದ ನಿಷ್ಪತ್ತಿ. 'ಅ' ಎನ್ನುವುದು ಒಂದು ಏಕಾಕ್ಷರ ಪದ. ವೈದಿಕ ವಾಙ್ಮಯದಲ್ಲಿ ಬಹ್ವರ್ಥಗಳಲ್ಲಿ ತೆರೆದುಕೊಳ್ಳುವ ಪದ ಇದು. ಈ ಪದದ ಭಾವಾರ್ಥವನ್ನು ಹೀಗೆ ಹೇಳಬಹುದು.

ನನಗಿಂತ (ಮತ್) ಅವನು (ಬ್ರಹ್ಮ) ಅ (ಅನ್ಯಾ) ಆಗಿದ್ದಾನೆ. ಅವನೇ ನಾನಲ್ಲ. ನಾನು ತಿಳಿದಿರುವ ಯಾವುದೂ ಅವನಲ್ಲ. ಅವನ ಮುಂದೆ ನನಗಿಂತ ಅ (-ವರ) ಅಂದರೆ ಕನಿಷ್ಠನು ಇನ್ನೊಬ್ಬನಿಲ್ಲ.

ಹೀಗೆ ಮಧ್ವನಾಮದಲ್ಲಿ ದ್ವೈತಭಾವ ತುಂಬಿದೆ. ವಿನೀತಭಾವವೂ ಜೊತೆಗಿದೆ. ಭಗವಂತನ ಮುಂದೆ ವಿನೀತರಾದವರಲ್ಲಿ ಮಧ್ವರದು ಮೇರು ವ್ಯಕ್ತಿತ್ವ - ಅತಿಮಾನುಷ ಚೇತನ. ಮಧ್ವಭಾವದ ಅನುಯಾಯಿಗಳಾದ ಅವರೊಬ್ಬ ಶ್ರೇಷ್ಠ ಮಾಧ್ವ ಈಶ ದಾಸ ಪ್ರಜ್ಞೆ ಮೆರೆದ ಪೂರ್ಣಪ್ರಜ್ಞ.

ಮಧ್ವರನ್ನು ಆಚಾರ್ಯರೆಂದು, ಗುರುಗಳೆಂದು ಹೇಳಿಕೊಳ್ಳುವ ಮಂದಿಗೇನೂ ಕೊರತೆ ಇಲ್ಲ. ಮಾಧ್ವ(ಪ್ರ)ದರ್ಶನವನ್ನು ಕಾಪಿ(ಪಾ)ಡುವುದೇ ತಮ್ಮ ಧ್ಯೇಯವಾಗಿಸಿಕೊಂಡವರು ಇವರು. ರೂಢಿಯಲ್ಲಿ ಇವರೂ ಮಾಧ್ವರು; ಆಚಾರ್ಯರ ಅನುಯಾಯಿಗಳು.

ರೂಢಿಯ ಮಾಧ್ವರು ಅಪಾತತಃ ಮಾಧ್ವರು; ಮಾಧ್ವರೆಂದು ಹೇಳಿಕೊಂಡವರ ಯೋನಿಜರು. ಮಧ್ವದರ್ಶನವನ್ನು ಗ್ರಹಿಸಿ ಮಾಧ್ವರಾದವರಲ್ಲ; ಆಚಾರ್ಯರೊಂದಿಗೆ ಭಾವನಾತ್ಮಕ ನಂಟು ಮಾತ್ರ ಇಟ್ಟುಕೊಂಡವರು ಇವರು. ಮಧ್ವದರ್ಶನವನ್ನು ಯತ್ಕಿಂಚಿತ್ ತಿಳಿದುಕೊಳ್ಳುವ ಆಸಕ್ತಿ ಇವರಲ್ಲನೇಕರಿಗೆ ಇರುವುದಿಲ್ಲ. ಅಪ್ರಿಯವಾದ ವಾಸ್ತವವಿದು.

ಎಲ್ಲ ಧರ್ಮ ಅಥವಾ ಪಂಥಗಳಂತೆ ಮಾಧ್ವರಲ್ಲಿ ಅಂಧಾನುಯಾಯಿಗಳ ಗುಂಪೇ

126/A, 1ನೇ ಮಹಡಿ, 1ನೇ ಕ್ರಾಸ್, ಕಾಳಪ್ಪ ಬ್ಲಾಕ್, ಶ್ರೀನಗರ, ಬೆಂಗಳೂರು – 560 050. ದೂ. 26601259



'ಮೆಜಾರಿಟಿ'. ಮಾಧ್ವ ಪ್ರದರ್ಶನವನ್ನೇ ಮಧ್ವದರ್ಶನ ಎಂದು ಬಿಂಬಿಸುವ ಮಂದಿ ಇವರು. ಅಧ್ಯಾತ್ಮ ಅಥವಾ ವಾಸ್ತವ ಇವರಿಗೆ ಮುಖ್ಯವಲ್ಲ - ಪರಂಪರೆ, ಸಂಪ್ರದಾಯ, ಪದ್ಧತಿ, ಅಭ್ಯಾಸ, ವೇಷ ಭೂಷಣ, ಮಡಿ, ಮತೀಯ ಚಿಹ್ನೆಗಳೇ ಅತಿಮುಖ್ಯ. ಈ ವಿಚಾರಗಳಲ್ಲಿ ತುಸು ರಾಜಿ ಮಾಡಿಕೊಳ್ಳುವುದೆಂದರೆ ಪಾಪಕರ್ಮ ನೆರವೇರಿಸಿದಂತೆ ಎಂದು ತಿಳಿಯುವ ಜನ ಇರುವರು.

ಲೌಕಿಕವಾದ ಎಲ್ಲ ಬೇಕು ಬೇಡಗಳನ್ನು ಮರೆಯಲ್ಲೇ ಅನುಭವಿಸಿ ಮೆರೆಯುವ ಅನೇಕ ಮಾಧ್ವರಿರುವರು. ಪರಂಪರೆ ಸಂಪ್ರದಾಯಗಳ ಕುರಿತಂತೆ ಇವರೂ 'ಕಟ್ಟರ್‌ವಾದಿ' ಗಳಾಗುವುದು ಒಂದು ವಿಪರ್ಯಾಸ.

ಆಚಾರ್ಯ ಮಧ್ವರು ಮೂಢ ನಂಬಿಕೆಗಳ ವಿರುದ್ಧ ಸೆಟೆದು ನಿಂತವರು. ಆದರೆ ಅವರ ಹೆಸರಿನಲ್ಲಿ ಮೂಢನಂಬಿಕೆಗಳನ್ನೇ ತಮ್ಮ ಬದುಕಿನ ಉಸಿರಾಗಿ ಇರಿಸಿಕೊಳ್ಳುವವರೂ ಇರುವರು. ಹೀಗೆ ಸಕಾಲಿಕ ಬದಲಾವಣೆಗಳನ್ನೂ ಅಲ್ಲಗಳೆದರೆ ಮಧ್ವರ ಆಧ್ಯಾತ್ಮಿಕ ನಿಲುವು, ಸಾಮಾಜಿಕ ಕಳಕಳಿ ಕಳೆದುಹೋಗುವುದು ನಿಶ್ಚಯ.

ಮಧ್ವರನ್ನು ವಸ್ತುನಿಷ್ಠವಾಗಿ ತಿಳಿಯಲು ಪ್ರಯತ್ನಿಸಿದ ವಿಧ್ವಾಂಸರ ಅಭಿಪ್ರಾಯ ಒಂದಿದೆ. ತನ್ನ ಸಿದ್ಧಾಂತ ಸಮರ್ಥನೆ ಮತ್ತು ಪೂರ್ವ ಸಿದ್ಧಾಂತ ಖಂಡನೆಯ ಸಂದರ್ಭದಲ್ಲಿ ಮಧ್ವರು ಪೂರ್ವ ಆಚಾರ್ಯವರ್ಗವನ್ನು ವೈಯಕ್ತಿಕವಾಗಿ ಕೀಳಾಗಿ ಪರಿಗಣಿಸಿದ್ದಿಲ್ಲ. ಅಗೌರವ ತೋರಿದ್ದೂ ಇಲ್ಲ. ದುಷ್ಟ ಅವತಾರವೆಂದು ಬಗೆದದ್ದೂ ಇಲ್ಲ. ತಾತ್ವಿಕ ಚೌಕಟ್ಟಿನೊಳಗೆ ವಿಚಾರ ಮಂಥನ ಮಾಡುವ ಮರ್ಯಾದೆ ತೋರಿದ್ದರು. ಪರಂಪರೆಯಲ್ಲಿ ಬಂದ ಅನ್ಯರು ಇದಕ್ಕೆ ವಿರುದ್ಧವಾಗಿ ಏನಾದರೂ ಹೇಳಿದ್ದರೆ ಅದರ ಹೊಣೆಗಾರಿಕೆ ಮಧ್ವರದ್ದಾಗದು.

ಸಂಶೋಧನೆಗಳು ಉತ್ತರೋತ್ತರವಾಗಿ ಬಲೀಯವಾಗಿ ಮೂಡಿಬರುವುದು ಸಹಜ. ಸ್ಥೂಲದಿಂದ ಸೂಕ್ಷ್ಮ ಸತ್ಯದತ್ತ ಅವುಗಳ ಪಯಣ ಸಾಗುತ್ತ ಇರುತ್ತದೆ. ಸತ್ಯವು ಸ್ಫುಟಗೊಳ್ಳುತ್ತ ನಡೆಯುತ್ತದೆ. ಮಧ್ವಸಿದ್ಧಾಂತವು ಹೀಗೆ ರೂಪುಗೊಂಡ ಸತ್ಯದರ್ಶನ ಎನ್ನುವ ಅರಿವು ಇರುವುದು ಅಗತ್ಯವೆನಿಸುತ್ತದೆ. ಸತ್ಯದರ್ಶನದ ದಾರಿಯಲ್ಲಿ ದುಡಿದ ಪೂರ್ವ ಆಚಾರ್ಯವರ್ಗವನ್ನು ಗೌರವದಿಂದ ನೋಡಿಕೊಳ್ಳಬೇಕಾಗುತ್ತದೆ. ಬ್ರಾಹ್ಮಣರ ಏಕತೆಯೂ ಇದರಿಂದ ಸಾಧ್ಯವಾಗುತ್ತದೆ.

ಭಾವುಕತೆ ಮಾಧ್ವರಿಗೆ ಮಾತ್ರ ಇರುವುದಲ್ಲ. ಇತರ ಪಂಥೀಯರಿಗೂ ಅದಿರುತ್ತದೆ, ಇರಬೇಕಾದುದು ಕೂಡ. ಪಂಥಾನುಸರಣೆ ಅನುವಂಶೀಯ - ಮಾಧ್ವನ ಮಗ ಮಾಧ್ವ ಅಷ್ಟೆ. ಮಧ್ವತತ್ವವೇ ಸರಿ ಎಂದು ಅರಿವಾದರೂ ಪರಂಪರೆ ಬಿಡಲಾಗದ ಸಾಮಾಜಿಕ ಒತ್ತಡ ಅಮಾಧ್ವರ ಮೇಲಿರುವುದನ್ನು ಮಾಧ್ವರು ಅರ್ಥಮಾಡಿಕೊಳ್ಳಬೇಕು.

ಪ್ರವಚನಕಾರರು ಮಧ್ವರ ಆಧ್ಯಾತ್ಮಿಕ ನಿಲುವುಗಳನ್ನು ಪಕ್ವ ಉದಾಹರಣೆಗಳನ್ನು ಕೊಟ್ಟು ನವಿರಾಗಿ ಸಮರ್ಥಿಸುವಾಗ ಭಾವುಕತೆ ಕೆರಳದು. ಚಿಂತನೆಗೂ ಅವಕಾಶ ಒದಗುವುದು. ವಿವಿಧ ಪಂಥೀಯರಲ್ಲಿ ವೈಷಮ್ಯ ಬೆಳೆಯದೆ ಸೌಹಾರ್ದತೆ ಸ್ಥಾಪಿತವಾಗಬಲ್ಲುದು.

ಪ್ರವಚನ ಶ್ರೋತೃಗಳಲ್ಲಿ ಎಲ್ಲ ಪಂಥೀಯರೂ ಇರಬಹುದು. ಎಲ್ಲ ಪಂಥೀಯರನ್ನೂ ಆಕರ್ಷಿಸುವ ಕೌಶಲವನ್ನೂ ತೋರಬೇಕು. ಪ್ರವಚನ ಯಜ್ಞವೇದಿಯಿಂದ ಶಾಖಕ್ಕಿಂತ ಅಧಿಕ ಬೆಳಕು ಇರುವ ಹೆಚ್ಚುಗಾರಿಕೆ ಮೆರೆಯಬೇಕು. ಆಗಲೇ ಅಂಧ ನಂಬಿಕೆಯ ಹುಚ್ಚುತನ ಮರೆಯಾಗುವುದು. ಮಧ್ವಾಶಯಕ್ಕೆ ವ್ಯತಿರಿಕ್ತವಾಗಿ ವರ್ತಿಸಿ ಅದನ್ನು ಮಧ್ವೇಶಾರ್ಪಣ ಮಾಡಿ

ಧನ್ಯತೆ ಸಾಧಿಸುವ ಪ್ರಸಂಗವೂ ಒದಗಿಬರದು.

ಆಚಾರ್ಯ ಮಧ್ವರನ್ನು ಗುರುಗಳೆಂದು ಸ್ವೀಕರಿಸುವ ಯಾವನೂ ಮಾಧ್ವನಾಗಬಹುದು. ಮಾಧ್ವನಾಗಲು ಜಾತಿ ಅಡ್ಡಿಯಾಗದು - ಜಾತಿ ಸಾಮಾಜಿಕ; ಮಧ್ವ ನಿಷ್ಠೆ ಆಧ್ಯಾತ್ಮಿಕ. ಜಾತಿ ಭೇದದ ಹೊರತಾಗಿಯೂ ವಾದಿರಾಜ ಶ್ರೀಪಾದರು ಮತ್ತು ಕನಕದಾಸರು ಆಧ್ಯಾತ್ಮಿಕವಾಗಿ ಒಂದಾಗಿದ್ದರು; ಮಾಧ್ವ - ಹೃದಯ ಶ್ರೀಮಂತಿಕೆ ತೋರಿದ್ದರು. ಮಾಧ್ವ ಬ್ರಾಹ್ಮಣರು ಈ ದಿಕ್ಕಿನಲ್ಲಿ ಚಿಂತಿಸಬೇಕಾದುದು ಸಕಾಲಿಕ.

ಮಧ್ವರು ಮಠ - ಸಂಸ್ಥಾನ ಪರಿಕಲ್ಪನೆಯಿಂದ ದೂರ ಉಳಿದಿದ್ದರು. ತನ್ನ 'ತತ್ವವಾದ' ಪ್ರಸರಣಕ್ಕೆಂದು ಆಸಕ್ತರಿಗೆ ಸನ್ಯಾಸ ದೀಕ್ಷೆ ಕೊಟ್ಟಿದ್ದರು. ಮುಂದಿನ ದಿನಗಳಲ್ಲಿ ಮಾಧ್ವ ಮಂದಿ ಮಠ - ಸಂಸ್ಥಾನಗಳನ್ನು ಅದ್ದೂರಿಯಾಗಿಯೇ ಕಟ್ಟಿ ಬೆಳೆಸಿದರು. ಜೊತೆಗೆ ಸಂಪತ್ತೂ ಕೂಡಿಬಂದು ವಿಪತ್ತಿಗೂ ದಾರಿಯಾಯಿತು.

ಸಂಪತ್ತು ಏಕತೆಯನ್ನು ಮತ್ತು ಅಖಂಡತೆಯನ್ನು ಕೊಂದುಬಿಡುವ ವಿಷ; ಸಂಘಟನೆಯನ್ನು ವಿಘಟನೆ ಮಾಡುವ ತಾಕತ್ತು ಅದರದ್ದು.

ಮಾಧ್ವರ ಅನೇಕ ಪೀಠಗಳು ಇಂದು ನಮ್ಮ ಮುಂದುಂಟು. ಪ್ರತಿಯೊಂದು ಪೀಠಕ್ಕೂ ನಿಷ್ಠೆ ತೋರುವ ಶಿಷ್ಯವರ್ಗವೂ ಉಂಟು; ತನ್ನದೆನ್ನುವ ಪರಂಪರೆ, ಸಂಪ್ರದಾಯ ಪದ್ಧತಿ ಅಭ್ಯಾಸಗಳೂ ಮೇಲುಂಟು. ಇವುಗಳ ಮೇಲಾಟ - ಕೀಳಾಟಗಳ ತಾಕಲಾಟವೂ ಜೋರಾಗಿಯೇ ಬಲಿಯುತ್ತಲುಂಟು. ಸಂಸ್ಥಾನ - ಸಂಪತ್ತು ಪ್ರಹರಿಯಾಗಿ ಬೆಂಗಾವಲು ಕೊಡುತ್ತಲೂ ಉಂಟು.

ಇಂದು ಮಧ್ವ ಪೀಠಗಳಿಗೆ 'ಅನನ್ಯತೆಯ ಜ್ವರ' - ಐಡೆಂಟಿಟಿ ಕ್ರೈಸಿಸ್ - ಬಾಧೆ ಪ್ರಾರಂಭವಾದಂತಿದೆ. ಪ್ರತಿಯೊಂದು ಪೀಠವೂ ಇತರ ಪೀಠಗಳಿಗಿಂತ ತಾನು ಅ(ಅನ್ಯ). ತನ್ನದೆಲ್ಲವೂ ಉ( ಉತ್ಕೃಷ್ಟ). ಉಳಿದದ್ದೆಲ್ಲವೂ (ಅಧ)ಮ ಎನ್ನುವ ಅ + ಉ + ಮ -ದ ಓಂಕಾರನಾದ ನಿಧಾನವಾಗಿ ತೇಲಿಬರುವುದನ್ನು ಕೇಳಿಸಿಕೊಂಡವರಿದ್ದಾರೆ. - ವಿನೀತಭಾವದ ಮಧ್ವವೈಭವ ಮೆರೆಯಬೇಕಾದಲ್ಲಿ ಮಾಧ್ವರ ವೈಭವೀಕರಣದ ಚಾಲನೆಯನ್ನೂ ಗ್ರಹಿಸಬಹುದಾಗಿದೆ.

ಅಂದರೆ ಮಧ್ವಪೀಠಗಳು ನಿಧಾನವಾಗಿ ಭಿನ್ನ ಭಿನ್ನ ಮಾಧ್ವಜಾತಿ ಕೇಂದ್ರಗಳಾಗುತ್ತಿವೆಯೇ? ಭಗವಂತನ ಮುಂದೆ ದ್ವೈತಿಗಳಾಗಬೇಕಾದ ಮಾಧ್ವರು ಪರಸ್ಪರ ದ್ವೈತಿಗಳಾಗುತ್ತಿರುವರೆ? ಮಾಧ್ವರು ಪರಸ್ಪರ ಅದ್ವೈತ ಭಾವ ತೋರಿದರೆ ಅದು ಹೆಚ್ಚು ಪ್ರಸ್ತುತ ಆಗದೇ? - ಎಲ್ಲ ಮಾಧ್ವರೂ ಯೋಚಿಸಬೇಕಾದ ವಿಚಾರವಿದು.

ತಪ್ತ ಮುದ್ರಾಧಾರಣೆ, ಮಧ್ವದೀಕ್ಷೆ ಅರ್ಥಾತ್ ವೈಷ್ಣವ ದೀಕ್ಷಾಸ್ವೀಕಾರದ ಅಥವಾ ಅವರ ಬಲವರ್ಧನೆಗಿರುವ ಸಂಸ್ಕಾರ. ಮಾಧ್ವ ಬ್ರಾಹ್ಮಣನು ಮಾಧ್ವಪೀಠದ ಬ್ರಾಹ್ಮಣ ಯತಿಗಳಿಂದ ತಪ್ತಮುದ್ರಾಧಾರಣ ಮಾಡಿಸಿಕೊಳ್ಳಬಹುದು. ಈಗ ಪೀಠ ನಿಷ್ಠೆಗೂ ಈ ಸಂಸ್ಕಾರಕ್ಕೂ ಥಳಕು ಹಾಕಲಾಗುತ್ತಿದೆ. ಒಂದು ಪೀಠದ ಶಿಷ್ಯರು ಇನ್ನೊಂದು ಪೀಠದ ಯತಿಗಳಿಂದ ಮುದ್ರಾಧಾರಣ ಮಾಡಿಸಿಕೊಳ್ಳುವುದು ನಿಷಿದ್ಧ ಎನ್ನುವ ಪರಿಕಲ್ಪನೆ ಮೊಳಕೆಯೊಡೆಯುತ್ತಿದೆಯಂತೆ!

ಇನ್ನೂ ಒಂದು ಹೆಜ್ಜೆ ಮುಂದಿಟ್ಟವರು ಇರುವರಂತೆ. ಒಂದು ಬ್ರಾಹ್ಮಣ ಮಾಧ್ವಪೀಠದ ಕಟ್ಟಾ ಶಿಷ್ಯರೆನಿಸಿಕೊಂಡವರು ಇನ್ನೊಂದು ಬ್ರಾಹ್ಮಣ ಮಾಧ್ವ ಮಠದ



ಯತಿಗಳಿಂದ 'ತೀರ್ಥ ಪ್ರಸಾದ' ಸ್ವೀಕರಿಸದ ವ್ರತ ಪಾಲನೆಗೆ ಮುಂದಾಗಿರುವರಂತೆ! ಏನು ವ್ರತವೋ ಏನು ಮಡಿಯೋ ಒಂದೂ ಅರ್ಥವಾಗುತ್ತಿಲ್ಲ!

ಆಚಾರ್ಯ ಮಧ್ವರ ಅನೇಕ ಕಾರ್ಯಗಳು ಪವಾಡ ಸದೃಶವಾಗಿ ಕಂಡು ಬಂದುದು ನಿಜ; ಅತಿಮಾನುಷ ಪ್ರತಿಭಾಸಂಪನ್ನತೆ ಪ್ರಕಟವಾದದ್ದೂ ಅಷ್ಟೇ ನಿಜ. ಈ ವಿಚಾರಗಳನ್ನೇ ಮಾಧ್ವರು ವೈಭವೀಕರಿಸುತ್ತಿದ್ದರೆ ಮಧ್ವರ ಅದೆಷ್ಟೋ ವಿಚಾರಗಳು ಬೆಳಕುಕಾಣುವುದೆಂತು? ಜಗದಗಲದಲ್ಲಿ ಮಧ್ವ ವೈಭವ ಹರಡುವುದೆಂತು?

ಆಚಾರ್ಯ ಮಧ್ವರ ವರ್ಣಕಲ್ಪನೆ, ಕರ್ಮಕಲ್ಪನೆ, ಭಕ್ತಿಯ ಯುಕ್ತಿ, ಸಾಮಾಜಿಕ ಕಾಳಜಿ, ವಾಸ್ತವತೆಯ ಕುರಿತ ನಿಲುವು, ಭೌತ ವೈಜ್ಞಾನಿಕ ಪರಿಕಲ್ಪನೆಗಳು, ನಂಬಿಕೆಗಳ ಕುರಿತ ನಿಲುವು ಇತ್ಯಾದಿಗಳು ಇನ್ನೂ ಸಾಮಾನ್ಯ ಜನರನ್ನು ಮುಟ್ಟಿಲ್ಲ. ಪ್ರವಚನಕಾರರು ಈ ದಿಶೆಯಲ್ಲಿ ಹೆಚ್ಚು ಹೆಚ್ಚು ಜನರ ಗಮನ ಸೆಳೆಯುವ ಜ್ಞಾನ ಯಜ್ಞಕ್ಕೆ ಮುಂದಾಗಬೇಕು. ಆಚಾರ್ಯರ ಶ್ರೇಷ್ಠತೆಯನ್ನು ಈ ಮೂಲಕ ಮೆರೆಯಬೇಕು.

ಮಧ್ವ ಸಿದ್ಧಾಂತ ಪ್ರಸರಣ ಶಿಕ್ಷಣ ಕೇಂದ್ರಗಳು ಸಾಕಷ್ಟಿವೆ. ಮಠ - ಮಂದಿರಗಳಲ್ಲೂ ಮಧ್ವ ದರ್ಶನ ಬೋಧಿಸಲಾಗುತ್ತಿವೆ. ಬೆಳೆಯ ಸಿರಿ ಮೊಳಕೆಯಲ್ಲಿ. ಮನೋವೈಶಾಲ್ಯ ತಳಹದಿಯಲ್ಲಿ ಇಲ್ಲಿ ಎಳೆಯರ ಪ್ರಶಿಕ್ಷಣ ನಡೆಯುವಂತಾಗಬೇಕು. ವಿಶಾಲ ಮನೋಭಾವದ ಮಾಧ್ವ ವಿದ್ವಾಂಸರು ಬೆಳೆದು ಬರಬೇಕು. ಮುಂದಿನ ದಿನಗಳಲ್ಲಿ ಮಾಧ್ವರ ಹೃದಯ ಶ್ರೀಮಂತಿಕೆಯ ಕಂಪು ಎಲ್ಲ ಮಾಧ್ವ ಹಾಗೂ ಅಮಾಧ್ವರನ್ನು ಆಕರ್ಷಿಸುವಂತಾಗಬೇಕು. ಇದಕ್ಕೆಲ್ಲ ಬೇಕು ಮಧ್ವಾನುಗ್ರಹ. ★

**ಪರಮಪೂಜ್ಯ ಶ್ರೀ ಪಲಿಮಾರು ಮಠಾಧೀಶರಾದ**
**ಶ್ರೀ ಶ್ರೀ ವಿದ್ಯಾಧೀಶ ತೀರ್ಥ ಶ್ರೀಪಾದರೊಂದಿಗೆ**

# ಉತ್ತರ ಭಾರತ ತೀರ್ಥಕ್ಷೇತ್ರ ಪ್ರವಾಸ

**II CLASS RAILWAY SLEEPER COACH ಮತ್ತು ಬಸ್ಸಿನಲ್ಲಿ**
**ಜೂನ್ 24ರಿಂದ ಜುಲೈ 13,2005ರ ತನಕ (19 ದಿನಗಳು)**

**ಸೀಟು 1ಕ್ಕೆ 12,000/-**

**ಇಂದೇ ಅಡ್ವಾನ್ಸ್ 4 ಸಾವಿರ ನೀಡಿ ತಮ್ಮ ಸೀಟುಗಳನ್ನು ಕಾದಿರಿಸಿರಿ**
**(80 ಜನರಿಗೆ ಮಾತ್ರ ಅವಕಾಶ, ಊಟ ವಸತಿ ಎಲ್ಲಾ ಸೇರಿ)**

**ಸಂದರ್ಶಿಸುವ ಸ್ಥಳಗಳು :** ಉಜ್ಜಯಿನಿ, ಮಥುರಾ, ವೃಂದಾವನ, ದಿಲ್ಲಿ, ಹರಿದ್ವಾರ, ಹೃಷಿಕೇಶ, ಬದರಿನಾಥ, ಅಯೋಧ್ಯ, ಪ್ರಯಾಗ, ಚಿತ್ರಕೂಟ, ಕಾಶಿ, ಗಯಾ, ಕಲ್ಕತ್ತ, ಗಂಗಾ ಸಾಗರ ಸಂಗಮ, ಭುವನೇಶ್ವರ, ಪುರಿ ಜಗನ್ನಾಥ, ರಾಜಮಂಡ್ರಿ **(ಬ್ರಾಹ್ಮಣರಿಗೆ ಮಾತ್ರ ಅವಕಾಶ)**

**ಹೆಚ್ಚಿನ ವಿವರಗಳಿಗೆ**

Ph.: 2529740 (O)
2542425 (R)

**ಬಿ. ಮಧುಸೂದನ ಆಚಾರ್ಯ**
ಶ್ರೀ ಪಲಿಮಾರು ಮಠ, ಉಡುಪಿ - 576 101

**ಸಂಘಟಕರ ತೀರ್ಮಾನವೇ ಅಂತಿಮ**



# ಈಶಾವಾಸ್ಯೋಪನಿಷತ್

( ಆಚಾರ್ಯ ಮಧ್ವರ ಭಾಷ್ಯಾನುಸಾರಿಯಾಗಿ)

ಲೇಖಾಂಕ ೧

ಬಿಂದು ಮಾಧವಾಚಾರ್ಯ ನಾಗಸಂಪಿಗೆ, ಬಾಗಲಕೋಟೆ

## ಪೂರ್ವಪೀಠಿಕೆ

ವೇದವು ಅನಾದಿಯಾದುದು. ಪುರುಷಕೃತವಲ್ಲ. ಸೃಷ್ಟಿಕಾಲದಲ್ಲಿ ತನ್ನ ಅನಾದಿಯಾದ ಬುದ್ಧಿಯಲ್ಲಿರತಕ್ಕ ವೇದವನ್ನು ಭಗವಂತನು ತನ್ನ ಮಗನಾದ ಚತುರ್ಮುಖ ಬ್ರಹ್ಮನಿಗೆ ಉಪದೇಶಿಸಿದ. यो ब्रह्माणं विदधाति पूर्वम् । ಆ ಚತುರ್ಮುಖನಿಂದ ವೇದವು ಜಗತ್ತಿಗೆ ದೊರೆಯಿತು. यावत् ब्रह्मविष्ठितं तावतीवाक् ಎನ್ನುವಂತೆ ವೇದವು ಬ್ರಹ್ಮನಷ್ಟೇ ಅನಾದಿಯಾಗಿದೆ. ಇಂತಹ ವೇದಗಳಿಗೆ ಶ್ರುತಿಯೆಂದು ಹೆಸರು. ವೇದಗಳನ್ನು ಅನಾದಿಕಾಲದಿಂದ ಕೇಳಲಾಗಿದೆಯೇ ಹೊರತು ಮಾಡಲಾಗಿಲ್ಲ. ಋಷಿಗಳು ಹಿಂದೆ ಇದ್ದ ವೇದವನ್ನು ತಮ್ಮ ತಪೋಬಲದಿಂದ ಕಂಡರು. ಆದ್ದರಿಂದ ಅವರು ದ್ರಷ್ಟಾರರು. ಇಂತಹ ಮಂತ್ರಕ್ಕೆ ಇವನು ಋಷಿ ಎಂದು ಹೇಳುವುದೂ ಈ ಅಭಿಪ್ರಾಯದಲ್ಲಿಯೇ. ಕೆಲವೊಂದು ಮಂತ್ರಕ್ಕೆ ಅನೇಕರು ಋಷಿಗಳಿರುವುದು ಕಂಡು ಬಂದಿದೆ. ಆದ್ದರಿಂದ ಋಷಿಗಳು ಮಂತ್ರ ದ್ರಷ್ಟಾರರೇ ವಿನಹ ಮಂತ್ರ ಕರ್ತರಲ್ಲ.

ಪುರುಷನಿಂದ ಮಾಡಲ್ಪಟ್ಟ ಇತರ ಶಾಸ್ತ್ರಗಳಿಗೆ ಆದಿ ಅಂತ್ಯಗಳಿವೆ. ಆದರೆ ಅಪೌರುಷೇಯವಾದ ವೇದಗಳಿಗೆ ಆದಿಯೂ ಇಲ್ಲ, ಅಂತ್ಯವೂ ಇಲ್ಲ. वेदशास्त्रात् परं नास्ति न दैवं केशवात्परम् । ಎನ್ನುವಂತೆ ವೇದ ಶಾಸ್ತ್ರಗಳಿಗಿಂತ ಮಿಗಿಲಾದ ಶಾಸ್ತ್ರವಿಲ್ಲ. ಕೇಶವನಿಗಿಂತ ಮಿಗಿಲಾದ ದೇವರಿಲ್ಲ. ಇಂತಹ ವೇದದ ಒಂದು ಭಾಗವೇ ಈಶಾವಾಶ್ಯೋಪನಿಷತ್ತು. ಈಶ್ವರನ ಸರ್ವವ್ಯಾಪ್ತಿತ್ವ, ಜೀವರ ಕರ್ತವ್ಯ ಕರ್ಮ, ವಿದ್ಯೆ - ಅವಿದ್ಯೆಗಳ ನಿರೂಪಣೆ ಇಲ್ಲಿ ಸುಂದರವಾಗಿ ನಿರೂಪಿತವಾಗಿದೆ.

## ಈಶಾವಾಶ್ಯೋಪನಿಷತ್

ಋಷಿ - ಸ್ವಾಯಂ ಭುವ ಮನು.

ದೇವತೆ - ಯಜ್ಞನಾಮಕ ಪರಮಾತ್ಮ

ಛಂದಸ್ಸು - ಅನುಷ್ಟುಪ್, ತ್ರಿಷ್ಟುಪ್, ಜಗತೀ

ವಿಷಯ - ಪರಮಾತ್ಮ

ಪ್ರಧಾನ ಪ್ರಯೋಜನ - ಮೋಕ್ಷ

ಅಧಿಕಾರಿಗಳು - ಮನುಮೊದಲಾದವರು



## ಈ ಉಪನಿಷತ್ತಿನ ಹಿನ್ನೆಲೆ :

ಈ ಉಪನಿಷತ್ತು ಶುಕ್ಲ ಯಜುರ್ವೇದದಲ್ಲಿ ಬಂದಿದೆ. ಸ್ವಾಯಂಭುವ ಮನುವು ಈಶಾವಾಶ್ಯಾದಿ ಮಂತ್ರಗಳಿಂದ ಯಜ್ಞನಾಮಕ ಪರಮಾತ್ಮನನ್ನು ಸ್ತುತಿಸಿದ್ದರಿಂದ ಮತ್ತು ಈ ಉಪನಿಷತ್ತಿನಿಂದ ಪ್ರತಿಪಾದ್ಯನಾದ ದೇವತೆ ಯಜ್ಞನಾಮಕ ಪರಮಾತ್ಮನಾದ್ದರಿಂದ ಈ ಮಂತ್ರಕ್ಕೆ ಯಾಜ್ಞೀಯ ಮಂತ್ರೋಪನಿಷತ್ತು ಎಂದು ಹೆಸರು. ಸೂರ್ಯಾಂತರ್ಗತ ನಾರಾಯಣನಿಂದ ಉಪದೇಶ ಪಡೆದ ಯಾಜ್ಞವಲ್ಕ್ಯರಿಂದ ಕಣ್ವಋಷಿಗಳು ಉಪದೇಶ ಪಡೆದು ಸಿದ್ಧಿಸಿಕೊಂಡದ್ದರಿಂದ ಇದು ಕಾಣ್ವೋಪನಿಷತ್ತೂ ಹೌದು. ಈಶಾವಾಶ್ಯಂ ಎಂಬ ಪದದಿಂದ ಆರಂಭವಾಗುವುದರಿಂದ ಇದು 'ಈಶಾವಾಶ್ಯೋಪನಿಷತ್ತು' ಎಂದು ಪ್ರಸಿದ್ಧವಾಗಿದೆ.

ಸಮಸ್ತ ವೇದ ಮಂತ್ರಗಳಿಗೂ ಮಂತ್ರದ್ರಷ್ಟಾರರಾದ ಋಷಿ, ಛಂದಸ್ಸು, ಪ್ರತಿಪಾದ್ಯದೇವತೆ ಇವರನ್ನೂ ತಿಳಿಯದೇ ನಡೆಸುವ ಕರ್ಮ ಹಾಗೂ ಅಧ್ಯಯನ ಫಲಿಸುವುದಿಲ್ಲವಾದ್ದರಿಂದ ಈ ತನಕ ಆ ವಿವರ ತಿಳಿದದ್ದಾಯಿತು.

## ಉಪನಿಷತ್ತಿನ ಆವಿರ್ಭಾವದ ಹಿನ್ನೆಲೆ

ಚತುರ್ಮುಖಬ್ರಹ್ಮದೇವರ ಮಗನಾದ ಸ್ವಾಯಂಭುವ ಮನುವು ಏಕಾಗ್ರಮನಸ್ಸಿನಿಂದ ತನ್ನ ಮಗಳು ಆಕೂತಿಯ ಮಗನಾದ ಷಡ್ಗುಣೈಶ್ವರ್ಯ ಸಂಪನ್ನನಾದ ಯಜ್ಞ ನಾಮಕ ಶ್ರೀಹರಿಯನ್ನು ಸ್ತುತಿಸಿದನು. ಅದನ್ನು ಸಹಿಸದ ಅಸುರರು ಅವನನ್ನು ಕೊಂದು ತಿನ್ನಲು ಬಂದರು. ರುದ್ರದೇವರ ವರಬಲದಿಂದ ಅವಧ್ಯರಾದ ಅಂಥವರ ಜೊತೆ ಹೋರಾಟ ಮಾಡಿ ಆತ್ಮರಕ್ಷಣೆಯ ರಾಜಸಮಾರ್ಗವನ್ನು ಬಿಟ್ಟು, ಎಲ್ಲದರ ಹೊಣೆ ಹೊತ್ತ ಭಗವಂತನಿಗೆ ಮೊರೆಯಾಗುವುದೆಂದು ಭಾವಿಸಿ ಶರಣಾಗತನಾದ. ಆಗ ಆರ್ಷದರ್ಶನದಿಂದ ಪೂತನಾದ ಅವನ ಮುಖದಿಂದ ಯಾಜ್ಞೀಯಮಂತ್ರಗಳು ಹೊರಹೊಮ್ಮಿದವು. ಮಂತ್ರದಿಂದ ಪ್ರಸನ್ನನಾದ ಭಗವಂತ ಆಸುರೀಶಕ್ತಿಯನ್ನು ಸಂಹರಿಸಿ ಮನುವನ್ನು ರಕ್ಷಿಸಿ ಅನುಗ್ರಹಿಸಿದ. ಇದಿಷ್ಟು ಓದುವ ಮುನ್ನ ತಿಳಿಯಬೇಕಾದುದು. ಇನ್ನು ತಿಳಿಯಬೇಕಾದುದನ್ನು ಮುಂದಿನ ಸಂಚಿಕೆಯಲ್ಲಿ ನೋಡೋಣ.




ಕಲ್ಮಂಜೆ ರಾಮದಾಸ ಭಟ್
ಮಣಿಪುರ ಪೋಸ್ಟ್,
ಉಡುಪಿ - 576 120
ದೂರವಾಣಿ : 2547423

'ಕಾಮಾಲೆ' ಖಾಯಿಲೆಯೇ?

ನೀವು ಅಥವಾ ನಿಮ್ಮ ಆಪ್ತೇಷ್ಟರು ಕಾಮಾಲೆ ಅಥವಾ ಸರ್ಪಸುತ್ತುವಿನಿಂದ ಪೀಡಿತರಾಗಿದ್ದಾರಾ? ಹಾಗಾದರೆ ಇಲ್ಲೊಬ್ಬರು ವೃತ್ತಿಯಲ್ಲಿ ವೈದ್ಯರಲ್ಲದ ಸಿದ್ಧಹಸ್ತವೈದ್ಯರಿದ್ದಾರೆ.

ಆರು ದಿನ ಮೂರು ಹೊತ್ತಿನ ಮದ್ದಿನಲ್ಲಿಯೇ ಅತ್ಯಾಶ್ಚರ್ಯಕರವಾಗಿ ಗುಣಪಡಿಸುವ ಇವರ ಮದ್ದಿನ ಚಮತ್ಕಾರದಿಂದ 100 ಪ್ರತಿಶತ ಗುಣಪಡಿಸಿದ ದಾಖಲೆ ಇವರಲ್ಲಿದೆ. ದುಡ್ಡಿನ ಬಲ ಇಲ್ಲಿ ಬೇಕೆಂದಿಲ್ಲ. ಶ್ರದ್ಧೆ - ನಂಬಿಕೆ ನಿಮಗಿದ್ದರೆ ಸಾಕು. ಬಳಲಿದವರನ್ನು ಗುಣಪಡಿಸು ವುದೇ ದೇವರ ಸೇವೆ ಎನ್ನುವ ಭಾವನೆ ಇವರದು.

ಫೋನ್ ಮಾಡಿ ವಿಚಾರಿಸಿ ಸಂಪರ್ಕಿಸಿರಿ.